ಬುಧವಾರ, ನವೆಂಬರ್ 10, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 311 | ಪುಟ 16

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಮೆಟಾ ಎಂಬುದು ಗ್ರೀಕ್‌ನ ಪದ, ವರ್ಸ್ ಎಂಬುದು ಯೂನಿವರ್ಸ್‌ನ ಹ್ರಸ್ವಸ್ವರೂಪ.



ಆಳ–ಅಗಲ ನಗದು ಬಳಕೆ ಜಿಗಿತ

ರಫೇಲ್ ಮಧ್ಯವರ್ತಿಗೆ ಲಂಚ ಕಾಂಗ್ರೆಸ್–ಬಿಜೆಪಿ ವಾಕ್ಸಮರ 6

'ಬಿಟ್ ಕಾಯಿನ್' ಕಿತ್ತುಕೊಳ್ಳಲು ಅಪಹರಣ! 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,433 ▼	18,044 ▼	₹49,700 (ಬೆಂಗಳೂರು)	₹66,600 (ಬೆಂಗಳೂರು)	74.02 ▲

ವಿಧಾನಪರಿಷತ್ತಿನ 25 ಸ್ಥಾನಗಳಿಗೆ ಚುನಾವಣೆ ಘೋಷಣೆ • ಪಕ್ಷಗಳ ರಣತಂತ್ರ ಆರಂಭ

ಡಿ.10: ಮೇಲ್ಮನೆಗೆ ಹಣಾಹಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಮಂಡಲದ 'ಮೇಲ್ಮನೆ'ಯಲ್ಲಿ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಮೂರು ರಾಜಕೀಯ ಪಕ್ಷಗಳು ರಣತಂತ್ರ ಹೆಣೆಯುತ್ತಿರುವ ಬೆನ್ನಲ್ಲೇ, 20 ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿನ 25 ಸ್ಥಾನಗಳಿಗೆ ನಡೆಯುವ ದ್ವೈವಾರ್ಷಿಕ ಚುನಾವಣೆ ಘೋಷಣೆಯಾಗಿದೆ. ಡಿ.10 ರಂದು ಮತದಾನ ನಡೆಯಲಿದೆ.

25 ಸದಸ್ಯರ ಅವಧಿ 2022 ರ ಜನವರಿ 5 ಕ್ಕೆ ಅಂತ್ಯಗೊಳ್ಳಲಿದ್ದು, ಹೊಸಬರ ಆಯ್ಕೆಗಾಗಿ ಚುನಾವಣೆ ನಡೆಯಲಿದೆ. ಕೋವಿಡ್–19 ಮಾರ್ಗ-ಸೂಚಿಯನ್ನು ಅನುಸರಿಸಿ ಚುನಾವಣೆ ಪ್ರಕ್ರಿಯೆ ನಡೆಸುವುದಾಗಿ ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ. ಚುನಾವಣೆ ನಡೆಯುವ ಜಿಲ್ಲೆಗಳಲ್ಲಿ ಮಂಗಳವಾರದಿಂದಲೇ ಚುನಾವಣಾ ನೀತಿ ಸಂಹಿತೆ ಜಾರಿಗೆ ಬರಲಿದ್ದು, ಸರ್ಕಾರ ಯಾವುದೇ ಘೋಷಣೆಗಳನ್ನು ಹೊರಡಿಸುವಂತಿಲ್ಲ.

ಚುನಾವಣಾ ಆಯೋಗದ ಆದೇಶ ಹೊರ ಬಿದ್ದ ಬೆನ್ನಲ್ಲೇ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್‌ಗಳಲ್ಲಿ ಬಿರುಸಿನ ಚಟುವಟಿಕೆಗಳು ಆರಂಭವಾಗಿವೆ. ಪ್ರಸ್ತುತ ಪರಿಷತ್‌ನಲ್ಲಿ ಬಿಜೆಪಿಗೆ ಬಹುಮತವಿಲ್ಲ. ಹಲವು ಮಸೂದೆಗಳಿಗೆ ಅಂಗೀಕಾರ ಪಡೆಯಲು ಜೆಡಿಎಸ್ ಜತೆ ಹೊಂದಾಣಿಕೆ ಅನಿವಾರ್ಯವಾಗಿತ್ತು. 25 ಸ್ಥಾನಗಳಲ್ಲಿ ಬಿಜೆಪಿ ಹೆಚ್ಚಿನ ಸ್ಥಾನಗಳನ್ನು ಗೆದ್ದರೆ, ಬಹುಮತ ಪಡೆಯಲು ಸಾಧ್ಯವಿದೆ. ಬಿಜೆಪಿ 33 (1 ಪಕ್ಷೇತರ ಸೇರಿ), ಕಾಂಗ್ರೆಸ್ 29 ಮತ್ತು ಜೆಡಿಎಸ್ 12 ಸ್ಥಾನಗಳನ್ನು ಹೊಂದಿವೆ. ಮೇಲ್ಮನೆಯಲ್ಲಿ ಬಹುಮತಕ್ಕೆ ಸಭಾಪತಿ ಹೊರತುಪಡಿಸಿ 38 ಸ್ಥಾನಗಳ ಅಗತ್ಯವಿದೆ.

ವಿಧಾನಪರಿಷತ್ ಉಪಸಭಾಪತಿ ಎಂ.ಕೆ.ಪ್ರಾಣೇಶ್, ಸಮಾಜ ಕಲ್ಯಾಣ ಸಚಿವ ಹಾಗೂ ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಪರಿಷತ್‌ನ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ, ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿ ಮಠ ಮತ್ತು ವಿರೋಧ ಪಕ್ಷದ ಸಚೇತಕ ಎಂ. ನಾರಾಯಣ ಸ್ವಾಮಿ ಅವರು ತಮ್ಮ ಸ್ಥಾನದಲ್ಲಿ ಉಳಿಸಿಕೊಳ್ಳಬೇಕಾದ-ರೆ ಗೆಲ್ಲಲೇಬೇಕಾದ ಅಗ್ನಿಪರೀಕ್ಷೆ ಎದುರಾಗಿದೆ.

ಕಳೆದ ಬಾರಿ 25 ಸ್ಥಾನಗಳಲ್ಲಿ 7 ಸ್ಥಾನಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ವ್ಯವಸ್ಥಿತ ಕಾರ್ಯತಂತ್ರ ರೂಪಿಸಿದೆ. ಇದಕ್ಕಾಗಿ ನಾಲ್ಕು ತಂಡಗಳಲ್ಲಿ 'ಜನಸ್ವರಾಜ್ ಸಮಾವೇಶ'ವನ್ನು ಆರಂಭಿಸಲು ತೀರ್ಮಾನಿಸಿದೆ.


6ನೇ ಪುಟ ನೋಡಿ

ಯಾರಿಗೆ ಮತದಾನದ ಅಧಿಕಾರ

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಸದಸ್ಯರು ಮತದಾರರಾಗಿದ್ದು, ಇವರಲ್ಲಿ ಎಷ್ಟು ಮಂದಿ ಸದಸ್ಯರು ಮತದಾನಕ್ಕೆ ಅರ್ಹತೆ ಹೊಂದಿದ್ದಾರೆ ಎಂಬುದರ ಬಗ್ಗೆ ಇನ್ನು ಎರಡು ದಿನಗಳಲ್ಲಿ ಮತದಾರರ ಕರಡು ಪ್ರಕಟಿಸಲಾಗುವುದು. ಆಗಲೇ ಮತದಾರರ ನಿಖರ ಮಾಹಿತಿ ಸಿಗಲಿದೆ ಎಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯತ್ವದ ಅವಧಿ ಮುಗಿದಿದ್ದರೆ ಅವರಿಗೆ ಮತದಾನದ ಹಕ್ಕು ಇರುವುದಿಲ್ಲ. ಚುನಾವಣೆ ನಡೆಯುವ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅರ್ಹ ಮತದಾರರ ಕರಡು ಪ್ರಕಟಿಸುವರು ಎಂದರು.

ಬಿಬಿಎಂಪಿಯ 198, ತಾಲ್ಲೂಕು ಪಂಚಾಯಿತಿ 3,285 ಹಾಗೂ ಜಿಲ್ಲಾ ಪಂಚಾಯಿತಿ-1,191 ಸದಸ್ಯರ ಅವಧಿ ಮುಗಿದಿದ್ದು, ಮತ ಚಲಾವಣೆ ಹಕ್ಕು ಕಳೆದುಕೊಳ್ಳಲಿದ್ದಾರೆ.



ತೆರವಾಗುವ ಸ್ಥಾನಗಳು | ಮೇಲ್ಮನೆಯಲ್ಲಿ ಪಕ್ಷಗಳ ಬಲಾಬಲ

- ಚುನಾವಣಾ ಅಧಿಸೂಚನೆ: ನ.16
- ನಾಮಪತ್ರ ಸಲ್ಲಿಸಲು ಕೊನೆ ದಿನ: ನ.23
- ನಾಮಪತ್ರಗಳ ಪರಿಶೀಲನೆ:ನ.24
- ನಾಮಪತ್ರ ಹಿಂದಕ್ಕೆ ಪಡೆಯಲು ಕಡೆ ದಿನ:ನ.26
- ಮತದಾನ:ಡಿ.10 (ಬೆಳಿಗ್ಗೆ 8 ರಿಂದ ಸಂಜೆ 4 ರವರೆಗೆ)
- ಮತಗಳ ಎಣಿಕೆ: ಡಿ.14

ಆಶಿಶ್ ಬಂದೂಕಿನಿಂದಲೇ ಗುಂಡು

ಲಖಿಂಪುರ–ಖೇರಿ ಪ್ರಕರಣ: ವಿಧಿ ವಿಜ್ಞಾನ ವರದಿಯಲ್ಲಿ ದೃಢ

ಪ್ರಜಾವಾಣಿ ವಾರ್ತೆ

ಲಖನೌ: ಲಖಿಂಪುರ-ಖೇರಿಯಲ್ಲಿ ರೈತರು ಸೇರಿ ಎಂಟು ಮಂದಿಯ ಹತ್ಯೆ ಪ್ರಕರಣವು ಹೊಸ ತಿರುವು ಪಡೆದಿದೆ. ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರ ಬಂದೂಕಿನಿಂದಲೇ ಹಿಂಸಾಚಾರ ನಡೆದ ದಿನ ಗುಂಡು ಹಾರಿಸಲಾಗಿದೆ ಎಂಬುದನ್ನು ವಿಧಿ ವಿಜ್ಞಾನ ವರದಿಯು ದೃಢಪಡಿಸಿದೆ. ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರನ್ನು ಹತ್ಯೆ ಮಾಡಿದ ಆರೋಪ ಆಶಿಶ್ ಮತ್ತು ಅವರ ಗೆಳೆಯ ಅಂಕಿತ್ ದಾಸ್ ಮೇಲೆ ಇದೆ.

ಈ ಇಬ್ಬರೂ ಈಗ ಬಂಧನದ-ಲ್ಲಿದ್ದಾರೆ. ಪರವಾನಗಿ ಇರುವ ತಮ್ಮ ಬಂದೂಕಿನಿಂದ ಗುಂಡು ಹಾರಿಸಿಲ್ಲ ಎಂದು ಆಶಿಶ್ ತನಿಖೆಯ ಸಂದರ್ಭದಲ್ಲಿ ಹೇಳಿದ್ದರು.

'ಆಶಿಶ್ ಅವರ ಬಂದೂಕು ಮತ್ತು ಅಂಕಿತ್ ಅವರ ಪಿಸ್ತೂಲ್‌ನಿಂದ ಗುಂಡು ಹಾರಾಟ ನಡೆಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಲಖಿಂಪುರ-ಖೇರಿಯಲ್ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ತನಿಖೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್
- ಪ್ರಕರಣದಲ್ಲಿ ಈವರೆಗೆ 17 ಮಂದಿ ಬಂಧನ

ಆಶಿಶ್ ಮತ್ತು ಅಂಕಿತ್ ಅವರೇ ಗುಂಡು ಹಾರಿಸಿದ್ದಾರೆ ಎಂದು ರೈತರು ಆರೋಪಿಸಿದ್ದರು.

ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಪ್ರತಿಭಟನೆಯನ್ನು ರೈತರು ನಿಲ್ಲಿಸದಿದ್ದರೆ ಗಂಭೀರ ಪರಿಣಾಮಗ-ಳನ್ನು ಎದುರಿಸಬೇಕಾದೀತು ಎಂದು ಅಜಯ್ ಮಿಶ್ರಾ ಅವರು ಹೇಳಿಕೆ ನೀಡಿದ್ದರು. ಅದರ ವಿರುದ್ಧ ಲಖಿಂಪುರ–ಖೇರಿಯ ತಿಕೋನಿಯಾ ಎಂಬಲ್ಲಿ ಕಳೆದ ತಿಂಗಳು ನೂರಾರು ರೈತರು ಪ್ರತಿಭಟನೆ ನಡೆಸಿದ್ದರು. ಈ ಸಂದರ್ಭದಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಲಾಗಿತ್ತು. ಅದರಲ್ಲಿ ನಾಲ್ವರು ಮೃತಪಟ್ಟಿದ್ದ-ರು. ಬಳಿಕ ನಡೆದ ಹಿಂಸಾಚಾರದಲ್ಲಿ ನಾಲ್ವರು ಬಲಿಯಾಗಿದ್ದರು.

ಪ್ರಕರಣಕ್ಕೆ ಸಂಬಂಧಿಸಿ ಎರಡು ಎಫ್‌ಐಆರ್ ದಾಖಲಾಗಿವೆ. ಆಶಿಶ್, ಅಂಕಿತ್ ಮತ್ತು ಇತರರ ವಿರುದ್ಧ ರೈತರು ಎಫ್‌ಐಆರ್ ದಾಖಲಿಸಿದ್ದಾರೆ. ಅಪರಿಚಿತ ವ್ಯಕ್ತಿಗಳ ವಿರುದ್ಧ ಬಿಜೆಪಿ ಕಾರ್ಯಕ-ರ್ತರೊಬ್ಬರು ದೂರು ದಾಖಲಿಸಿದ್ದಾರೆ. ಪ್ರಕರಣದಲ್ಲಿ ಈವರೆಗೆ 17 ಮಂದಿಯನ್ನು ಬಂಧಿಸಲಾಗಿದೆ.

ರೈತರ ಮೇಲೆ ಹರಿದ ವಾಹನದಲ್ಲಿ ತಾವು ಇರಲಿಲ್ಲ ಎಂದು ಆಶಿಶ್ ತನಿಖೆಯ ವೇಳೆ ಹೇಳಿದ್ದರು. ಅಜಯ್ ಮಿಶ್ರಾ ಅವರೂ ಇದನ್ನು ಪುನರುಚ್ಚರಿಸಿ-ದ್ದಾರೆ. ಆದರೆ, ಎಸ್‌ಯುವಿಯಲ್ಲಿ ಆಶಿಶ್ ಇದ್ದರು ಎಂದು ರೈತರು ಹೇಳಿದ್ದಾರೆ.

ಹಿಂಸಾಚಾರದ ಬಳಿಕ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಅಜಯ್ ಮಿಶ್ರಾ ಅವರು ರಾಜೀನಾಮೆ ಕೊಡಬೇಕು ಎಂಬ ಆಗ್ರಹ ಬಲವಾಗಿ ಕೇಳಿ ಬಂದಿತ್ತು. ಆದರೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜತೆಗೆ ಅಜಯ್ ಅವರು ಇತ್ತೀಚೆಗೆ ವೇದಿಕೆ ಹಂಚಿಕೊಂಡಿದ್ದರು.

ಪ್ರಕರಣದ ತನಿಖೆಯು ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಸಮಾಧಾನ ವ್ಯಕ್ತಪಡಿಸಿತ್ತು.

ಒಳ ಪುಟಗಳು



'ಅಭಿ'ಮಾನದ ಭೋಜನಕ್ಕೆ ಜನಸಾಗರ 6

ನಕ್ಸಲ್ ಮುಖಂಡರಾದ 'ಬಿಜಿಕೆ', ಸಾವಿತ್ರಿ ಬಂಧನ 3

ಒನಕೆ ಓಬವ್ವ ಜಯಂತಿಗೆ ಆದೇಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಒನಕೆ ಓಬವ್ವ ಜಯಂತಿಯನ್ನು ನ.11ರಂದು ರಾಜ್ಯದಾದ್ಯಂತ ಆಚರಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

'ಚಿತ್ರದುರ್ಗದ ಇತಿಹಾಸದಲ್ಲಿ ಒನಕೆ ಓಬವ್ವಳ ಹೆಸರು ಮರೆಯಲು ಸಾಧ್ಯವಿಲ್ಲ. ಕಿತ್ತೂರು ರಾಣಿ ಚನ್ನಮ್ಮ, ರಾಣಿ ಅಬ್ಬಕ್ಕರ ಸಾಲಿನಲ್ಲಿ ಓಬವ್ವ ಒಬ್ಬರು ಎಂದು ಪರಿಗಣಿಸಲಾಗಿದೆ. ಓಬವ್ವಳ ಜನ್ಮದಿನವಾದ ನ.11ರಂದು ಜಯಂತಿ ಆಚರಣೆ ಮಾಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಪದ್ಮ' ಪ್ರಶಸ್ತಿ ಪ್ರದಾನ

ನವದೆಹಲಿ: ವಿವಿಧ ಕ್ಷೇತ್ರಗಳ ಸಾಧಕರ ವಿಶಿಷ್ಟ ಸೇವೆ ಪರಿಗಣಿಸಿ ನೀಡಲಾಗುವ 2021ನೇ ಸಾಲಿನ 'ಪದ್ಮ' ಪ್ರಶಸ್ತಿಗಳನ್ನು ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಪ್ರದಾನ ಮಾಡಿದರು. 6

ಶರ್ಮಾಗೆ ನಾಯಕತ್ವ; ಕೊಹ್ಲಿಗೆ ವಿಶ್ರಾಂತಿ

ನವದಹಲಿ (ಪಿಟಿಐ): ರೋಹಿತ್ ಶರ್ಮಾ ಅವರನ್ನು ಭಾರತ ಟ್ವೆಂಟಿ–20 ಕ್ರಿಕೆಟ್ ತಂಡಕ್ಕೆ ನಾಯಕರನ್ನಾಗಿ ನೇಮಕ ಮಾಡಲಾಗಿದೆ.



ರೋಹಿತ್ ಶರ್ಮಾ

ಇದೇ 17ರಿಂದ ನ್ಯೂಜಿಲೆಂಡ್ ಎದುರು ನಡೆಯಲಿರುವ ಟಿ20 ಸರಣಿಯಲ್ಲಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಮಾಜಿ ನಾಯಕ ವಿರಾಟ್ ಕೊಹ್ಲಿಗೆ ವಿಶ್ರಾಂತಿ ನೀಡಲಾಗಿದೆ. ವಿಶ್ವಕಪ್ ಟೂರ್ನಿಯ ನಂತರ ವಿರಾಟ್ ಟಿ- 20 ತಂಡದ ನಾಯಕತ್ವ ಬಿಟ್ಟುಕೊಟ್ಟಿದ್ದಾರೆ. 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಕ್ಷಿಪ್ತ ಸುದ್ದಿ

ಟರ್ಫ್ ಕ್ಲಬ್ ಕಾಮಗಾರಿ: ವರದಿ ಸಲ್ಲಿಕೆಗೆ ಸೂಚನೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಕುದುರೆಗಳ ಸುರಕ್ಷತೆ ವಿಚಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕಾಮಗಾರಿಯ ವರದಿ ಸಲ್ಲಿಸುವಂತೆ ಹೈಕೋರ್ಟ್ ಟರ್ಫ್ ಕ್ಲಬ್‌ಗೆ ಸೂಚಿಸಿದೆ.

ಈ ಕುರಿತಂತೆ ಕ್ಯೂಪಾ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಟಿಸಿ ಪರ ವಕೀಲರು, 'ಕುದುರೆ ಲಾಯಗಳ ನಿರ್ಮಾಣ ಈಗಾಗಲೇ ಆರಂಭವಾಗಿದೆ. 800 ಕುದುರೆ ಲಾಯಗಳ ನಿರ್ಮಾಣಕ್ಕೆ ಸುಮಾರು ಒಂದೂವರೆ ವರ್ಷಗಳ ಕಾಲಾವಕಾಶ ಬೇಕಿದೆ' ಎಂದು ಮಾಹಿತಿ ನೀಡಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಕಾಮಗಾರಿಯ ಪ್ರಗತಿ ವರದಿ ಸಲ್ಲಿಸಲು ಸೂಚಿಸಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿದೆ.

ಜಿಂದಾಲ್‌ಗೆ ಜಮೀನು: ಪಿಐಎಲ್ ವಜಾ

ಬೆಂಗಳೂರು: ವಿಜಯನಗರ ಜಿಲ್ಲೆಯ ಸಂಡೂರಿನಲ್ಲಿ ಜಿಂದಾಲ್ ಸೌತ್‌ವೆಸ್ಟ್ ಸ್ಟೀಲ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗೆ 3,667 ಎಕರೆ ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ರಾಜ್ಯ ಸಚಿವ ಸಂಪುಟದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಬೆಂಗಳೂರಿನ ಕೆ.ಎ. ಪಾಲ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಸರ್ಕಾರದ ಪರ ವಕೀಲರು, 'ಪ್ರಕರಣ ಮುಖ್ಯಮಂತ್ರಿಗಳ ಮುಂದೆ ಮರು ಪರಿಶೀಲನೆಯಲ್ಲಿದೆ' ಎಂಬ ಹೇಳಿಕೆಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡು ಅರ್ಜಿ ವಜಾಗೊಳಿಸಿ ಆದೇಶಿಸಿದೆ.

ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವ ಸರ್ಕಾರದ ಅವಧಿಯಲ್ಲಿ 2021ರ ಏಪ್ರಿಲ್ 26 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಜಿಂದಾಲ್ ಕಂಪನಿಗೆ ಸಂಡೂರು ತಾಲ್ಲೂಕಿನಲ್ಲಿ 3,667 ಎಕರೆ ಭೂಮಿಯನ್ನು ಹಸ್ತಾಂತರಿಸಲು ನಿರ್ಧರಿಸಿತ್ತು.

'ಭವಿಷ್ಯಕ್ಕೆ ಚಾಲನೆ' ಎಂಬ ಪರಿಕಲ್ಪನೆ ಅಡಿಯಲ್ಲಿ ಸಮ್ಮೇಳನ: ಸಚಿವ ಅಶ್ವತ್ಥನಾರಾಯಣ

ನ.17ರಿಂದ ಬೆಂಗಳೂರು ತಂತ್ರಜ್ಞಾನ ಶೃಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ 17ರಿಂದ 19ರವರೆಗೆ ಬೆಂಗಳೂರು ತಂತ್ರಜ್ಞಾನ ಶೃಂಗ ನಡೆಯಲಿದೆ. 30 ರಾಷ್ಟ್ರಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು 24ನೇ ಬೆಂಗಳೂರು ತಂತ್ರಜ್ಞಾನ ಶೃಂಗ. 'ಭವಿಷ್ಯಕ್ಕೆ ಚಾಲನೆ' ಎಂಬ ಪರಿಕಲ್ಪನೆ ಅಡಿಯಲ್ಲಿ ನಡೆಯುವ ಸಮ್ಮೇಳನವನ್ನು ಉಪ ರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ನ.17ರಂದು ಉದ್ಘಾಟಿಸುವರು. 300ಕ್ಕೂ ಹೆಚ್ಚು ಮಂದಿ ವಿಷಯ ತಜ್ಞರು ಸಮ್ಮೇಳನದಲ್ಲಿ ಮಾತನಾಡುವರು' ಎಂದರು.

ಈ ಬಾರಿಯೂ ವರ್ಚ್ಯುಯಲ್ ರೂಪದಲ್ಲಿ ಸಮ್ಮೇಳನ ನಡೆಯಲಿದೆ. ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಸೇರಿದಂತೆ ವಿದೇಶಗಳ ಹಲವು ನಾಯಕರು ಭಾಗವಹಿಸುವರು. 5,000ಕ್ಕೂ ಹೆಚ್ಚು ನವೋದ್ಯಮಗಳು ಸಭೆಯಲ್ಲಿ ಭಾಗವಹಿಸಲಿವೆ. 300ಕ್ಕೂ ಹೆಚ್ಚು ಪ್ರದರ್ಶಕರು ಮತ್ತು 20,000ಕ್ಕೂ ಹೆಚ್ಚು ವ್ಯಾಪಾರ ವಹಿವಾಟುದಾರರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಒಟ್ಟು ಐದು ಲಕ್ಷ ಮಂದಿ ಸಮ್ಮೇಳನವನ್ನು ಸಂದರ್ಶಿಸಬಹುದು ಎಂಬುದಾಗಿ ಅಂದಾಜು ಮಾಡಲಾಗಿದೆ ಎಂದು ವಿವರಿಸಿದರು.

ಸಮ್ಮೇಳನದ ಭಾಗವಾಗಿ ಭಾರತ–ಅಮೆರಿಕ ನಡುವೆ ತಂತ್ರಜ್ಞಾನ ಸಮಾಲೋಚನೆ ನಡೆಯಲಿದೆ. ಇಸ್ರೇಲ್, ಜಪಾನ್, ಸ್ವೀಡನ್, ಜರ್ಮನಿ, ಕೆನಡಾ, ನೆದರ್ಲೆಂಡ್, ತೈವಾನ್ ಮತ್ತಿತರ ರಾಷ್ಟ್ರಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಕಲಾಗುವುದು ಎಂದರು.

ಕಿಂಡ್ರಿಲ್, ಇನ್ಫೋಸಿಸ್, ಬಯೋಕಾನ್, ರಝೋರ್ ಪೇ, ರಾಬರ್ಟ್ ಬಾಷ್, ಟೆಲ್ ಸ್ಟ್ರಾ, ಎನ್‌ಆರ್ ಡಬ್ಲ್ಯು ಗ್ಲೋಬಲ್ ಬ್ಯುಸಿನೆಸ್, ಲಾರೀಸ್ ಬಯೋ, ರಕ್ಷಣಾ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆ, ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮ ಮತ್ತು ಆಸ್ಟ್ರೇಲಿಯಾ ಸರ್ಕಾರ ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿವೆ ಎಂದು ಹೇಳಿದರು.

ರಾಜ್ಯ ಮಾಹಿತಿ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಕರ್ನಾಟಕ ಡಿಜಿಟಲ್ ಆರ್ಥಿಕತೆ ವಿಷನ್ ಗ್ರೂಪ್ ಅಧ್ಯಕ್ಷ ಬಿ.ವಿ. ನಾಯ್ಡು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್, ಉದ್ಯಮಿಗಳಾದ ಜಿತೇಂದ್ರ ಛಡ್ಡಾ, ಗಣೇಶ್ ಕೃಷ್ಣನ್, ಬೀರೇನ್ ಘೋಷ್, ಕೃಷ್ಣಮೂರ್ತಿ ಪತ್ರಿಕಾಗೋಷ್ಠಿಯಲ್ಲಿದ್ದರು.



ಬೆಂಗಳೂರು ತಂತ್ರಜ್ಞಾನ ಶೃಂಗ ಕುರಿತು ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ, ಕರ್ನಾಟಕ ಡಿಜಿಟಲ್ ಆರ್ಥಿಕತೆ ವಿಷನ್ ಗ್ರೂಪ್ ಅಧ್ಯಕ್ಷ ಬಿ.ವಿ. ನಾಯ್ಡು, ಮಾಹಿತಿ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಮತ್ತು ತಂತ್ರಜ್ಞಾನ ಶೃಂಗದ ಜೈವಿಕ ತಂತ್ರಜ್ಞಾನ ಸಮ್ಮೇಳನ ಸಮಿತಿ ಅಧ್ಯಕ್ಷ ಅಧ್ಯಕ್ಷ ವಿಜಯ್ ಚಂದ್ರು ಪರಸ್ಪರ ಕೈಹಿಡಿದು ಒಗ್ಗಟ್ಟು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ನೆಟ್ಟಕಲ್ಲಪ್ಪ, ಪಲ್ಪು ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಏಳಿಗೆಗೆ ಶ್ರಮಿಸಿದ ಪತ್ರಿಕೋದ್ಯಮಿ ಕೆ.ಎನ್. ನೆಟ್ಟಕಲ್ಲಪ್ಪ ಹಾಗೂ ಸಮಾಜ ಸುಧಾರಕ ಡಾ. ಪಲ್ಪು ಅವರಂತಹ ಮಹನೀಯರ ಜನ್ಮದಿನ ಆಚರಿಸುವ ಮೂಲಕ ಅವರ ಕೊಡುಗೆಯನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಅಗತ್ಯ ಇದೆ ಎಂದು ಬಿಜೆಪಿ ಹಿಂದುಳಿದ ಮೋರ್ಚಾದ ಅಧ್ಯಕ್ಷ ನೆ.ಲ. ನರೇಂದ್ರ ಬಾಬು ಹೇಳಿದರು.

ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘವು ಮಂಗಳವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಕೆ.ಎನ್. ನೆಟ್ಟಕಲ್ಲಪ್ಪ ಹಾಗೂ ಡಾ.ಪಲ್ಪು ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ, ಇಬ್ಬರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ನೆಟ್ಟಕಲ್ಲಪ್ಪ ಅವರು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಎಂಬ ವೈಚಾರಿಕ ಮತ್ತು ಜನಪರ ಪತ್ರಿಕೆ ನಡೆಸಿ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿದ್ದಾರೆ ಎಂದೂ ಅವರು ಹೇಳಿದರು.

ಸಂಘದ ರಾಜ್ಯಾಧ್ಯಕ್ಷ ಸೈದಪ್ಪ ಗುತ್ತೇದಾರ್ ಮಾತನಾಡಿ, ನೆಟ್ಟಕಲ್ಲಪ್ಪ ಅವರು ಒಬ್ಬ ಯಶಸ್ವಿ ಉದ್ಯಮಿಯಾಗುವುದರ ಮೂಲಕ ಸಮಾಜಮುಖಿಯಾಗಿ ಬೆಳೆದರು. ಜಾತಿ, ಭೇದ ಎಣಿಸದೇ ನೂರಾರು ಮಂದಿಗೆ ಉದ್ಯೋಗ ನೀಡಿದರು ಎಂದರು.

ಪ್ರಧಾನಕಾರ್ಯದರ್ಶಿ ಕಾಂತರಾಜ್, ವೀರಶೈವ ಲಿಂಗಾಯಿತ ಯುವ ವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರ್, ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘದ ಚಂದ್ರಶೇಖರ್, ರವಿದಾಸ್ ಈಡಿಗ, ಉದ್ಯಮಿ ಗುರುರಾಜ್ ಪೂಜಾರ್ ಪಾಲ್ಗೊಂಡಿದ್ದರು.

ಮೂರು ವರದಿ ಸಲ್ಲಿಸಲು ಪಿಎಸಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಔಷಧಿ ಮತ್ತು ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿನ ಅವ್ಯವಹಾರ, ವಿಶ್ವವಿದ್ಯಾಲಯಗಳಲ್ಲಿ ಬೋಧಕರ ನೇಮಕಾತಿಯಲ್ಲಿನ ನಿಯಮ ಉಲ್ಲಂಘನೆ ಹಾಗೂ ಹಾಸನ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಿಂದ ನಿರಾಶ್ರಿತರಾದವರಿಗೆ ಜಮೀನು ಮಂಜೂರಾತಿಯಲ್ಲಿ ನಡೆದಿರುವ ಅಕ್ರಮಗಳ ಕುರಿತ ವರದಿಗಳನ್ನು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ಮಂಗಳವಾರ ಅಂತಿಮಗೊಳಿಸಿದೆ.

ರಾಮಲಿಂಗಾರೆಡ್ಡಿ ಅಧ್ಯಕ್ಷತೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅವಧಿ ಮುಕ್ತಾಯವಾಗುತ್ತಿದೆ. ಮಂಗಳವಾರ ಕೊನೆಯ ಸಭೆ ನಡೆಸಿದ ಸಮಿತಿ ವರದಿಗಳನ್ನು ಅಂತಿಮಗೊಳಿಸಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಅಂತಿಮ ವರದಿಗಳನ್ನು ವಿಧಾನಮಂಡಲಕ್ಕೆ ಸಲ್ಲಿಸುವ ನಿರ್ಣಯ ಅಂಗೀಕರಿಸಲಾಗಿದೆ. ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಮಧ್ಯಂತರ ವರದಿ ಸಲ್ಲಿಸಲು ಸಮಿತಿ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

'ಕೋವಿಡ್ ಅವಧಿಯಲ್ಲಿ ಹಾಗೂ ಅದಕ್ಕೂ ಮೊದಲು ಆರೋಗ್ಯ ಇಲಾಖೆಯಲ್ಲಿ ನಡೆದಿರುವ ಔಷಧಿ, ವೈದ್ಯಕೀಯ ಉಪಕರಣ ಹಾಗೂ ಇತರ ಪರಿಕರಗಳ ಖರೀದಿ ಕುರಿತು ಪಿಎಸಿ ಪರಿಶೀಲನೆ ನಡೆಸಿದೆ. ಹಲವು ಪ್ರಕರಣಗಳಲ್ಲಿ ನಿಯಮ ಉಲ್ಲಂಘನೆ, ದುಬಾರಿ ಮೊತ್ತಕ್ಕೆ ಖರೀದಿಯಂತಹ ಸಂಗತಿಗಳು ಕಂಡುಬಂದಿವೆ. ಎಲ್ಲವನ್ನೂ ವರದಿಯಲ್ಲಿ ದಾಖಲಿಸಲಾಗಿದೆ. ಶೀಘ್ರದಲ್ಲಿಯೇ ವರದಿಯನ್ನು ವಿಧಾನಮಂಡಲಕ್ಕೆ ಸಲ್ಲಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಹೇಮಾವತಿ ಜಲಾಶಯ ಯೋಜನೆ, ವಾಟೆಹೊಳೆ ಯೋಜನೆ ಸೇರಿದಂತೆ ಹಾಸನ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸುವ ಹೆಸರಿನಲ್ಲಿ ಅನ್ಯರಿಗೆ ಜಮೀನು ಮಂಜೂರು ಮಾಡಿರುವ ಕುರಿತು ಸಮಿತಿ ವಿಚಾರಣೆ ನಡೆಸಿದೆ. ಈ ಬಗ್ಗೆ ವಿಸ್ತೃತವಾದ ವರದಿಯನ್ನು ಸಿದ್ಧಪಡಿಸಲಾಗಿದೆ. ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಬೋಧಕರ ನೇಮಕಾತಿಯಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಗಳನ್ನು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದ ವರದಿಯಬನ್ನೂ ಅಂತಿಮಗೊಳಿಸಲಾಗಿದೆ ಎಂಬ ಮಾಹಿತಿ ಲಭಿಸಿದೆ.


ಸುದ್ದಿ 2 ನಿಮಿಷ

ಗೋವಾದಲ್ಲಿ ಕನ್ನಡ ಭವನಕ್ಕೆ ₹ 10 ಕೋಟಿ– ಸಿಎಂ

ಬೆಂಗಳೂರು: ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ₹ 10 ಕೋಟಿ ಮಂಜೂರು ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೇತೃತ್ವದಲ್ಲಿ ತಮ್ಮನ್ನು ಭೇಟಿ ಮಾಡಿದ ಅಖಿಲ ಗೋವಾ ಕನ್ನಡ ಮಹಾ ಸಂಘದ ಪದಾಧಿಕಾರಿಗಳಿಗೆ ಮುಖ್ಯಮಂತ್ರಿ ಈ ಭರವಸೆ ನೀಡಿದರು.

'ಉತ್ತರ ಕರ್ನಾಟಕ ಭಾಗದ ಬಹುತೇಕ ಜನರು ಗೋವಾ ರಾಜ್ಯದಲ್ಲಿ ನೆಲೆಸಿದ್ದು, ಅಲ್ಲಿ ಕನ್ನಡವನ್ನು ಉಳಿಸಿ, ಬೆಳೆಸುತ್ತಿದ್ದಾರೆ. ಕನ್ನಡ ಸಂಸ್ಕೃತಿ ಕಾಪಾಡುತ್ತಿದ್ದಾರೆ. ಆದರೆ, ಕನ್ನಡಿಗರಿಗೆ ಅಲ್ಲಿ ನೆಲೆ ಇಲ್ಲ. ಹೀಗಾಗಿ, ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಸರ್ಕಾರ ಸಿದ್ಧವಿದೆ' ಎಂದು ತಿಳಿಸಿದ ಮುಖ್ಯಮಂತ್ರಿ, 'ಇದಕ್ಕೆ ಭೂಮಿ ಗುರುತಿಸಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಬೇಕು. ಜೊತೆಗೆ ಕನ್ನಡ ಭವನ ನಿರ್ಮಾಣಕ್ಕೆ ₹ 10 ಕೋಟಿ ಮಂಜೂರು ಮಾಡಬೇಕು' ಎಂದು ಅಧಿಕಾರಿಗಳಿಗೆ ಆದೇಶಿಸಿದರು.



ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ತಂಡದಲ್ಲಿ ಗೋವಾ ಕನ್ನಡ ಮಹಾ ಸಂಘದ ಗೌರವ ಅಧ್ಯಕ್ಷ ಸಿದ್ದಣ್ಣ ಮೇಟಿ, ಅಧ್ಯಕ್ಷ ಹನುಮಂತ ರೆಡ್ಡಿ ಶಿರೂರ್, ಪದಾಧಿಕಾರಿಗಳಾದ ಮಲ್ಲಿಕಾರ್ಜುನ ಬದಾಮಿ, ಮಹೇಶ್ ಬಾಬು ಸುರ್ವೆ, ಅರುಣ್ ಕುಮಾರ್ ಇದ್ದರು.

ನರೇಗಾ ಕೂಲಿ ವಿಳಂಬ: ಪಿಐಎಲ್ ವಜಾ

ಬೆಂಗಳೂರು: 'ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ದುಡಿಯುವ ಕಾರ್ಮಿಕರಿಗೆ ಕೂಲಿ ಪಾವತಿಸಲು ವಿಳಂಬ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ರಾಜ್ಯದಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ' ಎಂಬ ಸರ್ಕಾರದ ಪರ ವಕೀಲರ ವಾದವನ್ನು ಮನ್ನಿಸಿದ ನ್ಯಾಯಪೀಠ, 'ವೇತನ ನೀಡಲು ವಿಳಂಬವಾದಲ್ಲಿ ದೂರು ನೀಡುವ ವ್ಯವಸ್ಥೆ ಇರುವಾಗ, ಯಾರಿಗಾದರೂ ವೈಯಕ್ತಿಕವಾಗಿ ತೊಂದರೆ ಆದಲ್ಲಿ ದೂರು ನೀಡಬಹುದು' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿತು.

ಬೊಮ್ಮಾಯಿ ಇಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಬೆಳಿಗ್ಗೆ ದೆಹಲಿಗೆ ತೆರಳಲಿದ್ದಾರೆ.

ಅಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಯೋಜನೆಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಆ ಬಳಿಕ ಟೈಮ್ಸ್‌ನೌ ಸಮ್ಮಿಟ್–2021 ರಲ್ಲಿ ಭಾಗವಹಿಸಲಿದ್ದಾರೆ. ನಗರಕ್ಕೆ ಗುರುವಾರ ಮರಳಲಿದ್ದಾರೆ.

ರೈತರ–ಸಂತ್ರಸ್ತರ ನೋವಿಗೆ ಮಿಡಿದ ರಮೇಶ್



ಕೋವಿಡ್ ಮೊದಲನೇ ಮತ್ತು ಎರಡನೇ ಅಲೆ ದೇಶದಾದ್ಯಂತ ಹರಡುತ್ತಿದ್ದಂತೆ, ಲಾಕ್‌ಡೌನ್‌ನಿಂದಾಗಿ ಬಡವರು, ಕೂಲಿಕಾರ್ಮಿಕರು, ಶ್ರಮಿಕರು, ಜನಸಾಮಾನ್ಯರು, ಗಾರ್ಮೆಂಟ್ಸ್, ಆಟೋ ರಿಕ್ಷಾ, ಟೆಂಪೊ ಚಾಲಕರು ಹಾಗೂ ಮಧ್ಯಮವರ್ಗದವರು ಸಂಕಷ್ಟಕ್ಕೆ ಸಿಲುಕಿದರಯ. ಈ ಸಂದರ್ಭದಲ್ಲಿ ಅವರ ನೆರವಿಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ಧಾವಿಸದ ಸಂದರ್ಭದಲ್ಲಿ ಜನರ ಕಣ್ಣೀರನ್ನು ಒರೆಸಲು ಬಂದವರು ಬಮೂಲ್‌ನ ಮಾಜಿ ಅಧ್ಯಕ್ಷರು ಆಗಿರುವ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಅವರು.

ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡಲೇಬೇಕೆಂಬ ಗುರಿಯಿಟ್ಟುಕೊಂಡು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಅಲ್ಪ ಮತಗಳಿಂದ ಸೋತರೂ ಧೃತಿಗೆಡದೆ, ಸದಾ ಜನರ ಮಧ್ಯೆಯಿದ್ದು, ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಕೆಲಸದಲ್ಲಿ ಸದಾ ನಿರತರಾಗಿದ್ದಾರೆ.

ಕ್ಷೇತ್ರದ ಜನಪ್ರತಿನಿಧಿಗಳು ಕೋವಿಡ್‌ಗೆ ಹೆದರಿದ್ದ ವೇಳೆಯಲ್ಲಿ ಬಡವರು ಹಸಿವಿನಿಂದ ಬಳಲುತ್ತಿರುವುದನ್ನು ಕಂಡು ರಮೇಶ್ ಅವರು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ನೆರವಿನೊಂದಿಗೆ ಪ್ರತಿನಿತ್ಯ 25 ಸಾವಿರ ಆಹಾರ ಪೊಟ್ಟಣಗಳನ್ನು ಕ್ಷೇತ್ರದ್ಯಾದಂತ ವಿತರಿಸಿದರು. ಜೊತೆಗೆ 1,05,000 ಕುಟುಂಬಗಳಿಗೆ ದಿನಸಿ ಕಿಟ್ ವಿತರಣೆ ಮಾಡಿರುವುದಲ್ಲದೆ, ಇಂದಿಗೂ ಸಹ ಪ್ರತಿನಿತ್ಯ ಅವಶ್ಯಕತೆ ಇರುವ ಕಡುಬಡವರಿಗೆ ದಿನಸಿ ಕಿಟ್ ವಿತರಣೆ ಮಾಡಿಕೊಂಡು ಬರುತ್ತಿದ್ದಾರೆ.

ರೈತರು ತರಕಾರಿ ಬೆಳೆದು ಸಂಕಷ್ಟಕ್ಕೀಡಾಗಿ ದಿಕ್ಕುತೋಚದಂತಹ ಸಂದರ್ಭದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಸಂಸದ ಡಿ.ಕೆ.ಸುರೇಶ್ ರೈತರಿಗೆ ನೆರವಾಗುವಂತೆ ಸೂಚಿಸಿದ್ದರಿಂದ ತೋಟಗಳಿಗೆ ಖುದ್ದಾಗಿ ತೆರಳಿ 750 ಟನ್ ಕ್ಯಾರೆಟ್, ಟೊಮೆಟೊ, ಹೂಕೋಸು, ಎಲೆಕೋಸು, ದೊಡ್ಡಮೆಣಸಿನಕಾಯಿ, ಈರುಳ್ಳಿ, ಬದನೇಕಾಯಿ, ಕುಂಬಳಕಾಯಿ, ಮೂಲಂಗಿ, ವಿವಿಧ ಬಗೆಯ ಸೊಪ್ಪು ಖರೀದಿಸಿ ೧.೫೦ ಲಕ್ಷ ಕುಟುಂಬಗಳಿಗೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಸ್ವಯಂಸೇವಕರ ಮೂಲಕ ಮನೆಮನೆಗೆ ತಲುಪಿಸಿದ್ದಾರೆ. ಈ ಮೂಲಕ ರೈತರ ಬಾಳಿಗೆ ಬೆಳಕಾಗಿದ್ದಾರೆ.

ರೈತರ ಕುಟುಂಬ: 'ನಾನು ರೈತರ ಕುಟುಂಬಕ್ಕೆ ಸೇರಿದವನು. ಕೋವಿಡ್ ಸಂಕಷ್ಟ ಕಾಲದಲ್ಲಿ ಅನ್ನದಾತರ ಕೈ ಹಿಡಿದು ನನ್ನ ಕರ್ತವ್ಯ ನಿರ್ವಹಿಸಿದ್ದೇನೆ. ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಮತ್ತು ರಾಮಲಿಂಗಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯ ಮಾಡಿದ್ದೇನೆ' ಎನ್ನುತ್ತಾರೆ ರಮೇಶ್.

'ಆನೇಕಲ್ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿಯೂ ರೈತರು ಸಂಕಷ್ಟದಲ್ಲಿದ್ದರು. ಲಾಭ ದೊರೆಯದಿದ್ದರೂ ಕನಿಷ್ಠ ವೆಚ್ಚವಾದರೂ ಬಂದರೆ ಸಾಕು ಎಂಬ ಮನೋಭಾವನೆ ಅವರದ್ದಾಯಿತು. ಅದರಂತೆ ಅವರಿಗೆ ನೆರವು ನೀಡುವ ನಿಟ್ಟಿನಲ್ಲಿ ತರಕಾರಿ ಬೆಳೆಗಳನ್ನು ಕೊಂಡು ಬಡವರಿಗೆ, ಕಾರ್ಮಿಕರಿಗೆ ವಿತರಿಸಿದೆ' ಎಂದರು.



ಲಾಕ್‌ಡೌನ್ ಸಂದರ್ಭದಲ್ಲಿ ಆಹಾರ ವಿತರಿಸುತ್ತಿರುವ ರಮೇಶ್

ಕೋವಿಡ್ ಎರಡನೇ ಅಲೆಯ ರಭಸಕ್ಕೆ ಜನತೆ ತತ್ತರಿಸಿದಾಗ ವಿವಿಧ ಕಾಯಿಲೆಗಳಿಂದ ನರಳುತ್ತಿರುವವರಿಗೆ ಉಚಿತವಾಗಿ ಔಷಧಿ, ಇಂಜೆಕ್ಷನ್, ಚಿಕಿತ್ಸಾ ವೆಚ್ಚವನ್ನು ವೈಯಕ್ತಿಕವಾಗಿ ನೀಡಿದರು. ಅಲ್ಲದೆ, ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಗಳಿಗೆ ಹಣ್ಣು ಹಂಪಲು ವಿತರಿಸಿದರು. ಜೊತೆಗೆ, ಕಾಂಗ್ರೆಸ್ ಸಹಾಯ ಹಸ್ತದ ಮೂಲಕ 160 ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ ₹10 ಸಾವಿರ ನೀಡಿ ಸಾಂತ್ವನ ಹೇಳಿದ್ದಾರೆ.

ಲಸಿಕೆ ಸಿಗದೆ ಜನರು ಪರಿತಪಿಸುತ್ತಿರುವ ಸಂದರ್ಭದಲ್ಲಿ ಆರ್.ಕೆ.ರಮೇಶ್ ಅವರು ನಾರಾಯಣ ಹೃದಯಾಲ ಯದಿಂದ ವೈಯಕ್ತಿಕವಾಗಿ ಲಸಿಕೆ ಖರೀದಿಸಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಾವಿರಾರು ಜನರಿಗೆ ಉಚಿತವಾಗಿ ಲಸಿಕೆ ಹಾಕಿಸುವುದರ ಜೊತೆಗೆ ಊಟೋಪಚಾರದ ವ್ಯವಸ್ಥೆ ಮಾಡಿದ್ದಾರೆ. ವಿವಿಧ ಖಾಸಗಿ ಆಸ್ಪತ್ರೆ ಹಾಗೂ ಆನೇಕಲ್ ಸರ್ಕಾರಿ ಆಸ್ಪತ್ರೆಯ ಸಹಕಾರದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ, ಉಚಿತ ಚಿಕಿತ್ಸೆ, ಔಷಧಿ ವಿತರಣೆ, ಕನ್ನಡಕ ವಿತರಣೆ, ಕಡುಬಡವರಿಗೆ ಶಸ್ತ್ರಚಿಕಿತ್ಸೆ, ಬೃಹತ್ ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡು ಜನರಿಗೆ ನೆರವಾದರು. ಇಂದಿಗೂ ಹಲವಾರು ಬಡಾವಣೆಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ಆಯೋಜನೆ ಮಾಡುತ್ತಾ, ಅವರಿಗೆ ಬೇಕಾಗಿರುವ ಔಷಧಿಗಳನ್ನು ನೀಡಿ ಬಡವರ, ನೊಂದವರ ಜೊತೆ ಸದಾ ಇದ್ದೇನೆ ಎಂದು ತೋರಿಸಿದ್ದಾರೆ.

ಕ್ಷೇತ್ರದಲ್ಲಿ ತೊಂದರೆಗೊಳಗಾಗಿರುವ ನಿರುದ್ಯೋಗಿಗಳಿಗೆ ಮಾರ್ಗದರ್ಶಕರಾಗಿ ಹೈನುಗಾರಿಕೆ, ಟೈಲರಿಂಗ್‌ನಂತಹ ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳಲು ಆರ್ಥಿಕ ಸಹಾಯ ನೀಡಿ, ನೂರಾರು ಮಹಿಳೆಯರಿಗೆ ಹೊಲಿಗೆ ಯಂತ್ರ, ಅಂಗವಿಕಲರಿಗೆ ತ್ರಿಚಕ್ರದ ಬೈಸಿಕಲ್ ವಿತರಿಸಿದ್ದಾರೆ.

ಆರ್.ಕೆ.ರಮೇಶ್ ಅವರ ಸಹೋ ದರ ಆರ್.ಕೆ.ಕೇಶವರೆಡ್ಡಿ ಹೆನ್ನಾಗರ ಗ್ರಾಮಪಂಚಾಯಿತಿಗೆ ಏಳೂವರೆ ವರ್ಷಗಳ ಕಾಲ ಸತತವಾಗಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಒಂದು ಬಾರಿ ರಾಷ್ಟ್ರ ಮಟ್ಟದ ಪ್ರಶಸ್ತಿ, ರಾಜ್ಯ ಸರ್ಕಾರದಿಂದ ನೀಡುವ ಗಾಂಧಿ ಪುರಸ್ಕಾರ ಪ್ರಶಸ್ತಿ ಎರಡು ಬಾರಿ ಲಭಿಸಿದೆ. ಹೆನ್ನಾಗರ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ 8 ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಿದ್ದಾರೆ. ಕೇಶವರೆಡ್ಡಿ ಅಧ್ಯಕ್ಷರಾಗುವ ಮುನ್ನ ಪಂಚಾಯಿತಿಗೆ ₹60 ಲಕ್ಷ ಆದಾಯ ಬರುತ್ತಿತ್ತು. ಅವರು ಅಧ್ಯಕ್ಷರಾದ ಬಳಿಕ ₹8 ಕೋಟಿ ವರಮಾನ ಬರುತ್ತಿದೆ.

ಆರ್.ಕೆ.ರಮೇಶ್ ಅವರು ಬೆಂಗಳೂರು ಹಾಲು ಒಕ್ಕೂಟಕ್ಕೆ ಒಂದು ಬಾರಿ ಅಧ್ಯಕ್ಷರಾಗಿ, ನಾಲ್ಕು ಬಾರಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸಂಸ್ಥೆಯಲ್ಲಿ ಬದಲಾವಣೆ ತರುವ ದೃಷ್ಟಿಯಿಂದ 60 ಸಾವಿರ ಫಿಲ್ಲಿಂಗ್ ಸಾಮರ್ಥ್ಯ ಹೊಂದಿರುವ ಮೆಷಿನರಿಗಳನ್ನು ತೆಗೆದುಹಾಕಿ 2 ಲಕ್ಷ ಫಿಲ್ಲಿಂಗ್ ಸಾಮರ್ಥ್ಯದ ಮೆಷಿನರಿಗಳನ್ನು ಅಳವಡಿಸುವುದರ ಮೂಲಕ ಮೂರು ಪಾಳಿಯಲ್ಲಿ ಉತ್ಪಾದನೆ ಮಾಡುತ್ತಿದ್ದ ಕೆಲಸದ ಸಮಯವನ್ನು ಎರಡು ಪಾಳಿಯಲ್ಲೇ ಉತ್ಪಾದಿಸುವಂತೆ ಮಾಡಿ ಸಂಸ್ಥೆಗೆ ಸುಮಾರು ₹ 3 ಕೋಟಿಯಷ್ಟು ನಷ್ಟವಾಗುವುದನ್ನು ತಡೆಹಿಡಿದು ಕಾರ್ಯಕ್ಷಮತೆ ತೋರಿರುವುದು ಇವರ ಹೆಗ್ಗಳಿಕೆ. ಅಲ್ಲದೇ ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಹಾಲು ಉತ್ಪಾದಕರ ಕಲ್ಯಾಣ ಟ್ರಸ್ಟ್ ಸ್ಥಾಪಿಸಿ ಹಸುಗಳಿಗೆ, ಕಾರ್ಮಿಕರಿಗೆ, ಹಾಲು ಉತ್ಪಾದಕ ಸಂಘ ಸಂಸ್ಥೆಗಳಿಗೂ ವಿಮೆ ಮಾಡಿಸುವುದರ ಮೂಲಕ ಹೈನುಗಾರಿಕೆ ಭವಿಷ್ಯತ್ತಿಗೆ ಬೆಳಕಾಗಿದ್ದಾರೆ.



ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ಯಾಗ್‌ಗಳನ್ನು ವಿತರಿಸುತ್ತಿರುವ ರಮೇಶ್





ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಬಡವರಿಗೆ ಸಂಸದ ಡಿ.ಕೆ. ಸುರೇಶ್ ಅವರ ಜೊತೆಗೂಡಿ ದಿನಸಿ ಕಿಟ್‌ಗಳನ್ನು ಉಚಿತವಾಗಿ ವಿತರಿಸಿದ ರಮೇಶ್



ಅಭಿವೃದ್ಧಿ ಕಾರ್ಯಗಳ ಹರಿಕಾರ

ಬಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ವಿಶೇಷವಾಗಿ ಸ್ತ್ರೀಶಕ್ತಿ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಕುರಿ ಸಾಲ, ಕೋಳಿ ಸಾಲ, ಕೃಷಿ ಸಾಲ, ಬೆಳೆ ಸಾಲ ನೀಡಿ ಕೃಷಿಕರಿಗೆ, ಮಹಿಳೆಯರಿಗೆ ನೆರವಾಗಿದ್ದಾರೆ. ರಮೇಶ್ ಅವರು ಹಲವಾರು ದೇವಾಲಯಗಳ ಅಭಿವೃದ್ಧಿ ಕಾರ್ಯಗಳಲ್ಲಿ ಕೈಜೋಡಿಸಿದ್ದಾರೆ. ಹಲವಾರು ದೇವಸ್ಥಾನಗಳ ಜೀರ್ಣೋದ್ಧಾರ, ಅಭಿವೃದ್ಧಿ ಕಾರ್ಯಗಳಿಗೆ ನೆರವು, ಶಾಲೆ ಕಟ್ಟಡಗಳ ದುರಸ್ತಿ, ಹೆಚ್ಚುವರಿಯಾಗಿ ಕೊಠಡಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಸಾವಿರಾರು ಶಾಲಾ ಕಾಲೇಜು ಮಕ್ಕಳಿಗೆ ಶುಲ್ಕ ಭರಿಸುವುದು, ಸಮವಸ್ತ್ರ, ಲೇಖನ ಸಾಮಗ್ರಿಗಳು, ನೋಟ್ ಬುಕ್, ಬ್ಯಾಗ್ ವಿತರಣೆ ಮಾಡಿದ್ದಾರೆ. ಕ್ಷೇತ್ರ ವ್ಯಾಪ್ತಿಯಲ್ಲಿ ವೈಯಕ್ತಿಕವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದ್ದಾರೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಸಂಸದ ಡಿ.ಕೆ.ಸುರೇಶ್ ಅವರ ಮಾರ್ಗದರ್ಶನ, ಸಲಹೆ, ಸಹಕಾರದಿಂದ, ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಕ್ಷೇತ್ರದ ಜನತೆಯ ಸಹಕಾರದಿಂದ ಈ ನೆರವು ನೀಡಲು ಸಾಧ್ಯವಾಯಿತು ಎನ್ನುತ್ತಾರೆ ಅವರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಸ್ತೆ ಗುಂಡಿ ಮುಚ್ಚಲು ಇನ್ನೆಷ್ಟು ಕಾಲ ಬೇಕು?



ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಬಹುತೇಕ ರಸ್ತೆಗಳು ಗುಂಡಿಮಯವಾಗಿವೆ. ಹಲವು ತಿಂಗಳುಗಳಿಂದಲೂ ಇದೇ ಪರಿಸ್ಥಿತಿ ಮುಂದುವರಿದಿದೆ. ರಸ್ತೆ ಗುಂಡಿಗಳಿಂದಾಗಿಯೇ ಅಪಘಾತಕ್ಕೀಡಾಗಿ ಜನರು ಪ್ರಾಣ ಕಳೆದುಕೊಳ್ಳುತ್ತಿರುವ ದುರ್ಘಟನೆಗಳು ಆಗಾಗ ಸಂಭವಿಸುತ್ತಲೇ ಇವೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ನಗರದಲ್ಲಿ ರಸ್ತೆ ಗುಂಡಿ ಮುಚ್ಚಲು ಪರದಾಡಬೇಕಾದ ಸ್ಥಿತಿ ಇದೆಯೆ? ಎಂಬುದರ ಕುರಿತು ಜನರ ನಡುವೆ ತೀವ್ರ ಚರ್ಚೆ ನಡೆಯುತ್ತಿದೆ.

ಬೆಂಗಳೂರಿನ ರಸ್ತೆಗಳಲ್ಲಿ ಏಕೆ ಪದೇ ಪದೇ ಗುಂಡಿಗಳು ಬೀಳುತ್ತಿವೆ? ಗುಂಡಿ ಮುಚ್ಚಲು ಅಷ್ಟೊಂದು ಸಮಯ ಬೇಕೆ? ಎಂಬುದರ ಕುರಿತು ತಜ್ಞರು, ರಾಜಕೀಯ ಮುಖಂಡರು, ಸಾರ್ವಜನಿಕರು 'ಪ್ರಜಾವಾಣಿ' ಜತೆ ಹಂಚಿಕೊಂಡ ಅಭಿಪ್ರಾಯಗಳು ಇಲ್ಲಿವೆ.

ಕಿವಿಯೂ ಕೇಳಿಸುತ್ತಿಲ್ಲ... ಕಣ್ಣು ಕಾಣುತ್ತಿಲ್ಲ...'



ನಗರದ ಬಹುತೇಕ ರಸ್ತೆಗಳು ಹಾಳಾಗಿದ್ದು, ಗುಂಡಿಗಳೇ ಕಾಣುತ್ತಿವೆ. ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕಾದ ಬಿಬಿಎಂಪಿ ಅಧಿಕಾರಿಗಳು ಮೌನವಾಗಿದ್ದಾರೆ. ದೂರು ಕೊಟ್ಟರೂ ಸ್ಪಂದಿಸುತ್ತಿಲ್ಲ. ಅವರ ಕಿವಿಯೂ ಕೇಳಿಸುತ್ತಿಲ್ಲ... ಕಣ್ಣು ಕಾಣುತ್ತಿಲ್ಲ... ಕೇಬಲ್ ಅಳವಡಿಕೆ ಹಾಗೂ ಇತರೆ ಉದ್ದೇಶಕ್ಕಾಗಿ ಖಾಸಗಿ ಕಂಪನಿಯವರು ಬೇಕಾಬಿಟ್ಟಿಯಾಗಿ ರಸ್ತೆ ಅಗೆದು ಹೋಗುತ್ತಿದ್ದಾರೆ. ಇದರಿಂದಲೇ ಗುಂಡಿಗಳು ಬಿದ್ದು, ಇಡೀ ರಸ್ತೆ ಹಾಳಾಗುತ್ತಿದೆ. ಅವರನ್ನು ಪ್ರಶ್ನಿಸುವವರೇ ಇಲ್ಲದಂತಾಗಿದೆ.

ಎನ್. ಮುನಿರಾಜು, ದಂಡು ಪ್ರದೇಶ ಕನ್ನಡ ಸಂಘಟನೆ ಒಕ್ಕೂಟದ ಪ್ರಧಾನ ಕಾರ್ಯದರ್ಶಿ

ಗಣ್ಯರು ಬಂದಾಗ ಮಾತ್ರ ಗುಂಡಿ ಮುಚ್ಚಿಕೊಳ್ಳುತ್ತದೆಯೇ?



ಬೆಂಗಳೂರಿನ ಹಲವು ರಸ್ತೆಗಳು ಗುಂಡಿಗಳಿಂದ ಮೂಲ ಸ್ವರೂಪವನ್ನೇ ಕಳೆದುಕೊಂಡಿವೆ. ರಸ್ತೆ ಗುಂಡಿಗಳ ಅನುಭವವೇ ನೀಡದ ದುಬಾರಿ ಕಾರುಗಳಲ್ಲಿ ಶ್ರೀಮಂತರು ಸಂಚರಿಸಿ ಬಿಡುತ್ತಾರೆ. ಆದರೆ, ಸಾಮಾನ್ಯ ಮತ್ತು ಮಧ್ಯಮ ವರ್ಗದ ಜನರು ಗುಂಡಿಗಳ ರಸ್ತೆಗಳಲ್ಲಿ ಬಿದ್ದು ಏಳುವುದೇ ಹೆಚ್ಚು. ಜನರ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಗಳನ್ನು ಹಾಗೆಯೇ ಬಿಟ್ಟಿರುವುದು ಆಡಳಿತ ವ್ಯವಸ್ಥೆಯ ಕೈಗನ್ನಡಿ. ರಸ್ತೆಗಳು ಸರಿಯಾಗಬೇಕೆಂದರೆ ಗಣ್ಯರು ಅಥವಾ ರಾಜಕಾರಣಿಗಳೇ ಆಗಮಿಸಬೇಕೇ?

ವಿಜಯ್, ಖಾಸಗಿ ಕಂಪನಿ ಉದ್ಯೋಗಿ

ಓಡಾಡುವುದೇ ಕಷ್ಟವಾಗುತ್ತಿದೆ



ಬೆಂಗಳೂರಿನ ಎಲ್ಲ ಪ್ರದೇಶಗಳಲ್ಲೂ ರಸ್ತೆ ಗುಂಡಿಗಳ ಸಮಸ್ಯೆ ಹೆಚ್ಚುತ್ತಿದೆ. ಎಲ್ಲಿಯೂ ಗುಂಡಿ ಮುಚ್ಚುವ ಕೆಲಸ ಮಾಡುತ್ತಿಲ್ಲ. ವಾಹನಗಳಲ್ಲಿ ಸಂಚಾರ ತೀರಾ ಕಷ್ಟ. ನಡೆದಾಡುವುದೂ ಕಷ್ಟ ಎನಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಬಿಬಿಎಂಪಿ ಆಡಳಿತಕ್ಕೆ ಜನರ ಕಷ್ಟ ಪರಿಹರಿಸುವ ಕಾಳಜಿ ಇಲ್ಲದಿರುವುದೇ ಇದಕ್ಕೆ ಕಾರಣ. ಆಡಳಿತ ವ್ಯವಸ್ಥೆ ಮನಸ್ಸು ಮಾಡಿದರೆ ಕೆಲವೇ ದಿನಗಳಲ್ಲಿ ಸಮಸ್ಯೆ ಪರಿಹರಿಸಬಹುದು. ಆದರೂ, ಮಾಡುತ್ತಿಲ್ಲ. ಇಂತಹ ಧೋರಣೆ ಏಕೆ ಎಂಬುದು ತಿಳಿಯುತ್ತಿಲ್ಲ.

ಮಂಜುನಾಥ್, ಬಾಣಸವಾಡಿ

ಕಾಳಜಿ ಇಲ್ಲದಿರುವುದೇ ಸಮಸ್ಯೆಗೆ ಮೂಲ

ಐದು ವರ್ಷಗಳ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳ ಕಾಮಗಾರಿಗಳಿಗೆ ₹ 20,000 ಕೋಟಿಗೂ ಹೆಚ್ಚು ವೆಚ್ಚ ಮಾಡಲಾಗಿದೆ ಎಂದು ಮುಖ್ಯಮಂತ್ರಿಯವರು ವಿಧಾನಮಂಡಲದಲ್ಲಿ ಹೇಳಿದ್ದಾರೆ. ಅದು, ನಿಜವೇ ಆಗಿದ್ದರೆ ಬೆಂಗಳೂರಿನಲ್ಲಿ ಗುಂಡಿಗಳಿರುವ ರಸ್ತೆಗಳೇ ಇರಬಾರದು. ಆದರೆ, ಎಲ್ಲಿ ನೋಡಿದರೂ ರಸ್ತೆಗಳ ತುಂಬಾ ಗುಂಡಿಗಳೇ ಕಾಣುತ್ತಿವೆ. ರಸ್ತೆ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಅತಿಯಾಗಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷ್ಯ ಏನು ಬೇಕು?

ಬೆಂಗಳೂರಿನಲ್ಲೇ ಹಲವು ಒಳ್ಳೆಯ ರಸ್ತೆಗಳಿವೆ. ಗುಂಡಿ ಬೀಳದ ಹಾಗೆ ರಸ್ತೆ ನಿರ್ಮಿಸುವುದು ಗೊತ್ತಿದೆ. ಆದರೆ, ಅದನ್ನು ಬಳಕೆ ಮಾಡುತ್ತಿಲ್ಲ ಎಂಬುದು ಸತ್ಯ. ರಸ್ತೆ ನಿರ್ಮಾಣದಲ್ಲಿನ ಭ್ರಷ್ಟಾಚಾರ ಅಮಾಯಕರ ಪ್ರಾಣಕ್ಕೇ ಸಂಚಕಾರ ತರುತ್ತಿದೆ. ಗುಂಡಿಗಳಿಂದ ಸಾವು, ನೋವುಗಳು ಸಂಭವಿಸುತ್ತಿವೆ. ಮುಂದುವರಿದ ದೇಶಗಳಲ್ಲಿ ಇರುವಂತೆ ಇಂತಹ ಪ್ರಕರಣಗಳಲ್ಲಿ ಸರ್ಕಾರವನ್ನೇ ಹೊಣೆಗಾರನನ್ನಾಗಿ ಮಾಡಿ ಮೊಕದ್ದಮೆ ಹೂಡುವ ವ್ಯವಸ್ಥೆ ತರಬೇಕಿದೆ.

ಸರ್ಕಾರ ನಡೆಸುವವರಿಗೆ ಜನರ ಬಗ್ಗೆ ಕಾಳಜಿಯೇ ಇಲ್ಲ. ಕೇವಲ ಚುನಾವಣೆಗಳನ್ನು ನಡೆಸುವುದರಲ್ಲೇ ಮುಳುಗಿದ್ದಾರೆ. ಸ್ವತಃ ಮುಖ್ಯಮಂತ್ರಿಯವರೇ ಬೆಂಗಳೂರಿನ ಉಸ್ತುವಾರಿ ಹೊಂದಿದ್ದಾರೆ. ಆದರೂ, ರಸ್ತೆ ಗುಂಡಿ ಮುಚ್ಚಲು ಇಷ್ಟೊಂದು ವಿಳಂಬ ಏಕೆ ಎಂಬ ಪ್ರಶ್ನೆಗೆ ಅವರೇ ಉತ್ತರಿಸಬೇಕಿದೆ. ಪಾಲಿಕೆಯಲ್ಲಿ ಚುನಾಯಿತ ಸದಸ್ಯರೂ ಇಲ್ಲ. ಜನರು ಬೀದಿಗೆ ಇಳಿದು ಹೋರಾಡುವುದೊಂದೆ ದಾರಿ.



ಶಾಂತಲಾ ದಾಮ್ಲೆ, ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷೆ

15 ದಿನವೂ ಬೇಕಿಲ್ಲ

ಬಿಬಿಎಂಪಿ ವ್ಯಾಪ್ತಿಯಲ್ಲಿ 1,500 ಕಿ.ಮೀ. ಉದ್ದ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಿವೆ. 11,500 ಕಿ.ಮೀ. ಉದ್ದದ ಸಣ್ಣ ರಸ್ತೆಗಳಿವೆ. ರಸ್ತೆ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳದೇ ಇರುವುದರಿಂದ ಪದೇ ಪದೇ ಗುಂಡಿಗಳು ಬೀಳುತ್ತಿವೆ. ಕಾಂಕ್ರೀಟ್ ರಸ್ತೆಗಳು, ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಈ ಸಮಸ್ಯೆ ಇಲ್ಲ.



ರಸ್ತೆ ಗುಂಡಿಗಳನ್ನು ಮುಚ್ಚಲು ಬೇಕಾದ ಎಲ್ಲ ಸೌಲಭ್ಯಗಳೂ ಇವೆ. ದಿನವೊಂದಕ್ಕೆ 60 ಲಾರಿಗಳಷ್ಟು ಡಾಂಬರು ಮಿಶ್ರಿತ ಜೆಲ್ಲಿ ಸಿದ್ಧಪಡಿಸುವ ಘಟಕವನ್ನು ರಾಜ್ಯ ಸರ್ಕಾರವೇ ಸ್ಥಾಪಿಸಿದೆ. ಅದನ್ನು ಸಮರ್ಪಕವಾಗಿ ಬಳಸಿಕೊಂಡರೆ 15 ದಿನಗಳೊಳಗೆ ಬಿಬಿಎಂಪಿ ವ್ಯಾಪ್ತಿಯ ಎಲ್ಲ ರಸ್ತೆಗಳನ್ನೂ ಗುಂಡಿ ಮುಕ್ತಗೊಳಿಸಬಹುದು. ರಸ್ತೆ ಗುಂಡಿ ಮುಚ್ಚಲು ಅನುದಾನದ ಕೊರತೆ ಇಲ್ಲ. ಮಳೆ ಇದ್ದಾಗ ಕೆಲಸ ಕಷ್ಟ. ಆದರೆ, ಮಳೆ ಕಡಿಮೆಯಾದರೂ ಗುಂಡಿ ಮುಚ್ಚಲು ಸಾಧ್ಯ. ಸದ್ಯ ಇರುವ ಸೌಲಭ್ಯ ಆಧಾರದಲ್ಲಿ ರಸ್ತೆಗಳ ಗುಂಡಿ ಮುಚ್ಚುವುದು ಬಿಬಿಎಂಪಿ ಪಾಲಿಗೆ ಸವಾಲಿನ ಕೆಲಸವೇ ಆಗಬಾರದು. ರಸ್ತೆ ನಿರ್ಮಾಣ, ನಿರ್ವಹಣೆ ಮತ್ತು ಗುಂಡಿ ಮುಚ್ಚುವ ವಿಚಾರದಲ್ಲಿ ಮಾರ್ಗಸೂಚಿ ಪಾಲಿಸಿದರೆ ಸಮಸ್ಯೆಯೇ ಇರುವುದಿಲ್ಲ.

ಕೆ.ಟಿ. ನಾಗರಾಜ್, ಬಿಬಿಎಂಪಿಯ ನಿವೃತ್ತ ಮುಖ್ಯ ಎಂಜಿನಿಯರ್

'ಎಲ್ಲ ಚುನಾವಣೆಗಳಲ್ಲೂ ಅಭಿವೃದ್ಧಿಯೇ ಮಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಪರಿಷತ್, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಬಿಬಿಎಂಪಿ ಮತ್ತು 2023 ರ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಸಿದ್ಧತೆ ನಡೆಸಿಕೊಳ್ಳಲು ರಾಜ್ಯ ಬಿಜೆಪಿ ಘಟಕದ ಪದಾಧಿಕಾರಿಗಳ ಸಭೆ ತೀರ್ಮಾನಿಸಿದೆ.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಮುಖ್ಯ ವಕ್ತಾರ ಗಣೇಶ್ ಕಾರ್ಣಿಕ್ ಅವರು, ಮುಂಬರುವ ವಿಧಾನಪರಿಷತ್, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಬಿಬಿಎಂಪಿ ಚುನಾವಣೆಗಳನ್ನು ರಾಜ್ಯ ಸರ್ಕಾರದ ಅಭಿವೃದ್ಧಿ ಕೆಲಸಗಳನ್ನೇ ಮುಂದಿಟ್ಟುಕೊಂಡು ಎದುರಿಸುವ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು ಎಂದರು.

ಕಾಂಗ್ರೆಸ್‌ನವರು ಬಿಬಿಎಂಪಿ ಚುನಾವಣೆ ಗಮನದಲ್ಲಿಟ್ಟುಕೊಂಡು ಮೇಕೆದಾಟು ಯೋಜನೆಗೆ ಆಗ್ರಹಿಸಿ ಹೋರಾಟಕ್ಕೆ ಇಳಿದಿರುವುದರಲ್ಲಿ ಅರ್ಥವಿಲ್ಲ. ಅವರ ಅಧಿಕಾರದ ಅವಧಿಯಲ್ಲಿ ಅದಕ್ಕಾಗಿ ಪ್ರಯತ್ನಿಸದೇ ಈಗ ಹೋರಾಟ ಮಾಡಿದರೆ ಪ್ರಯೋಜನವೇನು ಎಂದೂ ಪ್ರಶ್ನಿಸಿದರು.

ಈಗಾಗಲೇ 25 ಕ್ಷೇತ್ರಗಳ ಚುನಾವಣೆಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಶೇ 80 ರಷ್ಟು ಗೆದ್ದಿರುವುದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅನುಕೂಲವಾಗಲಿದೆ. ಎಲ್ಲ ಕಡೆಗಳಿಗೂ ಉತ್ತಮ ಅಭ್ಯರ್ಥಿಗಳನ್ನು ಹಾಕಲಾಗುವುದು ಎಂದು ಸಭೆಯಲ್ಲಿ ಅಧ್ಯಕ್ಷ ನಳಿನ್‌ಕುಮಾರ್ ತಿಳಿಸಿದ್ದಾಗಿ ಕಾರ್ಣಿಕ್ ಹೇಳಿದರು.

ಚುನಾವಣಾ ದಿನಾಂಕ ಪ್ರಕಟವಾಗಿರುವುದರಿಂದ ನ. 18 ರಿಂದಲೇ 'ಜನಸ್ವರಾಜ್ ಸಮಾವೇಶ'ಗಳನ್ನು ನಾಲ್ಕು ತಂಡಗಳಲ್ಲಿ ನಡೆಸಲಾಗುವುದು. ಈ ಹಿಂದೆ ನ.19 ರಿಂದ ನಡೆಸಲು ತೀರ್ಮಾನಿಸಲಾಗಿತ್ತು. ಈ ಸಮಾವೇಶಗಳನ್ನು ಯಶಸ್ವಿಗೊಳಿಸಲು ಕಾರ್ಯಕರ್ತರು ಶ್ರಮಿಸಬೇಕು ಎಂದೂ ಅವರು ಸಲಹೆ ನೀಡಿದರು.

ಸಭೆಯಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆಗಳ ಬಗ್ಗೆ ಚರ್ಚೆ ನಡೆಸಲಾಯಿತು. ಹಾನಗಲ್ ಸೋಲಿನ ಬಗ್ಗೆ ಹೆಚ್ಚಿನ ಚರ್ಚೆ ನಡೆಯಲಿಲ್ಲ. ಅಲ್ಲಿ ಜಿದ್ದಾಜಿದ್ದಿನ ಸ್ಪರ್ಧೆಯನ್ನು ನಿರೀಕ್ಷಿಸಲಾಗಿತ್ತು. ಮುಂದಿನ ದಿನಗಳಲ್ಲಿ ಆ ಬಗ್ಗೆ ಚರ್ಚೆ ನಡೆಸಲಾಗುವುದು ಎಂದರು.

ಕಾರ್ಯಕರ್ತರಿಗೆ ಅಭಿನಂದನೆ: ಜನಸಂಘದ ಕಾಲದಿಂದಲೂ ಪಕ್ಷಕ್ಕಾಗಿ ದುಡಿದ ಮತ್ತು ಕೊಡುಗೆ ನೀಡಿದ ಕಾರ್ಯಕರ್ತರನ್ನು ಗುರುತಿಸಿ ಗೌರವಿಸುವ 'ಕಮಲ ಪುಷ್ಪ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ತಳಮಟ್ಟದಿಂದಲೂ ಕಾರ್ಯಕರ್ತರನ್ನು ಗುರುತಿಸಿ, ಅವರ ಸಾಧನೆಗಳ ಪುಸ್ತಕ ಪ್ರಕಟಿಸಲಾಗುವುದು. ಪಕ್ಷದ ಕಾರ್ಯಕರ್ತರಿಗೆ ಇವರ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದು ಅವರು ತಿಳಿಸಿದರು.

3 ದಿನಗಳಲ್ಲಿ ದೆಹಲಿಗೆ ಸಂಭಾವ್ಯರ ಪಟ್ಟಿ

ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯುವ 25 ಸ್ಥಾನಗಳ ಚುನಾವಣೆಗೆ ಇನ್ನು ಎರಡು– ಮೂರು ದಿನಗಳಲ್ಲಿ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ದೆಹಲಿಗೆ ಕಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಗಳವಾರ ರಾತ್ರಿ ನಡೆದ ಪಕ್ಷದ ಪ್ರಮುಖರ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು.

ಅಭ್ಯರ್ಥಿಗಳ ಆಯ್ಕೆಯ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಪ್ರತಿಯೊಂದು ಕ್ಷೇತ್ರಕ್ಕೂ ತಲಾ ಮೂರು ಹೆಸರುಗಳು ಬಂದಿವೆ. ಇನ್ನೊಂದು ಬಾರಿ ಜಿಲ್ಲಾ ಮಟ್ಟದಲ್ಲಿ ಸಂಭಾವ್ಯ ಅಭ್ಯರ್ಥಿಗಳ ಬಗ್ಗೆ ಚರ್ಚೆ ನಡೆಸಲು ಸಭೆಯಲ್ಲಿ ಸೂಚಿಸಲಾಗಿದೆ. ಜಿಲ್ಲೆಗಳಿಗೆ ವೀಕ್ಷಕರನ್ನು ಕಳುಹಿಸಿ ಕಾರ್ಯಕರ್ತರು, ಶಾಸಕರು ಮತ್ತು ಸಂಸದರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಬೊಮ್ಮಾಯಿ ಹೇಳಿದರು.

ಬೇರೆ ಪಕ್ಷದಿಂದ ಬರುವವರ ಬಗ್ಗೆಯೂ ಚರ್ಚೆ ನಡೆದಿದೆ. ಯಾವುದೇ ತೀರ್ಮಾನ ಆಗಿಲ್ಲ ಎಂದೂ ಅವರು ತಿಳಿಸಿದರು.

ನಿಗಮ– ಮಂಡಳಿ ನೇಮಕ ಚರ್ಚೆ: ನಿಗಮ–ಮಂಡಳಿಗಳಿಗೆ ಪಕ್ಷ ನಿಷ್ಠರು ಮತ್ತು ಕಾರ್ಯಕರ್ತರನ್ನು ನೇಮಕ ಮಾಡುವ ಬಗ್ಗೆಯೂ ವಿಸ್ತೃತ ಚರ್ಚೆ ನಡೆಯಿತು. ಈ ಹಿಂದೆ ಪಕ್ಷಕ್ಕೆ ಕೆಲಸ ಮಾಡದವರನ್ನೂ ನೇಮಕ ಮಾಡಲಾಗಿದೆ. ಅಂತಹವರನ್ನು ಬದಲಿಸಬೇಕು ಎಂಬ ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಚರ್ಚೆ ನಡೆಯಿತು ಎಂದು ಮೂಲಗಳು ಹೇಳಿವೆ.



ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್, ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮಾತುಕತೆಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ

ಡಿ.18–19 ರಾಜ್ಯ ಕಾರ್ಯಕಾರಿಣಿ

ಪಕ್ಷ ರಾಜ್ಯ ಕಾರ್ಯಕಾರಿಣಿ ಸಭೆ ಹುಬ್ಬಳ್ಳಿಯಲ್ಲಿ ಡಿಸೆಂಬರ್ 18 ಮತ್ತು 19 ರಂದು ನಡೆಸಲು ತೀರ್ಮಾನಿಸಲಾಗಿದೆ ಎಂದು ಕಾರ್ಣಿಕ್ ತಿಳಿಸಿದರು.

ನಕ್ಸಲ್ ಮುಖಂಡರಾದ 'ಬಿಜಿಕೆ', ಸಾವಿತ್ರಿ ಬಂಧನ

ಕೋಯಿಕ್ಕೋಡ್, ಕೇರಳ: ಸಿಪಿಐನ (ಮಾವೊವಾದಿ) ಮುಖಂಡರಾದ ಬಿ.ಜಿ. ಕೃಷ್ಣಮೂರ್ತಿ ಹಾಗೂ ಸಾವಿತ್ರಿ ಅವರನ್ನು ಕೇರಳ– ಕರ್ನಾಟಕ ಗಡಿಭಾಗದಲ್ಲಿ ಕೇರಳದ ಭಯೋತ್ಪಾದನಾ ನಿಗ್ರಹ ದಳದ ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಕೃಷ್ಣಮೂರ್ತಿ ಅವರು ಕರ್ನಾಟಕದ ಶೃಂಗೇರಿಯವರು. ನಕ್ಸಲ್ ವಲಯದಲ್ಲಿ ಅವರನ್ನು 'ಬಿಜಿಕೆ' ಎಂದೇ ಕರೆಯಲಾಗುತ್ತದೆ. ಸಿಪಿಐನ (ಮಾವೊವಾದಿ) ಪಶ್ಚಿಮ ಘಟ್ಟಗಳ ವಿಶೇಷ ವಲಯ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

2005ರಲ್ಲಿ ಸಾಕೇತ್ ರಾಜನ್ ಹತ್ಯೆ ನಂತರ ಅವರು ಪಕ್ಷದ ನಾಯಕತ್ವ ವಹಿಸಿಕೊಂಡರು. ಸಾವಿತ್ರಿ ಅವರು ಸಂಘಟನೆಯ 'ಕಬನಿ ದಳಂ'ನ ಕಮಾಂಡರ್ ಆಗಿದ್ದಾರೆ.

ಹಳೆಯ ದಿನಗಳನ್ನು ನೆನಪಿಸಿಕೊಂಡ ಬೆಳವಾಡಿ

'ಅವಕಾಶ ನೀಡದ ಕನ್ನಡ ರಂಗಭೂಮಿ ಜಾತಿ ಪ್ರಜ್ಞೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ, 'ರಾಜ್ಯೋತ್ಸವ ಪ್ರಶಸ್ತಿ' ನೀಡಿರುವುದು ಸಂತಸವನ್ನುಂಟು ಮಾಡಿದೆ. ಬಕೆಟ್ ಹಿಡಿದು ಈ ಪ್ರಶಸ್ತಿ ಪಡೆದಿದ್ದಾರೆ ಅನ್ನುವರಾರೂ ನನಗೆ ಬಕೆಟ್ ನೀಡಿಲ್ಲ. ಬಕೆಟ್ ಹಿಡಿಯುವ ಬಗೆಯೂ ನನಗೆ ತಿಳಿದಿಲ್ಲ...'

ಇವು ರಂಗಭೂಮಿ ಹಾಗೂ ಚಲನಚಿತ್ರ ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅವರ ಮನದಾಳದ ಮಾತುಗಳು. ಕರ್ನಾಟಕ ನಾಟಕ ಅಕಾಡೆಮಿಯು ನಗರದಲ್ಲಿ ಹಮ್ಮಿಕೊಂಡ 'ರಂಗ ಚಾವಡಿ' ಕಾರ್ಯಕ್ರಮದಲ್ಲಿ ತಮ್ಮ ಜೀವನ ಮತ್ತು ರಂಗಭೂಮಿಯ ಅನುಭವಗಳನ್ನು ಅವರು ಹಂಚಿಕೊಂಡರು.

'70ರ ದಶಕದಲ್ಲಿ ಕನ್ನಡ ರಂಗಭೂಮಿಯಲ್ಲಿ ಜಾತಿ ಪ್ರಜ್ಞೆ ಮನೆಮಾಡಿತ್ತು. ಇದರಿಂದಾಗಿ ಕನ್ನಡ ರಂಗಭೂಮಿಯವರು ನನ್ನನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಪ್ರಸನ್ನ ಅವರಿಂದ ಪ್ರೇರಣೆ ಪಡೆದಿದ್ದೆ. ಆದರೆ, ಅವರೂ ಅವಕಾಶ ನೀಡಲಿಲ್ಲ. ಆ ವೇಳೆ ರಾಜಾರಾಮ್ ಅವರ 'ಮುಖ್ಯಮಂತ್ರಿ' ನಾಟಕದಲ್ಲಿ ಅವಕಾಶ ಸಿಕ್ಕಿತು. ಅಷ್ಟಾಗಿಯೂ ಇಲ್ಲಿ ಬೆಳೆಯಲು ಸಾಧ್ಯವಿಲ್ಲ ಎಂದು ನಿರ್ಧರಿಸಿ, ಇಂಗ್ಲಿಷ್ ರಂಗಭೂಮಿಗೆ ಹೋದೆ' ಎಂದು ತಿಳಿಸಿದರು.

'ಇಂಗ್ಲಿಷ್ ಚೆನ್ನಾಗಿ ಬರುತ್ತಿದ್ದುದರಿಂದ ಅಲ್ಲಿ ಬೇಗ ಬೆಳೆದೆ. ಜಾತಿಯ ಪ್ರಶ್ನೆಯೇ ಅಲ್ಲಿ ಬರುತ್ತಿರಲಿಲ್ಲ. ಅಲ್ಲಿ ಬೆಳಕಿನ ವಿನ್ಯಾಸ ಮಾಡುತ್ತಿದ್ದೆ. ಕೆಲವೇ ವರ್ಷಗಳಲ್ಲಿ ನಿರ್ದೇಶನದತ್ತ ಹೊರಳಿ, ಯಶಸ್ಸು ಸಾಧಿಸಿದೆ. ಮುಂದೆ ಕಿರುತೆರೆ, ಚಲನಚಿತ್ರ ಕ್ಷೇತ್ರಗಳಿಗೂ ಕಾಲಿಟ್ಟೆ. 'ಗರ್ವ' ಧಾರಾವಾಹಿ ಬಳಿಕ ಇಂಗ್ಲಿಷ್ ಚಲನಚಿತ್ರ 'ಸ್ಟಂಬಲ್' ಅನ್ನು ನಿರ್ಮಿಸಿ, ನಿರ್ದೇಶಿಸಿದೆ. ಆಗ ಸಿನಿಮಾಕ್ಕಾಗಿ ಮಾಡಿದ ಸಾಲಕ್ಕೆ ಕಾರು, ಮನೆಯನ್ನೂ ಮಾರಿಕೊಳ್ಳಬೇಕಾಯಿತು. ಆಗ ಮಾಡಿದ್ದ ಸಾಲ ಈಗಲೂ ತೀರಿಲ್ಲ' ಎಂದರು.

ರಂಗ ನಿರ್ದೇಶಕ ಅಭಿರುಚಿ ಚಂದ್ರು ಕಾರ್ಯಕ್ರಮ ನಿರ್ವಹಿಸಿದರು. ಅಕಾಡೆಮಿ ಅಧ್ಯಕ್ಷ ಪ್ರೊ.ಆರ್. ಭೀಮಸೇನ ಇದ್ದರು.



'ರಂಗ ಚಾವಡಿ' ಕಾರ್ಯಕ್ರಮದಲ್ಲಿ ಪ್ರಕಾಶ್ ಬೆಳವಾಡಿ ಮಾತನಾಡಿದರು. ಅಭಿರುಚಿ ಚಂದ್ರು ಇದ್ದಾರೆ –ಪ್ರಜಾವಾಣಿ ಚಿತ್ರ

'ಕೋವಿಡ್ ಸೇವೆಗೆ ಸಂಭಾವನೆ'

'ರಂಗಭೂಮಿಯಲ್ಲಿ ಸಿಗುವ ಗೌರವ ಹಾಗೂ ಆತ್ಮವಿಶ್ವಾಸ ಎಲ್ಲಿಯೂ ಸಿಗುವುದಿಲ್ಲ. 'ಪರ್ವ' ನಾಟಕ ನಿರ್ದೇಶನಕ್ಕೆ ನೀಡಿದ ಸಂಭಾವನೆ ₹1.5 ಲಕ್ಷವನ್ನು ರೋಟರಿ ಸಂಸ್ಥೆ ಮೂಲಕ ಕೋವಿಡ್ ಸೇವೆಗೆ ನೀಡಿದ್ದೇನೆ. ರಂಗಭೂಮಿಯಿಂದ ಬಂದ ಎಲ್ಲ ಸಂಭಾವನೆಯನ್ನೂ ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದೇನೆ' ಎಂದು ಪ್ರಕಾಶ್ ಬೆಳವಾಡಿ ತಿಳಿಸಿದರು.

'ನನಗೆ ನಟನೆಯಲ್ಲಿ ಆಸಕ್ತಿ ಇರಲಿಲ್ಲ. ಅನಿರೀಕ್ಷಿತವಾಗಿ ಬಂದ ಅವಕಾಶವೊಂದರಿಂದ ನಟನಾ ಕ್ಷೇತ್ರಕ್ಕೆ ಬರಬೇಕಾಯಿತು. ಮೊದಲೆಲ್ಲಾ ಸಿನಿಮಾಕ್ಕೆ ಕೊಟ್ಟಷ್ಟು ಹಣವನ್ನು ತೆಗೆದುಕೊಳ್ಳುತ್ತಿದೆ' ಎಂದರು.

ಕೋರ್ಟ್ ಕಲಾಪ ಪ್ರಸಾರ: ಸರ್ಕಾರಕ್ಕೆ ನಿಯಮ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋರ್ಟ್ ಕಲಾಪಗಳ ನೇರ ಪ್ರಸಾರಕ್ಕೆ (ಲೈವ್ ಸ್ಟ್ರೀಮಿಂಗ್) ಸಂಬಂಧಿಸಿದ ನಿಯಮಗಳನ್ನು ರೂಪಿಸಿ ಸರ್ಕಾರಕ್ಕೆ ಕಳಿಸಿಕೊಡಲಾಗಿದೆ' ಎಂದು ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಮಾಹಿತಿ ನೀಡಲಾಗಿದೆ.

ಈ ಕುರಿತಂತೆ ವಕೀಲ ದಿಲ್‌ರಾಜ್ ರೋಹಿತ್ ಸಿಕ್ವೇರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಿಜಿಸ್ಟ್ರಾರ್ ಜನರಲ್ ಪರ ವಕೀಲರು, '2021ರ ಸೆ.17ರಂದು ನಡೆದ ಹೈಕೋರ್ಟ್ ನ್ಯಾಯಮೂರ್ತಿಗಳ ಆಡಳಿತಾತ್ಮಕ ಪೂರ್ಣ ಸಭೆಯಲ್ಲಿ (ಫುಲ್ ಕೋರ್ಟ್) ಕೋರ್ಟ್ ಕಲಾಪ ನೇರ ಪ್ರಸಾರ ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ. ಅದರನ್ವಯ ನಿಯಮಗಳನ್ನು ರೂಪಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ' ಎಂದು ತಿಳಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಎನ್‌ಟಿಎಂ ಶಾಲೆ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಮೈಸೂರಿನ ನಾರಾಯಣ ಶಾಸ್ತ್ರಿ–ಕೃಷ್ಣ ವಿಲಾಸ ರಸ್ತೆಯಲ್ಲಿರುವ ಪುರಾತನ ನಿರಂಜನ ಮಠ ಹಾಗೂ ಮಹಾರಾಣಿ ಮಾದರಿ (ಎನ್‌ಟಿಎಂ) ಶಾಲೆಗೆ ಸೇರಿದ ಸ್ಥಳದಲ್ಲಿ ಸ್ವಾಮಿ ವಿವೇಕಾನಂದ ಸ್ಮಾರಕ ನಿರ್ಮಾಣಕ್ಕಾಗಿ 36 ಸಾವಿರ ಚದರ ಅಡಿ ಜಮೀನನ್ನು ರಾಮಕೃಷ್ಣಾಶ್ರಮಕ್ಕೆ ನೀಡಿರುವ ಸರ್ಕಾರದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಅಖಿಲ ಭಾರತ ವೀರಶೈವ ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಮೈಸೂರಿನ ಟಿ.ಎಸ್.ಲೋಕೇಶ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಪ್ರತಿವಾದಿಗಳಾದ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಮೈಸೂರು ರಾಮಕೃಷ್ಣಾಶ್ರಮದ ಅಧ್ಯಕ್ಷರಿಗೆ ತುರ್ತು ನೋಟಿಸ್ ಜಾರಿಗೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜೆ.ಎಂ.ಅನಿಲ್‌ಕುಮಾರ್, 'ರಾಜ್ಯ ಸರ್ಕಾರ ಈ ಸ್ಥಳವನ್ನು ಒತ್ತಡಕ್ಕೆ ಮಣಿದು ರಾಮಕೃಷ್ಣಾಶ್ರಮಕ್ಕೆ ಹಸ್ತಾಂತರಿಸಿದೆ. ವಿವೇಕಾನಂದರ ಸ್ಮಾರಕ ನಿರ್ಮಾಣಕ್ಕೆ ನಮ್ಮ ಅಡ್ಡಿಯಿಲ್ಲ. ಆದರೆ, ಇಲ್ಲಿನ ಪುರಾತನ ಈಶ್ವರ ದೇವಾಲಯ ಮತ್ತು ಮಠದ ಕುರುಹುಗಳನ್ನು ನಾಶ ಮಾಡಿ ಸ್ಮಾರಕ ನಿರ್ಮಿಸಲು ಸಮುದಾಯದ ಭಕ್ತರ ಅಸಮ್ಮತಿಯಿದೆ. ಆದ್ದರಿಂದ, ವಿವಾದಿತ ಸ್ಥಳದ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಬೇಕು ಹಾಗೂ ಸರ್ಕಾರದ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿದರು.



ಸುನಂದಾ ಸಾಹುಕಾರ, ಸುಜಾತಾ ಅಲ್ಲಮಪ್ರಭು ಹಾಗೂ ಅರುಣಾ ಮಹಾಲಿಂಗಪುರ

ಅಂಗವೈಕಲ್ಯಕ್ಕೆ ಸಡ್ಡು: ಚಿನ್ನದ ಪದಕ ಮುಡಿಗೆ

ವಿಜಯಪುರ: ತಂದೆಯಿಲ್ಲದ ಕೊರಗಿನಲ್ಲಿಯೂ ಅಂಗವೈಕಲ್ಯ ಮೆಟ್ಟಿ ನಿಂತು, ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದ ಯುವತಿ ಹಾಗೂ ಕಿರಾಣಿ ಅಂಗಡಿ ಮಾಲೀಕನ ಪುತ್ರಿ ತಲಾ ಮೂರು ಚಿನ್ನದ ಪದಕ ಮುಡಿಗೇರಿಸಿಕೊಂಡು ಸಂಭ್ರಮಿಸಿದರು.

ತೊರವಿ ಬಳಿಯ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ 12ನೇ ಘಟಿಕೋತ್ಸವದ ಆಕರ್ಷಣೆ ಇದು.

20 ವರ್ಷಗಳ ಹಿಂದೆ ತಂದೆಯನ್ನು ಕಳೆದುಕೊಂಡಿರುವ ಜಮಖಂಡಿ ತಾಲ್ಲೂಕು ಕುಂಚನೂರ ಗ್ರಾಮದ ಸುನಂದಾ ಸಾಹುಕಾರಗೆ ಅಂಗವೈಕಲ್ಯವಿದೆ. ಎಂ.ಎ ಕನ್ನಡ ವಿಷಯದಲ್ಲಿ ಮೂರು ಚಿನ್ನ ಪಡೆದರು.

'ಚಿಕ್ಕಪ್ಪನ ಆಶ್ರಯದಲ್ಲಿ ಶಿಕ್ಷಣ ಪಡೆದೆ. ಪರಿಶ್ರಮ ಪಟ್ಟು ಓದಿದ್ದರಿಂದ ಚಿನ್ನದ ಪದಕ ಪಡೆಯಲು ಸಾಧ್ಯವಾಯಿತು' ಎಂದು ಸುನಂದಾ ಹೇಳಿದರು.

ವಿಜಯಪುರದ ಕಿರಾಣಿ ಅಂಗಡಿ ಮಾಲೀಕರ ಮಗಳಾದ ಅರುಣಾ ಮಹಾಲಿಂಗಪುರ ದೈಹಿಕ ಶಿಕ್ಷಣ ವಿಷಯದಲ್ಲಿ ಮೂರು ಚಿನ್ನದ ಪದಕ ಪಡೆದ್ದಾರೆ.

ಬೆಳಗಾವಿಯ ಕೆ.ಎಲ್.ಇ ಸಂಸ್ಥೆಯಲ್ಲಿ ಡಯಟೀಷಿಯನ್ ಆಗಿ ಕಾರ್ಯನಿರ್ವಹಿಸುತ್ತಿರುವ ಸುಜಾತಾ ಅಲ್ಲಮಪ್ರಭು ಆಹಾರ ಪೂರೈಕೆ ಮತ್ತು ಪೋಷಣೆ ವಿಷಯದಲ್ಲಿ ಮೂರು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ.

ಗೌರವ ಡಾಕ್ಟರೇಟ್ ಪದವಿ ಪ್ರದಾನ: ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋಥ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಡಾ.ಸುಮಾ ಸುಧೀಂದ್ರ (ಸಂಗೀತ) ಮತ್ತು ಕಲ್ಪನಾ ಸರೋಜ್ (ಉದ್ಯಮಶೀಲತೆ ಮಹಿಳಾ ಸಬಲೀಕರಣ) ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದರು. ಲೇಖಕಿ ವೈದೇಹಿ-(ಸಾಹಿತ್ಯ)ಗೈರಾಗಿದ್ದರು.

ವೈದ್ಯಕೀಯ ಕೋರ್ಸ್ ಶುಲ್ಕ ಹೆಚ್ಚಳವಿಲ್ಲ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021–22) ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕ ಹೆಚ್ಚಳ ಮಾಡಲು ಸಾಧ್ಯ ಇಲ್ಲವೆಂದು ಖಾಸಗಿ ವೈದ್ಯಕೀಯ ಕಾಲೇಜುಗಳ ಒಕ್ಕೂಟಕ್ಕೆ ಈಗಾಗಲೇ ಸ್ಪಷ್ಟಪಡಿಸಿದ್ದೇನೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಖಾಸಗಿ ವೈದ್ಯಕೀಯ ಕಾಲೇಜುಗಳ ಒಕ್ಕೂಟ ಶುಲ್ಕ ಹೆಚ್ಚಳಕ್ಕೆ ಬೇಡಿಕೆ ಇಟ್ಟಿದೆ. ಆದರೆ, ಒಕ್ಕೂಟದ ಪ್ರತಿನಿಧಿಗಳಿಗೆ ಸರ್ಕಾರದ ನಿಲುವು ತಿಳಿಸಿದ್ದೇನೆ' ಎಂದರು.

'ಈ ವರ್ಷ ಶುಲ್ಕ ಹೆಚ್ಚಿಸಲು ಸಾಧ್ಯ ಇಲ್ಲ. ಆದರೆ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಇದಕ್ಕೆ ಒಪ್ಪುತ್ತಿಲ್ಲ. ಈ ಬಗ್ಗೆ ಮತ್ತೊಮ್ಮೆ ಮಾತುಕತೆ ನಡೆಸಲಾಗುವುದು' ಎಂದರು.

'ಮಕ್ಕಳಿಗೆ ಮುಂದಿನ ವಾರ ಲಸಿಕೆ ವಿತರಣೆ ಸಾಧ್ಯತೆ'



ಬೆಂಗಳೂರು: 'ಝೈಡಸ್ ಕ್ಯಾಡಿಲಾ ಕಂಪನಿಯು ಅಭಿವೃದ್ಧಿಪಡಿಸಿರುವ 'ಝೈಕೋವ್-ಡಿ' ಕೋವಿಡ್ ಲಸಿಕೆಯನ್ನು ಮುಂದಿನ ವಾರದಿಂದ ರಾಜ್ಯದಲ್ಲಿ ಮಕ್ಕಳಿಗೆ ವಿತರಿಸುವ ಸಾಧ್ಯತೆ ಇದೆ' ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಮಿಂಟೊ ಕಣ್ಣಿನ ಆಸ್ಪತ್ರೆಯ 125ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಈ ಲಸಿಕೆಯ ಒಂದು ಕೋಟಿ ಡೋಸ್ ಖರೀದಿಗೆ ಬೇಡಿಕೆ ಸಲ್ಲಿಸಿದೆ. ಪೂರೈಕೆಯಾದ ಬಳಿಕ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತದೆ. 'ಆರೋಗ್ಯ ನಂದನ' ಕಾರ್ಯಕ್ರಮದಡಿ ಮಕ್ಕಳ ಮಾಹಿತಿ ಕಲೆ ಹಾಕಲಾಗಿದೆ. ಎಷ್ಟು ಡೋಸ್‌ಗಳು ಲಭ್ಯವಾಗುತ್ತವೆ ಎಂಬ ಆಧಾರದಲ್ಲಿ ಈ ಲಸಿಕೆಯನ್ನು 12ರಿಂದ 18 ವರ್ಷದ ಮಕ್ಕಳಿಗೆ ಆದ್ಯತೆಯ ಮೇರೆಗೆ ನೀಡಲಾಗುತ್ತದೆ' ಎಂದರು.

'18 ವರ್ಷ ಮೇಲ್ಪಟ್ಟವರಲ್ಲಿ ಶೇ 89 ರಷ್ಟು ಮಂದಿ ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ ಶೇ 48 ರಷ್ಟು ಮಂದಿ ಎರಡನೇ ಡೋಸ್ ಹಾಕಿಸಿಕೊಂಡಿದ್ದಾರೆ. ಕೋವಿಡ್ ನಿಯಂತ್ರಣಕ್ಕೆ ಬಂದಿದೆ ಅಂದುಕೊಂಡು ಲಸಿಕೆ ಪಡೆಯಲು ಜನರು ಹಿಂದೇಟು ಹಾಕಬಾರದು' ಎಂದರು.

ಬ್ರಾಹ್ಮಣರಿಗೆ ವಂಚಿಸಿದವರನ್ನು ದೂರವಿರಿಸಿ: ನ್ಯಾ. ಎನ್. ಕುಮಾರ್

ಪ್ರಜಾವಾಣಿ ವಾರ್ತೆ



ಎಸ್‌ರಘುನಾಥ್ ಅವರ ಚುನಾವಣಾ ಕಚೇರಿಗೆ ಚಾಲನೆ ನೀಡಿದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಹೆಚ್.ಎಸ್. ಸಚ್ಚಿದಾನಂದಮೂರ್ತಿ ಮಾತನಾಡಿದರು. ಅಭ್ಯರ್ಥಿ ರಘುನಾಥ್, ನಿವೃತ್ತ ನ್ಯಾಯಮೂರ್ತಿ ಎನ್‌ಕುಮಾರ್ ಇದ್ದರು

ಬೆಂಗಳೂರು: 'ಶ್ರೀ ಗುರುರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್‌ಗೆ ವಂಚಿಸಿದವರಿಗೆ ರಕ್ಷಣೆ ನೀಡುತ್ತಿರುವವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ದೂರ ಇಡುವ ಅಗತ್ಯ ಇದೆ' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅಭಿಪ್ರಾಯಪಟ್ಟರು.

ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಎಸ್.ರಘುನಾಥ್ ಅವರ ಕತ್ರಿಗುಪ್ಪೆಯ ಅಶೋಕನಗರದಲ್ಲಿ ಆರಂಭಿಸಿರುವ ಚುನಾವಣಾ ಕಚೇರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕರ್ನಾಟಕದಲ್ಲಿನ 44 ಲಕ್ಷಕ್ಕೂ ಹೆಚ್ಚಿನ ಬ್ರಾಹ್ಮಣರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಮಹಾಸಭಾಕ್ಕೆ ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸುವ ಉತ್ತಮ ಅಧ್ಯಕ್ಷರ ಆಯ್ಕೆಯ ಅಗತ್ಯವಿದೆ. ರಘುನಾಥ್ ಆಯ್ಕೆಯಾದರೆ ಸಂಸ್ಥೆ ಸಮರ್ಥವಾಗಿ ಮುನ್ನಡೆದು, ಬ್ರಾಹ್ಮಣ ಸಮುದಾಯಕ್ಕೂ ಉಪಯೋಗವಾಗುವ ವಿಶ್ವಾಸ ಇದೆ ಎಂದು ಹೇಳಿದರು.

'ಶ್ರೀ ಗುರುರಾಘವೇಂದ್ರ ಬ್ಯಾಂಕಿಗೆ ವಂಚಿಸಿದವರಿಗೆ ರಕ್ಷಣೆ ನೀಡುತ್ತಿರುವವರಿಗೆ ಅಧಿಕಾರ ನೀಡಿದರೆ ಬ್ರಾಹ್ಮಣರಿಗೆ ಮತ್ತಷ್ಟು ಅನ್ಯಾಯ ಆಗುವ ಸಾಧ್ಯತೆ ಇದೆ. ಈ ಬ್ಯಾಂಕಿನಲ್ಲಿ ಹಣವಿಟ್ಟು ಕಳೆದುಕೊಂಡ 93 ಮಂದಿ ಈಗಾಗಲೇ ಜೀವ ಕಳೆದುಕೊಂಡಿದ್ದಾರೆ. ಇದುವರೆಗೆ ವಂಚಕರ ವಿರುದ್ಧ ಮಹಾಸಭಾದ ಪದಾಧಿಕಾರಿಗಳು ಒಂದು ಮಾತನ್ನೂ ಆಡಿಲ್ಲ' ಎಂದು ಆಕ್ಷೇಪಿಸಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಚ್.ಎಸ್. ಸಚ್ಚಿದಾನಂದಮೂರ್ತಿ ಮಾತನಾಡಿ, ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆಯ ಸಂದರ್ಭದಲ್ಲಿ ಮಂಡಳಿ ಕೈಗೊಂಡ ಸಮುದಾಯದ ನೆರವಿನ ಯೋಜನೆಗಳಿಗೆ ಮಹಾಸಭಾ ಸಹಕರಿಸಿಲ್ಲ ಎಂದರು.

ಅಭ್ಯರ್ಥಿ ಎಸ್.ರಘುನಾಥ್ ಮಾತನಾಡಿ, 'ಇಡೀ ರಾಜ್ಯದಾದ್ಯಂತ ಬ್ರಾಹ್ಮಣರ ಸಂಘಟನೆ ಮತ್ತು ಅಭ್ಯುದಯಕ್ಕೆ ಶ್ರಮಿಸುತ್ತೇನೆ' ಎಂದರು.

ದಾಸಸಾಹಿತ್ಯದ ಅರಳುಮಲ್ಲಿಗೆ ಪಾರ್ಥಸಾರಥಿ, ಖ್ಯಾತ ಗಾಯಕ ಶಶಿಧರ ಕೋಟೆ, ಸಿರಿನಾಡು ಮಹಾಸಭಾದ ಸುದರ್ಶನ್, ಮಹಾಸಭಾದ ಉಪಾಧ್ಯಕ್ಷ ಶಂಕರನಾರಾಯಣ, ಬಡಗನಾಡು ಅಧ್ಯಕ್ಷ ನಾಗೇಶ್, ಕೆಎಸ್‌ಎಸ್‌ಐಡಿಸಿ ಉಪಾಧ್ಯಕ್ಷ ದತ್ತಾತ್ರಿ, ವೈ.ಎನ್.ಶರ್ಮಾ, ವತ್ಸಲಾ ನಾಗೇಶ್ ಇದ್ದರು.



ಕುಲಾಂತರಿ ತಳಿಗಳ ಕ್ಷೇತ್ರ ಪರೀಕ್ಷೆಗೆ ಅವಕಾಶ ನೀಡದಿರಿ: ಅನಂತ ಅಶೀಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಜೋಳ ಮತ್ತು ಹತ್ತಿ ಜಾತಿಯ ಬಿ.ಟಿ ತಳಿಗಳ (ಕುಲಾಂತರಿ ತಳಿ) ಕ್ಷೇತ್ರ ಪರೀಕ್ಷೆಗೆ ಅವಕಾಶ ನೀಡಬಾರದು ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಮನವಿ ಮಾಡಿದ್ದಾರೆ.



ಅನಂತ ಹೆಗಡೆ ಅಶೀಸರ

'ಖಾಸಗಿ ಕೃಷಿ ಉದ್ದಿಮೆಯೊಂದು ಜೋಳ ಮತ್ತು ಹತ್ತಿ ತಳಿಗಳ (ಕುಲಾಂತರಿ ತಳಿ) ಬಗ್ಗೆ ಕ್ಷೇತ್ರ ಪರೀಕ್ಷೆ ನಡೆಸುವ ಉದ್ದೇಶದಿಂದ ನಿರಪೇಕ್ಷಣಾ ಪತ್ರ ಬಯಸಿ ರಾಜ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಗೆ ಮನವಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಇಲಾಖೆ ಅಭಿಪ್ರಾಯ ಸಂಗ್ರಹಿಸಿದೆ. ಕೃಷಿ ವಿಜ್ಞಾನಿಗಳು, ಪ್ರಗತಿಪರ ರೈತರು, ಪರಿಸರ ಶಾಸ್ತ್ರಜ್ಞರು ಇದಕ್ಕೆ ಅವಕಾಶ ನೀಡಬಾರದೆಂದು ಅಭಿಪ್ರಾಯ ನೀಡಿರುವುದು ಗೊತ್ತಾಗಿದೆ. ಮಂಡಳಿಗೂ ಆಕ್ಷೇಪಣೆಗಳು ಬಂದಿವೆ' ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಕುಲಾಂತರಿ ತಳಿಗಳನ್ನು ಬಳಸುವುದರಿಂದ ಮನುಷ್ಯರು, ಜಾನುವಾರುಗಳು ಮತ್ತು ಒಟ್ಟು ಕೃಷಿ ಪರಿಸರದ ಮೇಲೆ ಅಪಾಯಕಾರಿ ಪರಿಣಾಮ ಉಂಟಾಗುತ್ತದೆ ಎಂಬ ಕಾರಣಕ್ಕೆ 20ಕ್ಕೂ ಹೆಚ್ಚು ದೇಶಗಳು ಈ ತಂತ್ರಜ್ಞಾನವನ್ನು ನಿಷೇಧಿಸಿವೆ. ರಾಜ್ಯದಲ್ಲಿ ಈಗಾಗಲೇ ಬಿ.ಟಿ ಹತ್ತಿ ತಳಿ ಬೆಳೆಯಲು ಅವಕಾಶ ನೀಡಿದ್ದರಿಂದ ಪಾರಂಪರಿಕ ಹತ್ತಿ ತಳಿಗಳು ವಿನಾಶದ ಅಂಚಿಗೆ ತಲುಪಿವೆ. ಹೀಗಾಗಿ ಮತ್ತೆ ಹೊಸಬಗೆಯ ಬಿ.ಟಿ ತಳಿಗಳ ಪ್ರಯೋಗಕ್ಕೆ ಅನುಮತಿ ನೀಡಬಾರದು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಈ ರೀತಿಯ ಕ್ಷೇತ್ರ ಅಧ್ಯಯನ, ಪರೀಕ್ಷೆಗೆ ಮಧ್ಯಪ್ರದೇಶ, ಗುಜರಾತ್, ಛತ್ತೀಸ್‌ಗಢ, ತಮಿಳುನಾಡು ಮತ್ತಿತರ ರಾಜ್ಯಗಳು ಅನುಮತಿ ನೀಡಿಲ್ಲ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ 2010ರಲ್ಲಿ ಇದೇ ರೀತಿಯ ಪ್ರಸ್ತಾವಕ್ಕೆ ಅನುಮತಿ ನೀಡಿರಲಿಲ್ಲ. ಹೀಗಾಗಿ, ಸಮಗ್ರ ರೈತ ಸಮುದಾಯದ ಹಿತ ಹಾಗೂ ಕೃಷಿ ಜೀವವೈವಿಧ್ಯ ಪರಿಸರ ಸುರಕ್ಷತೆ ಇವರೆಡೂ ದೃಷ್ಟಿಯಿಂದ ಕುಲಾಂತರಿಗಳ ತಳಿ ಕ್ಷೇತ್ರ ಪರೀಕ್ಷೆಗಳಿಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಆನ್‌ಲೈನ್ ಮತ್ತು ಭೌತಿಕವಾಗಿ ಮೇಳ ವೀಕ್ಷಣೆಗೆ ವ್ಯವಸ್ಥೆ

ಜಿಕೆವಿಕೆ: ನಾಳೆಯಿಂದ 'ಕೃಷಿ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನಗಳ ಮಾಹಿತಿ ನೀಡಲು ಹಾಗೂ ಕೃಷಿಯಲ್ಲಿ ಲಾಭದಾಯಕ ವಿಧಾನಗಳನ್ನು ಪರಿಚಯಿಸುವ ಸಲುವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) 'ಕೃಷಿ ಮೇಳ'ವನ್ನು ನವೆಂಬರ್ 11ರಿಂದ 14ರವರೆಗೆ ಆಯೋಜಿಸಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್. ರಾಜೇಂದ್ರ ಪ್ರಸಾದ್, 'ಕೃಷಿ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ (ನ.11) ಬೆಳಿಗ್ಗೆ 11 ಗಂಟೆಗೆ ಉದ್ಘಾಟಿಸಲಿದ್ದಾರೆ. ಅದೇ ವೇಳೆ ಕೃಷಿ ಸಾಧಕರಿಗೆ ವಿವಿಧ ಪ್ರಶಸ್ತಿಗಳ ಪ್ರದಾನವೂ ನಡೆಯಲಿದೆ' ಎಂದರು.

'ಶಾಸಕ ಕೃಷ್ಣಬೈರೇಗೌಡ ಅವರು ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ, ಸಚಿವರಾದ ಎಸ್.ಟಿ.ಸೋಮಶೇಖರ್, ಕೆ.ಸುಧಾಕರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಕಳೆದ ವರ್ಷ ಕೋವಿಡ್ ಕಾರಣದಿಂದ ಮೇಳಕ್ಕೆ ಭೇಟಿ ನೀಡುವವರ ಪ್ರಮಾಣ ಸೀಮಿತಗೊಳಿಸಿ, ಆನ್‌ಲೈನ್ ಮೂಲಕ ಮೇಳ ವೀಕ್ಷಣೆಗೆ ಹೆಚ್ಚಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಬಾರಿ ಕೋವಿಡ್ ತೀವ್ರತೆ ತಗ್ಗಿರುವುದರಿಂದ ಮೊದಲಿನಂತೆ ಮೇಳ ವೀಕ್ಷಿಸಬಹುದು. ಆದರೆ, ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಕಡ್ಡಾಯ. ದೂರದ ಊರಿನ ರೈತರಿಗಾಗಿ ಆನ್‌ಲೈನ್ ಮೂಲಕವೂ ಮೇಳದ ನೇರಪ್ರಸಾರ ಇರಲಿದೆ' ಎಂದು ವಿವರಿಸಿದರು.



ಕೃಷಿ ಮೇಳಕ್ಕೆ ಸಿದ್ಧಗೊಂಡಿರುವ ಪ್ರದರ್ಶನ ತಾಕುಗಳನ್ನು ಕುಲಪತಿ ಎಸ್.ರಾಜೇಂದ್ರ ಪ್ರಸಾದ್ ವೀಕ್ಷಿಸಿದರು. ಸಂಶೋಧನಾ ನಿರ್ದೇಶಕ ವೈ.ಜಿ.ಷಡಕ್ಷರಿ, ಪ್ರೊ.ಕೆ.ಶಿವರಾಮ ಹಾಗೂ ಇತರರು ಇದ್ದರು.

ಕೃಷಿ ತಂತ್ರಜ್ಞಾನದ ಪ್ರಾತ್ಯಕ್ಷಿಕೆಗಳು

- ಖುಷ್ಕಿ ಬೇಸಾಯದ ಪದ್ಧತಿಗಳು
- ತೋಟಗಾರಿಕೆ ಬೆಳೆ ಮತ್ತು ಸೂಕ್ಷ್ಮ ಕೃಷಿ ಪ್ರಾತ್ಯಕ್ಷಿಕೆ
- ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ
- ಜೈವಿಕ ಇಂಧನ ಮತ್ತು ಸುಗಂಧ ದ್ರವ್ಯ ಸಸ್ಯಗಳು
- ಸಮಗ್ರ ಪೋಷಕಾಂಶಗಳು ಹಾಗೂ ಪೀಡೆ ನಿರ್ವಹಣೆ
- ಮಣ್ಣು ಪರೀಕ್ಷೆಗೆ ಅನುಗುಣವಾಗಿ ಬೆಳೆ ಸಂಯೋಜನೆ
- ಮಳೆ ಹಾಗೂ ಜಲಾನಯನ ನೀರಿನ ಕೊಯ್ಲು
- ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ
- ಬಿತ್ತನೆ ಬೀಜಗಳ ಪರೀಕ್ಷೆ ಹಾಗೂ ಶೇಖರಣೆ
- ಪಶುಸಂಗೋಪನೆ, ಕೃಷಿ ಅರಣ್ಯ, ಮೀನು ಸಾಕಣೆ
- ಹವಾಮಾನ ಚತುರ ಕೃಷಿ
- ಸಾವಯವ ಕೃಷಿ ಪದ್ಧತಿಗಳು

ಕೃಷಿ ಮೇಳ UAS GKVK, Bangalore 11-14 ನವೆಂಬರ್ 2021 November

ಮೇಳದ ವಿಶೇಷಗಳು

- 500 ಪ್ರದರ್ಶನ ಮಳಿಗೆಗಳು
- ಕೃಷಿ ಪರಿಕರಗಳ ಮಾರಾಟ ವ್ಯವಸ್ಥೆ
- ಜಿಕೆವಿಕೆ ಪ್ರವೇಶ ದ್ವಾರದಿಂದ ಉಚಿತ ಸಾರಿಗೆ
- ರಿಯಾಯಿತಿ ದರದಲ್ಲಿ ಆಹಾರ
- ವಾಹನ ನಿಲುಗಡೆ ವ್ಯವಸ್ಥೆ

ಆನ್‌ಲೈನ್ ಮೂಲಕ 'ಕೃಷಿ ಮೇಳ' ವೀಕ್ಷಿಸಿ

ವೆಬ್‌ಪೇಜ್: https://uasbangalore.edu.in/index.php/krishimela-2021-en
ವೆಬ್‌ಸೈಟ್: https://www.uasbangalore.edu.in
ಯುಟ್ಯೂಬ್: https://www.youtube.com/c/UASBangaloreGKVK
ಫೇಸ್‌ಬುಕ್: https://www.facebook.com/sis.uasb/
ಟ್ವಿಟರ್: https://twitter.com/BangaloreUas

10 ತಳಿಗಳ ಬಿಡುಗಡೆ: 'ಹೆಚ್ಚು ಇಳುವರಿ ಮತ್ತು ಬೆಂಕಿರೋಗ ನಿರೋಧಕ ಶಕ್ತಿಯುಳ್ಳ ಭತ್ತದ ಎರಡು ತಳಿಗಳು, ಬುಡಕೊಳೆ ರೋಗ ನಿರೋಧಕತೆ ಹೊಂದಿರುವ ರಾಗಿ, ತುಕ್ಕು ಮತ್ತು ಎಲೆ ಅಂಗಮಾರಿ ರೋಗಗಳಿಂದ ಪಾರಾಗಬಲ್ಲ ನವಣೆ, ಕಂದು ಚುಕ್ಕೆ ರೋಗ ತಡೆಯಬಲ್ಲ ಸಾಮೆ ಮತ್ತು ಬರಗು ತಳಿಗಳು, ಹೂ ಗೊಂಚಲು ಗೋಪುರಾಕಾರದಿಂದ ಕೂಡಿರುವ ಬೀಜದ ದಂಟು, ಸ್ವಯಂ ಗರಿ ಕಳಚುವ ಹಾಗೂ ಬೆಲ್ಲ ತಯಾರಿಗೆ ಯೋಗ್ಯವಾದ ಕಬ್ಬು, ಉತ್ತಮ ಮೇವಿನ ಜೀರ್ಣತೆ ಗುಣಗಳನ್ನು ಹೊಂದಿರುವ ಮೇವಿನ ತೋಕೆ ಹೆಸರಿನ ಗೋಧಿ, ಕಡಿಮೆ ಅಂಟು ಪ್ರಮಾಣ ಮತ್ತು ಹೆಚ್ಚು ಸಕ್ಕರೆ ಅಂಶ ಹೊಂದಿರುವ 'ಬೈರಚಂದ್ರ' ಹೆಸರಿನ ಹಲಸು ಸೇರಿದಂತೆ ಈ ಬಾರಿ 10 ಹೊಸ ತಳಿಗಳನ್ನು ಹೊರತರಲಾಗಿದೆ. ಮೇಳದಲ್ಲಿ ಈ ತಳಿಗಳ ಪ್ರಾತ್ಯಕ್ಷಿಕೆಗಳು ಸಿದ್ಧಗೊಂಡಿವೆ. ರೈತರು ನೇರವಾಗಿ ತೋಟಗಳಲ್ಲೇ ಹೊಸ ತಳಿಗಳ ಮಾಹಿತಿ ಪಡೆಯುವ ವ್ಯವಸ್ಥೆಯನ್ನೂ ಮಾಡಿದ್ದೇವೆ' ಎಂದು ರಾಜೇಂದ್ರ ಪ್ರಸಾದ್ ಹೇಳಿದರು.

ರೈತರಿಗಾಗಿ ಚರ್ಚಾಗೋಷ್ಠಿ: ನ.12ರಿಂದ 14ರವರೆಗೆ ಪ್ರತಿದಿನ ಬೆಳಿಗ್ಗೆ 10.30ರಿಂದ 12.30ರವರೆಗೆ ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿಗಳು ನಡೆಯಲಿವೆ. ಕೃಷಿ ಸಂಬಂಧಿತ ಪ್ರಶ್ನೆಗಳಿಗೆ ಕೃಷಿ ತಜ್ಞರು ಹಾಗೂ ವಿಜ್ಞಾನಿಗಳ ತಂಡ ಭೌತಿಕವಾಗಿ ಮತ್ತು ಜೂಮ್ ಸಭೆ ಮೂಲಕ ಪರಿಹಾರ ನೀಡಲಿದೆ.

ಬಿಟ್ ಕಾಯಿನ್: ಸಿಜೆಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುಕೋಟಿ ಬಿಟ್ ಕಾಯಿನ್ ಹಗರಣದ ತನಿಖೆ ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಸ್‌ಐಟಿ ನೇಮಿಸುವಂತೆ ನಿರ್ದೇಶಿಸಬೇಕು' ಎಂದು ಕೋರಿ 'ಸಿಟಿಜನ್ ರೈಟ್ಸ್ ಫೌಂಡೇಶನ್' ಅಧ್ಯಕ್ಷ ಕೆ.ಎ.ಪಾಲ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ (ಸಿಜೆ) ಪತ್ರ ಬರೆದಿದ್ದಾರೆ.

'ಪ್ರಕರಣದ ಪ್ರಮುಖ ಆರೋಪಿ ಶ್ರೀ ಕೃಷ್ಣ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಪರಾಧಿಕ ನಂಟು ಹೊಂದಿದ್ದಾನೆ. ಪ್ರಕರಣದಲ್ಲಿ ದೋಷಾರೋಪ ಪಟ್ಟಿಯನ್ನು ತರಾತುರಿಯಲ್ಲಿ ಸಲ್ಲಿಸಲಾಗಿದೆ. ಹಾಗಾಗಿ ಸಂಬಂಧಿತ ಅಧಿಕಾರಿಗಳ ಕರ್ತವ್ಯಲೋಪದ ಬಗ್ಗೆ ಪೂರ್ಣ ಪ್ರಮಾಣದ ತನಿಖೆಯ ಅಗತ್ಯವಿದೆ' ಎಂದು ಅವರು ಎರಡು ಪುಟಗಳ ಪತ್ರದಲ್ಲಿ ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಡ್ರಗ್ಸ್ ಪೂರೈಸುತ್ತಿದ್ದ ಆಫ್ರಿಕಾ ಪ್ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಸೇವಿಸಿ ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಬಂಧಿಸಲಾಗಿರುವ ವಿಷ್ಣು ಭಟ್ ಎಂಬಾತನಿಗೆ, ಆಫ್ರಿಕಾ ಪ್ರಜೆಯೊಬ್ಬ ಡ್ರಗ್ಸ್ ಪೂರೈಸುತ್ತಿದ್ದ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ಜೀವನ್‌ಭಿಮಾ ನಗರ ಠಾಣೆ ವ್ಯಾಪ್ತಿಯ ಹೋಟೆಲೊಂದರಲ್ಲಿ ಇತ್ತೀಚೆಗೆ ನಡೆದಿದ್ದ ಘಟನೆ ಸಂಬಂಧ ವ್ಯವಸ್ಥಾಪಕ ದೂರು ನೀಡಿದ್ದರು. ಆರೋಪಿಗಳಾದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26) ಹಾಗೂ ಚಿನ್ನಾಭರಣ ಉದ್ಯಮಿ ಮಗ ವಿಷ್ಣು ಭಟ್‌ನನ್ನು ಪೊಲೀಸರು ಬಂಧಿಸಿದ್ದರು. ಶ್ರೀಕಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ವಿಷ್ಣುನನ್ನು ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು.



ವಿಷ್ಣು ಭಟ್

'ವಿಷ್ಣುನನ್ನು ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆಹಾಕಲಾಗುತ್ತಿದೆ. ಆಫ್ರಿಕಾ ಪ್ರಜೆಯೊಬ್ಬನ ಜೊತೆ ಆತ ಒಡನಾಟವಿಟ್ಟುಕೊಂಡಿದ್ದ. ವಿಷ್ಣುವಿಗೆ ಬೇಕಿದ್ದ ಮಾದಕ ವಸ್ತುವನ್ನು ಆ ಪ್ರಜೆ ತಂದುಕೊಡುತ್ತಿದ್ದ. ತಲೆಮರೆಸಿಕೊಂಡಿರುವ ಆಫ್ರಿಕಾ ಪ್ರಜೆಯನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪಾರ್ಟಿ ಮಾಡಲು ಬಂದಿದ್ದ: 'ಸಂಬಂಧಿಯೊಬ್ಬರ ಮೂಲಕ ವಿಷ್ಣುನಿಗೆ ಶ್ರೀಕೃಷ್ಣನ ಪರಿಚಯವಾಗಿತ್ತು. ಅವರಿಬ್ಬರು ಆಗಾಗ ಒಂದೆಡೆ ಸೇರಿ ಪಾರ್ಟಿ ಮಾಡುತ್ತಿದ್ದರು. ಡ್ರಗ್ಸ್ ಸಹ ಸೇವಿಸುತ್ತಿದ್ದರು' ಎಂದೂ ಅಧಿಕಾರಿ ತಿಳಿಸಿದರು.

'ಹೋಟೆಲ್ ಕೊಠಡಿಯಲ್ಲಿ ಶ್ರೀಕೃಷ್ಣ ಮಾತ್ರ ವಾಸವಿದ್ದ. ಆತನೇ ಬಾಡಿಗೆ ಸಹ ಪಾವತಿಸುತ್ತಿದ್ದ. ಆತನ ಜೊತೆ ಪಾರ್ಟಿ ಮಾಡಲೆಂದು ವಿಷ್ಣು, ಹೋಟೆಲ್‌ಗೆ ಬಂದಿದ್ದ. ಪಾನಮತ್ತನಾಗಿ ಬಂದಿದ್ದ ವಿಷ್ಣುನನ್ನು ತಡೆದಿದ್ದ ಸಿಬ್ಬಂದಿ, ಹೋಟೆಲ್ ಒಳಗೆ ಬಿಡುವುದಿಲ್ಲವೆಂದು ಹೇಳಿದ್ದರು. ಅಷ್ಟಕ್ಕೆ ಕೋಪಗೊಂಡ ಆರೋಪಿ, ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ. ಪ್ರಶ್ನಿಸಿದ್ದ ವ್ಯವಸ್ಥಾಪಕನಿಗೂ ಹೊಡೆದಿದ್ದ. ಗಲಾಟೆ ಕೇಳಿ ಕೊಠಡಿಯಿಂದ ಹೊರಬಂದಿದ್ದ ಶ್ರೀಕೃಷ್ಣ, ವಿಷ್ಣು ಪರವಾಗಿ ಮಾತನಾಡಿದ್ದ. ಸಿಬ್ಬಂದಿ ಹಾಗೂ ವ್ಯವಸ್ಥಾಪಕನ ಮೇಲೂ ಹಲ್ಲೆಗೆ ಯತ್ನಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಅಧಿಕಾರಿ ವಿವರಿಸಿದರು.

ಶ್ರೀಕೃಷ್ಣನ ಲ್ಯಾಪ್‌ಟಾಪ್ ಜಪ್ತಿ: 'ಹೋಟೆಲ್ ಕೊಠಡಿಯಲ್ಲಿ ಶ್ರೀಕೃಷ್ಣ ಬಳಸುತ್ತಿದ್ದ ಲ್ಯಾಪ್ ಟಾಪ್ ಜಪ್ತಿ ಮಾಡಲಾಗಿದೆ. ಹೆಚ್ಚಿನ ಪರಿಶೀಲನೆಗಾಗಿ ಅದನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದರು.

ಶ್ರೀಕೃಷ್ಣನಿಗೆ ಜಾಮೀನು ಮಂಜೂರು

'ಬಂಧಿತ ಶ್ರೀಕೃಷ್ಣನಿಗೆ ಜಾಮೀನು ಮಂಜೂರಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಹಲ್ಲೆ ಹಾಗೂ ಮಾದಕ ವಸ್ತು ಸೇವಿಸಿದ್ದ ಪ್ರಕರಣದಲ್ಲಿ ಶ್ರೀಕೃಷ್ಣನನ್ನು ಬಂಧಿಸಲಾಗಿತ್ತು. ಆತ ನ್ಯಾಯಾಂಗ ಬಂಧನದಲ್ಲಿದ್ದ. ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಮಂಗಳವಾರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ, ಜಾಮೀನು ನೀಡಿದೆ' ಎಂದೂ ತಿಳಿಸಿದರು.

ಚಾಕು ಇರಿತ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಲ್ಲಿ ಮಲಗಿದ್ದ ಕಾರ್ಮಿಕ ತಾಯಪ್ಪ (20) ಎಂಬುವರ ಮೇಲೆ ದುಷ್ಕರ್ಮಿಗಳು ಸೋಮವಾರ ರಾತ್ರಿ ದಾಳಿ ಮಾಡಿದ್ದು, ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

'ರಾಯಚೂರು ಜಿಲ್ಲೆಯ ದೇವದುರ್ಗದ ತಾಯಪ್ಪ, ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿದ್ದು, ಎಂದಿನಂತೆ ಕಟ್ಟಡದಲ್ಲಿ ಮಲಗಿದ್ದರು. ತಡರಾತ್ರಿ ಕಟ್ಟಡದೊಳಗೆ ನುಗ್ಗಿದ್ದ ಆರೋಪಿಗಳು, ದಾಳಿ ಮಾಡಿ ಚಾಕುವಿನಿಂದ ಇರಿದು ಓಡಿ ಹೋಗಿದ್ದಾರೆ. ಅವರು ಯಾರು ಎಂಬುದು ತಾಯಪ್ಪ ಅವರಿಗೆ ತಿಳಿದಿಲ್ಲ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಕಾಂಗ್ರೆಸ್ ನಾಯಕರು ಬಿಟ್ ಕಾಯಿನ್ ಪ್ರಕರಣದಲ್ಲಿದ್ದರೆ ಗಲ್ಲಿಗೆ ಹಾಕಲಿ'

ಬೆಂಗಳೂರು: 'ಕಾಂಗ್ರೆಸ್ ನಾಯಕರು ಬಿಟ್ ಕಾಯಿನ್ ಪ್ರಕರಣದಲ್ಲಿ ಭಾಗಿಯಾಗಿದ್ದರೆ ಅವರನ್ನು ಕಾನೂನು ಪ್ರಕಾರ ಗಲ್ಲಿಗೆ ಹಾಕಲಿ. ನಮ್ಮ ಅಭ್ಯಂತರವಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಬಿಟ್ ಕಾಯಿನ್ ಪ್ರಕರಣದಲ್ಲಿ ದಾಖಲಾಗಿರುವ ಎಫ್‌ಐಆರ್, ಮಾಧ್ಯಮಗಳಲ್ಲಿ ಕೇಳಿಬಂದಿರುವ ಹೆಸರುಗಳು, ಪ್ರಧಾನಿಗೆ ಹೋಗಿರುವ ದೂರುಗಳು, ವಿವಿಧ ಪ್ರಕರಣದಲ್ಲಿ ಯಾರನ್ನು ಬಂಧಿಸಿ ವಿಚಾರಣೆ ಮಾಡಿದ್ದಾರೆ ಮುಂತಾದ ಮಾಹಿತಿಗಳನ್ನು ಬಹಿರಂಗಪಡಿಸಲಿ' ಎಂದು ಸವಾಲು ಹಾಕಿದರು.

'ಈ ಇದೇ ಪ್ರಕರಣದ ಬಗ್ಗೆ ಸಂದೀಪ್ ಪಾಟೀಲ ಮಾಧ್ಯಮಗೋಷ್ಠಿ, ಇ.ಡಿಗೆ ಪ್ರಕರಣ ವಹಿಸಿರುವ ಬಗ್ಗೆ ಮುಖ್ಯಮಂತ್ರಿ ನೀಡಿರುವ ಹೇಳಿಕೆ ಬಗ್ಗೆಯೂ ಮಾಹಿತಿ ನೀಡಲಿ. ನಾವು ಕೂಡ ಈ ವಿಚಾರವಾಗಿ ಆಂತರಿಕ ತನಿಖೆ ನಡೆಸಿ ಮಾಹಿತಿ ಕಲೆಹಾಕಿದ್ದು, ಸೂಕ್ತ ಸಮಯದಲ್ಲಿ ದಾಖಲೆಗಳನ್ನು ನೀಡುತ್ತೇವೆ' ಎಂದರು.

ಕಾಂಗ್ರೆಸ್‌ಗೆ ಸೇರ್ಪಡೆ

ಜೆಡಿಎಸ್ ಮುಖಂಡ ಬಿ. ದೇವೇಂದ್ರಪ್ಪ ಮತ್ತು ಅವರ ಬೆಂಬಲಿಗರು ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಮಂಗಳವಾರ ಕಾಂಗ್ರೆಸ್ ಸೇರಿದರು. 2018ರ ಚುನಾವಣೆಯಲ್ಲಿ ಜಗಳೂರು ವಿಧಾನಸಭೆ ಕ್ಷೇತ್ರದಲ್ಲಿ ದೇವೇಂದ್ರಪ್ಪ ಸೋಲು ಕಂಡಿದ್ದರು. ಜೆಡಿಎಸ್ ಜಗಳೂರು ತಾಲ್ಲೂಕು ಘಟಕದ ಅಧ್ಯಕ್ಷ ಕೆ. ಗುರುಸಿದ್ದಪ್ಪ, ಯುವ ಘಟಕದ ಅಧ್ಯಕ್ಷ ಕೃಷ್ಣ ಯಾದವ್, ಜಗಳೂರು ಬಿಜೆಪಿ ಅಧ್ಯಕ್ಷ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ ಮತ್ತಿತರರು ಕೂಡಾ ಕಾಂಗ್ರೆಸ್ ಸೇರಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, 2018ರ ಚುನಾವಣೆಯಲ್ಲಿ ಜಗಳೂರಿನ ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಎಚ್.ಪಿ. ರಾಜೇಶ್ ಇದ್ದರು.

ಇದೇ 21ರಂದು ನಡೆಯಲಿರುವ ಚುನಾವಣೆ: ಪ್ರಚಾರ ಕಾರ್ಯ ಬಿರುಸುಗೊಳಿಸಿದ ಅಭ್ಯರ್ಥಿಗಳ

ರಂಗೇರುತ್ತಿದೆ ಕಸಾಪ ಚುನಾವಣೆ ಅಖಾಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಬಿರುಸಿನಿಂದ ಪ್ರಚಾರಕಾರ್ಯ ಕೈಗೊಂಡಿದ್ದು, ಚುನಾವಣೆ ಅಖಾಡ ರಂಗೇರಿದೆ.

ಇದೇ 21ರಂದು ನಡೆಯಲಿರುವ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಕಳೆದ ಬಾರಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ 13 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ಬಾರಿ ಆ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಇದರಿಂದಾಗಿ ಅಭ್ಯರ್ಥಿಗಳು ಈಗಾಗಲೇ ರಾಜ್ಯದ ಉದ್ದಗಲಕ್ಕೂ ಪ್ರಯಾಣಿಸಿ, ಎರಡರಿಂದ ಮೂರು ಸುತ್ತಿನ ಪ್ರಚಾರ ನಡೆಸಿದ್ದಾರೆ. ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳ ಪ್ರಮುಖರು ಕೂಡ ಅಭ್ಯರ್ಥಿಗಳ ಪರ ಮತಯಾಚಿಸುತ್ತಿದ್ದಾರೆ.

ನಾಡು–ನುಡಿ ಹಿತಕಾಯುವ ಭರವಸೆ: ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳು ನಾಡು–ನುಡಿಗೆ ಸಂಬಂಧಿಸಿದ ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಒಳಗೊಂಡ ಪ್ರಣಾಳಿಕೆಯನ್ನು ಸಿದ್ಧಪಡಿಸಿ, ಮತದಾರರ ಒಲೈಕೆಯಲ್ಲಿ ನಿರತರಾಗಿದ್ದಾರೆ.

ಮಹೇಶ್ ಜೋಶಿ ಪರ ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ, ಶಾಸಕ ಪರಣ್ಣ ಮುನವಳ್ಳಿ ಪ್ರಚಾರ ನಡೆಸಿದ್ದಾರೆ. ಈ ಬೆಳವಣಿಗೆಗೆ ಸಾಂಸ್ಕೃತಿಕ ವಲಯದಲ್ಲಿ ಆಕ್ಷೇಪಕ್ಕೆ ಕಾರಣವಾಗಿದೆ.

ಕೆಲವು ಅಭ್ಯರ್ಥಿಗಳು ಸೂಟ್ ಕೇಸ್, ಬೆಳ್ಳಿ ಉಂಗುರ ಸೇರಿದಂತೆ ವಿವಿಧ ವಸ್ತುಗಳನ್ನು ಹಂಚುವ ಮೂಲಕ ಕೆಲ ಅಭ್ಯರ್ಥಿಗಳು ಮತದಾರರಿಗೆ ಆಮಿಷ ಒಡ್ಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿ ಬಂದಿವೆ.

ಸಾಮಾಜಿಕ ಜಾಲತಾಣಗಳನ್ನೂ ಅಭ್ಯರ್ಥಿಗಳು ಪ್ರಚಾರಕ್ಕೆ ಬಳಸಿಕೊಳ್ಳುತ್ತಿದ್ದು, ವಾಟ್ಸ್‌ಆ್ಯಪ್‌ನ ವಿವಿಧ ಗುಂಪುಗಳಿಗೆ ಪ್ರಣಾಳಿಕೆಯ ಪ್ರತಿಯನ್ನು ಕಳುಹಿಸಿ, ಮತ ಯಾಚಿಸುತ್ತಿದ್ದಾರೆ. ಪರಿಚಿತರಿಗೆ ವೈಯಕ್ತಿಕವಾಗಿಯೂ ಸಂದೇಶಗಳನ್ನು ರವಾನಿಸುತ್ತಿದ್ದಾರೆ. ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದ ವಿವಿಧ ವೇದಿಕೆಗಳನ್ನೂ ಪ್ರಚಾರ ಕಾರ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ.


‘ಪ್ರಾದೇಶಿಕ ಅಸಮತೋಲನ ನಿವಾರಣೆ’



ಪರಿಷತ್ತು ಕೆಲವೇ ಜನರಿಗೆ ಸೀಮಿತವಾಗಿದೆ. ಇದನ್ನು ಸಮಸ್ತ ಕನ್ನಡಿಗರ ಪರಿಷತ್ತಾಗಿ ಮಾರ್ಪಡಿಸುತ್ತೇನೆ. ರಾಜ್ಯದ ನಾಲ್ಕೂ ಕಂದಾಯ ವಿಭಾಗಗಳಿಗೆ ವಿಭಾಗೀಯ ಸಂಚಾಲಕರನ್ನು ನೇಮಿಸಿ,ಪರಿಷತ್ತಿನ ಕಾರ್ಯಕ್ರಮಗಳ ಉಸ್ತುವಾರಿಯನ್ನು ವಿಕೇಂದ್ರೀಕರಣಗೊಳಿಸುತ್ತೇನೆ. ಪ್ರಾದೇಶಿಕ ಅಸಮತೋಲನವನ್ನೂ ನಿವಾರಿಸಲಾಗುವುದು. ಗಡಿ ಪ್ರದೇಶದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನ ಪ್ರಶಸ್ತಿಯ ಮೊತ್ತವನ್ನು ₹ 25 ಸಾವಿರದಿಂದ ₹ 5 ಲಕ್ಷಕ್ಕೆ ಏರಿಸುವೆ. ಕಾದಂಬರಿಕಾರ ಬಸವರಾಜ ಕಟ್ಟೀಮನಿ ಹೆಸರಿನಲ್ಲಿ ₹ 5 ಲಕ್ಷ ನಗದು ಒಳಗೊಂಡ ಪ್ರಶಸ್ತಿ ಸ್ಥಾಪಿಸುವೆ. ಆನ್‌ಲೈನ್ ಮೂಲಕ ವಿಳಾಸ ತಿದ್ದುಪಡಿ ಸೇರಿದಂತೆ ವಿವಿಧ ಯೋಜನೆ ಹಮ್ಮಿಕೊಳ್ಳಲಾಗುವುದು.

ಸಿ.ಕೆ. ರಾಮೇಗೌಡ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ


‘ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದನೆ’



ಕನ್ನಡ ಸಾಹಿತ್ಯದ ಮಹತ್ವದ ಕೃತಿಗಳನ್ನು ಮರುಮುದ್ರಣಕ್ಕೆ ಕ್ರಮ. ಕನ್ನಡದ ಉತ್ತಮ ಕೃತಿಗಳನ್ನು ಬೇರೆ ಭಾಷೆಗಳಿಗೆ ಭಾಷಾಂತರಿಸಿ, ರಾಜ್ಯಗಳಿಗೆ ಪರಿಚಯಿಸುವ ಸಂಕಲ್ಪ. ಶಾಶ್ವತವಾದ ಕನ್ನಡ ನಿಘಂಟು ಸಿದ್ಧಗೊಳಿಸಲು ಒತ್ತು. ಇದರಿಂದ ಭಾಷಾ ಬೆಳವಣಿಗೆ ಸಾಧ್ಯ.ನೆಲ, ಜಲ, ಉದ್ಯೋಗ ಸೇರಿದಂತೆ ನಾಡನ್ನು ಕಾಡುತ್ತಿರುವ ವಿವಿಧ ಸಮಸ್ಯೆಗಳಿಗೆ ಸ್ಪಂದಿಸಿ, ನ್ಯಾಯಕ್ಕಾಗಿ ಹೋರಾಟ ನಡೆಸುತ್ತೇನೆ. ಪರಿಷ್ಕೃತ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಲು ಶ್ರಮಿಸಲಾಗುವುದು. ಸದಸ್ಯತ್ವ, ಪುಸ್ತಕ ಖರೀದಿ ಸೇರಿದಂತೆ ಎಲ್ಲ ಪ್ರಕ್ರಿಯೆಯೂ ಆನ್‌ಲೈನ್ ಮೂಲಕ ನಡೆಯುವಂತೆ ಕ್ರಮವಹಿಸಲಾಗುವುದು. ಯುವ ಬರಹಗಾರರನ್ನು ಗುರುತಿಸಿ, ಪ್ರೋತ್ಸಾಹಿಸಲಾಗುವುದು.

ವ.ಚ. ಚನ್ನೇಗೌಡ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಕಂದಾಯ ವಿಭಾಗದಲ್ಲೂ ಸಮಾವೇಶ’



ಪರಿಷತ್ತು ಹಾಗೂ ಕನ್ನಡಿಗರ ಪ್ರಗತಿಗಾಗಿ 12 ವಿಶೇಷ ಯೋಜನೆಗಳನ್ನು ಸಿದ್ಧಪಡಿಸಿದ್ದೇನೆ. ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ ‘ಕಸಾಪ ಮಾದರಿ ಕನ್ನಡ ಶಾಲೆ’ ನಿರ್ಮಿಸಲಾಗುವುದು. ನಾಲ್ಕೂ ಕಂದಾಯ ವಿಭಾಗದಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಶಿಕ್ಷಕರ ಸಾಹಿತ್ಯ ಸೇರಿದಂತೆ ವಿವಿಧ ಸಾಹಿತ್ಯ ಸಮಾವೇಶಗಳನ್ನು ನಡೆಸಲಾಗುವುದು. ಪ್ರೌಢಶಾಲೆಯಿಂದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಹಳಗನ್ನಡ ಹಾಗೂ ಆಧುನಿಕ ಸಾಹಿತ್ಯದ ಮರು ಓದಿಗೆ ಕ್ರಮವಹಿಸಲಾಗುವುದು. ಪರಿಷತ್ತು ಪ್ರಕಟಿಸಿರುವ ಅಪರೂಪದ ಮೌಲಿಕ ಗ್ರಂಥಗಳನ್ನು ಮರುಮುದ್ರಣ ಮಾಡಲಾಗುವುದು. ಹೊರನಾಡು–ಹೊರದೇಶದ ಕನ್ನಡಿಗರು ರಚಿಸಿದ ಕೃತಿಗಳ ಪ್ರಕಟಣೆ ಸೇರಿದಂತೆ ವಿವಿಧ ಯೋಜನೆ ರೂಪಿಸಲಾಗಿದೆ.

ಶೇಖರಗೌಡ ಮಾಲಿಪಾಟೀಲ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಪರಿಷತ್ತನ್ನು ಜನಪರ ಮಾಡುವೆ’



ದೂರದರ್ಶನ ಕೇಂದ್ರದ ನಿರ್ದೇಶಕನಾಗಿದ್ದಾಗ ಜನಪರ ಕಾರ್ಯಕ್ರಮ ರೂಪಿಸಿ, ಚಂದನ ವಾಹಿನಿಯನ್ನು ಜನರಿಗೆ ಆಪ್ತವಾಗಿಸಿದ್ದೆ. ಅದೇ ರೀತಿ ಜನಸಾಮಾನ್ಯರ, ಜನೋಪಯೋಗಿ ಪರಿಷತ್ತಾಗಿ ಪರಿವರ್ತಿಸುತ್ತೇನೆ. ಪರಿಷತ್ತು ಕೇವಲ 3.40 ಲಕ್ಷ ಸದಸ್ಯತ್ವ ಹೊಂದಿದ್ದು, ಅದನ್ನು ಒಂದು ಕೋಟಿಗೆ ಏರಿಸುತ್ತೇನೆ. ಸದಸ್ಯತ್ವ ಶುಲ್ಕವನ್ನು ₹ 250ಕ್ಕೆ ಇಳಿಸುತ್ತೇನೆ. ಆಡಳಿತ ಸೇರಿದಂತೆ ವಿವಿಧೆಡೆ ಕನ್ನಡ ಅನುಷ್ಠಾನ, ಕನ್ನಡ ಮಾಧ್ಯಮದ ಶಾಲೆಗಳ ಉಳಿವಿಗೆ ಹೋರಾಟ ನಡೆಸುತ್ತೇನೆ. ಮೊಬೈಲ್ ಆ್ಯಪ್ ಪರಿಚಯ ಸೇರಿದಂತೆ ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ. ಪ್ರಚಾರ ಕಾರ್ಯಕ್ಕೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ್ ಸೇರಿದಂತೆ ಹಲವರು ಕೈಜೋಡಿಸಿದ್ದಾರೆ.

ಮಹೇಶ್ ಜೋಶಿ, ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ

ಮೇಲ್ಮನವಿ ವಿಚಾರಣೆಗೆ ‘ಸುಪ್ರೀಂ’ ಸಮ್ಮತಿ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿ, ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಸಮ್ಮತಿ ಸೂಚಿಸಿದೆ.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿ ಕಳೆದ ಸೆಪ್ಟೆಂಬರ್ ಪೂರ್ಣಗೊಂಡಿದ್ದು, ಚುನಾವಣೆ ಪ್ರಕ್ರಿಯೆಗೆ ತಡೆ ನೀಡಿದ್ದರಿಂದ ತುರ್ತು ಪರಿಸ್ಥಿತಿ ಎದುರಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಹಿಮಾ ಕೊಹ್ಲಿ ಅವರಿದ್ದ ಪೀಠಕ್ಕೆ ತಿಳಿಸಲಾಯಿತು.

‘6 ವಾರಗಳೊಳಗೆ ಚುನಾವಣೆ ನಡೆಸುವಂತೆ ಸೂಚಿಸಿ 2020ರ ಡಿ. 4ರಂದು ಕರ್ನಾಟಕ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಮುಖ್ಯ ನ್ಯಾಯಮೂರ್ತಿಯಾಗಿದ್ದ ಎಸ್‌.ಎ. ಬೋಬಡೆ ನೇತೃತ್ವದ ಪೀಠವು 2020ರ ಡಿಸೆಂಬರ್ 18ರಂದು ತಡೆ ನೀಡಿದೆ’ ಎಂದು ಹಿರಿಯ ವಕೀಲ ನಿಜಾಮ್ ಪಾಷಾ ಅವರು ನ್ಯಾಯಪೀಠದ ಗಮನ ಸೆಳೆದರು.

‘ಈ ಕುರಿತ ಕಡತಗಳನ್ನು ಕಳುಹಿಸಿ ನಾವು ಪರಿಶೀಲನೆ ನಡೆಸುತ್ತೇವೆ’ ಎಂದು ಮುಖ್ಯ ನ್ಯಾಯಮೂರ್ತಿ ರಮಣ ಅವರು ರಿಜಿಸ್ಟ್ರಾರ್‌ಗೆ ಸೂಚಿಸಿದರು.

ರಾಜ್ಯ ಸರ್ಕಾರ ಹೊಸದಾಗಿ ಜಾರಿಗೊಳಿಸಿರುವ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ- 2020ರ ಅಡಿಯಲ್ಲಿ ರಚಿಸಲಾದ ಬಿಬಿಎಂಪಿಯ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಇದನ್ನು ಸರ್ಕಾರ ಪ್ರಶ್ನಿಸಿದ್ದು, ನ್ಯಾಯಪೀಠವು ಕರ್ನಾಟಕ ರಾಜ್ಯ ಚುನಾವಣಾ ಆಯೋಗಕ್ಕೆ (ಎಸ್‌ಇಸಿ) ನೋಟಿಸ್ ಜಾರಿ ಮಾಡಿತ್ತು.

ಬೆಳೆಯುತ್ತಿರುವ ಬೆಂಗಳೂರು ನಗರದ ಮಹಾನಗರ ಪಾಲಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ನಿಟ್ಟಿನಲ್ಲಿ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲು ನೂತನ ಕಾನೂನು ಜಾರಿಗೊಳಿಸಲಾಗಿದೆ ಎಂದು ರಾಜ್ಯ ಸರ್ಕಾರ ತಿಳಿಸಿತ್ತು.

ಅಲ್ಲದೆ, ಈ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಯಾವುದೇ ಅಧಿಕಾರವಿಲ್ಲ ಎಂದು ಹೇಳಿತ್ತು.

ನಾಲ್ಕು ವಾರ್ಡ್‌ಗಳಲ್ಲಿ ಅಧಿಕ ಪ್ರಕರಣ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಕೋರಮಂಗಲ, ಹಗದೂರು, ಬೆಳ್ಳಂದೂರು ಹಾಗೂ ಬೇಗೂರು ವಾರ್ಡ್‌ನಲ್ಲಿ ಪ್ರತಿ ದಿನ ತಲಾ 25 ಕೋವಿಡ್ ಪ್ರಕರಣಗಳು ಹೊಸದಾಗಿ ಪತ್ತೆಯಾಗುತ್ತಿವೆ.

ಈ ನಾಲ್ಕು ವಾರ್ಡ್‌ಗಳನ್ನು ಹೊರತುಪಡಿಸಿಇನ್ನುಳಿದ ವಾರ್ಡ್‌ಗಳು ಬಹುತೇಕ ಕೋವಿಡ್ ಮುಕ್ತವಾಗಿವೆ. ನಗರದಲ್ಲಿ ಮಂಗಳವಾರ 187 ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಕೆಲ ದಿನಗಳಿಂದ ಇಳಿಮುಖ ಮಾಡಿದ್ದು, ಸದ್ಯ 6,498 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

‘ಕೋವಿಡ್ ನಿಯಂತ್ರಕ್ಕೆ ಬಂದಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ವಲಸಿಗರು ಇಲ್ಲಿಗೆ ಬರುತ್ತಿದ್ದಾರೆ. ರೈಲು ಹಾಗೂ ಬಸ್ ನಿಲ್ದಾಣಗಳಲ್ಲಿ ಅವರಿಗೆ ಸಮರ್ಪಕವಾದ ರೀತಿಯಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿಲ್ಲ. ಇದರಿಂದ ನಾಲ್ಕು ವಾರ್ಡ್‌ಗಳಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿವೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,53,177 ಒಟ್ಟು ಸೋಂಕಿತರು (12,52,990 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,498	12,30,380	16,298

ದಿನದ ಏರಿಕೆ	
ಹೊಸ ಪ್ರಕರಣ	187
ಗುಣಮುಖ	106
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಕೋವಿಡ್ ಹರಡುವಿಕೆ ತಡೆಯಲು ಈಗಾಗಲೇ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಲಾಗಿದೆ. ವಲಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಕೆಲವೆಡೆ ಪ್ರಕರಣಗಳು ಪತ್ತೆಯಾಗುತ್ತಿವೆ. ಐಟಿ-ಬಿಟಿ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳೂ ನಗರಕ್ಕೆ ವಾಪಸ್ ಆಗುತ್ತಿದ್ದಾರೆ. ಅಂತಹವರಿಗೆ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ಕೆಲವರು ಹೆದ್ದಾರಿಗಳಲ್ಲಿ ಬರುತ್ತಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ. ವಿಜಯೇಂದ್ರ ಬೇಸರ ವ್ಯಕ್ತಪಡಿಸಿದರು.

‘ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯಗಳಿಂದ ಇಲ್ಲಿಗೆ ಬಂದವರ ಮೇಲೆ ನಿಗಾ ಇಡುವಂತೆ ಆಶಾ ಕಾರ್ಯಕರ್ತೆಯರಿಗೆ ಸೂಚಿಸಿದ್ದೇವೆ. ಯಾವುದೇ ವ್ಯಕ್ತಿಯಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಂಡಲ್ಲಿ ಪ್ರತ್ಯೇಕ ನಿಗಾ ವ್ಯವಸ್ಥೆಗೆ ಒಳಪಡಿಸಿ, ಸಂಪರ್ಕಿತರನ್ನು ಪತ್ತೆ ಮಾಡಲಾಗುತ್ತದೆ’ ಎಂದು ಹೇಳಿದರು.

ಕೋವಿಡ್: 29.90 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 293 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.90 ಲಕ್ಷ ದಾಟಿದೆ.

ಒಂದು ದಿನದಲ್ಲಿ 79 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.36 ರಷ್ಟು ವರದಿಯಾಗಿದೆ. 4 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 187 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 7,955ಕ್ಕೆ ಇಳಿಕೆ ಕಂಡಿದೆ. 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ ಗರಿಷ್ಠ (6,498) ಸಕ್ರಿಯ ಪ್ರಕರಣಗಳಿವೆ. ಗುಣಮುಖರಾದವರ ಒಟ್ಟು ಸಂಖ್ಯೆ 29.44 ಲಕ್ಷ ದಾಟಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.13 ಕೋಟಿ	3.43ಕೋಟಿ
ಸಕ್ರಿಯ ಪ್ರಕರಣ	1.87 ಕೋಟಿ	1.40ಲಕ್ಷ
ಗುಣಮುಖ	22.75 ಕೋಟಿ	3.37 ಕೋಟಿ
ಸಾವು	50.75 ಲಕ್ಷ	4.61ಲಕ್ಷ

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	3.81 ಲಕ್ಷ	10,126
ಗುಣಮುಖ	4.29 ಲಕ್ಷ	11,982
ಸಾವು	5,624	332

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 54,847 ಅಮೆರಿಕ; 32,322 ಬ್ರಿಟನ್; 39,400 ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 91.81 ಅಮೆರಿಕ; 15.62 ಬ್ರಿಟನ್; 9.98 ರಷ್ಯಾ

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,226 ತಮಿಳುನಾಡು; 33,978 ಕೇರಳ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.18 ಮಹಾರಾಷ್ಟ್ರ; 50.20 ಕೇರಳ; 27.09 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ರಾಜಕೀಯ ವೈರತ್ವ ಮರೆತು ಹೊಗಳಿದರು, ಹಣ್ಣು ತಿನ್ನಿಸಿದರು

ಒಂದೇ ವೇದಿಕೆಯಲ್ಲಿ ಜಿಟಿಡಿ, ಸಿದ್ದರಾಮಯ್ಯ!

ಪ್ರಜಾವಾಣಿ ವಾರ್ತೆ


ಮೈಸೂರು: ಶಾಸಕ ಜಿ.ಟಿ.ದೇವೇಗೌಡ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ರಾಜಕೀಯ ವೈರತ್ವ ಮರೆತು ನಗರದಲ್ಲಿ ಮಂಗಳವಾರ ಎರಡು ಕಾರ್ಯಕ್ರಮಗಳಲ್ಲಿ ವೇದಿಕೆಯನ್ನು ಹಂಚಿಕೊಂಡು, ಸೌಹಾರ್ದ ಪ್ರದರ್ಶಿಸಿ ಅಚ್ಚರಿ ಮೂಡಿಸಿದರು. ಪರಸ್ಪರ ಹೊಗಳಿದರು. ಹಿನಕಲ್ ಹಾಗೂ ಕೇರ್ಗಳ್ಳಿಯಲ್ಲಿ ನಡೆದ ಕಾರ್ಯಕ್ರಮ ಈ ಅಪರೂಪದ ಸಮಾಗಮಕ್ಕೆ ಸಾಕ್ಷಿಯಾಯಿತು.

‘ಡಾ.ಎಚ್‌.ಸಿ.ಮಹದೇವಪ್ಪ ಅವರಂತಹ ದಲಿತ ನಾಯಕರನ್ನು ಬೆಳೆಸಿದ್ದೇ ಸಿದ್ದರಾಮಯ್ಯ. ವೀರಶೈವ ಸಮಾಜದ ಮುಖಂಡರನ್ನೂ ಬೆಳೆಸಿದ್ದಾರೆ. ಚುನಾವಣೆಯಲ್ಲಿ ಸೋತರೂ ಜನ ಪ್ರೀತಿಸುವಂತಹ ನಾಯಕ ಅವರು’ ಎಂದು ದೇವೇಗೌಡರು ಶ್ಲಾಘಿಸಿದರು.

‘ಜಿ.ಟಿ.ದೇವೇಗೌಡರನ್ನು ಜೆಡಿಎಸ್‌ನಲ್ಲೇ ಉಳಿಸಿಕೊಳ್ಳಲು ಎಚ್‌.ಡಿ.ದೇವೇಗೌಡ, ಕುಮಾರಸ್ವಾಮಿ ಯತ್ನಿಸಿದ್ದಾರೆ. ಆದರೂ ಅವರು ಬರುವುದಾದರೆ ಸ್ವಾಗತ’ ಎಂದು ಆಹ್ವಾನವಿತ್ತ ಸಿದ್ದರಾಮಯ್ಯ, ‘ಜಿ.ಟಿ. ಕೇಳ್ತಾ ಇದ್ದೀಯೇನಪ್ಪಾ’ ಎಂದು ಆತ್ಮೀಯತೆ ತೋರಿದರು.

ಅದಕ್ಕೂ ಮುಂಚೆ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ‘ಜಿ.ಟಿ.ದೇವೇಗೌಡ, ಸಿದ್ದರಾಮಯ್ಯ ಅಕ್ಕ–ಪಕ್ಕ ಕುಳಿತಿದ್ದಾರೆ ಹೊಡಿರಿ ಚಪ್ಪಾಳೆ’ ಎಂದು ಹೇಳಿ ಕಾರ್ಯಕರ್ತರಲ್ಲಿ ಹುರುಪು ತುಂಬಿದರು.

ಈಚೆಗೆ ಇಲ್ಲಿಗೆ ಸಮೀಪದ ಬೆಳವಾಡಿಯಲ್ಲಿ ನಡೆದಿದ್ದ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ಜೆಡಿಎಸ್‌ನ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಭಾಗವಹಿಸಿದ್ದರು. ಜಿ.ಟಿ.ದೇವೇಗೌಡ ಗೈರಾಗಿದ್ದರು.



ಮೈಸೂರಿನ ಹಿನಕಲ್ ಗ್ರಾಮದಲ್ಲಿ ಮಂಗಳವಾರ ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ನಗುವಿನ ಕ್ಷಣ.

ಶಾಸಕ ಜಿ.ಟಿ.ದೇವೇಗೌಡ ಕಾಂಗ್ರೆಸ್ ಸೇರುತ್ತಾರೋ ಇಲ್ಲವೋ ಅದು ಬೇರೆ ವಿಚಾರ. ಅವರೊಂದಿಗೆ ವೇದಿಕೆ ಹಂಚಿಕೊಂಡರೆ ತಪ್ಪೇನು?

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

‘ದಲಿತರಿಗೆ ಸಿ.ಎಂ ಸ್ಥಾನ ಸಿಕ್ಕರೆ ಸಂತಸಪಡುವೆ’

‘ರಾಜ್ಯದಲ್ಲಿ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕರೆ ಸಂತಸಪಡುವೆ. ಬೇರೆ ರಾಜ್ಯಗಳಲ್ಲಿ ದಲಿತರು ಮುಖ್ಯಮಂತ್ರಿಯಾಗಿದ್ದಾರೆ. ಕಾಂಗ್ರೆಸ್ ಬಿಟ್ಟರೆ ಬೇರೆ ಪಕ್ಷಗಳಲ್ಲಿ ಈ ಅವಕಾಶವಿಲ್ಲ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಜನತಾ ಪತ್ರಿಕೆ ಕನ್ನಡಿಗರ ಮುಖವಾಣಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನತಾ ಪತ್ರಿಕೆ ಜೆಡಿಎಸ್ ಪಕ್ಷದ ಮುಖವಾಣಿ ಅಲ್ಲ, ಕನ್ನಡಿಗರ ಮುಖವಾಣಿ. ಕೃಷಿ ಕಾರ್ಮಿಕರು ಮತ್ತು ಶ್ರಮಿಕರ ಮುಖವಾಣಿಯಾಗಿ ಕೆಲಸ ಮಾಡಲಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಜೆಡಿಎಸ್ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಸೋಮವಾರ ನಡೆದ ‘ಜನತಾ ಪರ್ವ 1.0’ರ ಎರಡನೇ ಹಂತದ ಕಾರ್ಯಾಗಾರ ‘ಜನತಾ ಸಂಗಮ’ ಕಾರ್ಯಕ್ರಮದಲ್ಲಿ ಜೆಡಿಎಸ್‌ನ ಮಾಸ ಪತ್ರಿಕೆ ‘ಜನತಾ ಪತ್ರಿಕೆ’ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಮಾತನಾಡಿ, ‘ಪಕ್ಷದಲ್ಲಿ ಸಮರ್ಥ, ನಿಷ್ಠಾವಂತ ನಾಯಕರು, ಕಾರ್ಯಕರ್ತರು ಇದ್ದಾರೆ. ಅವರೆಲ್ಲರ ಮನೆ ಬಾಗಿಲಿಗೆ ಈ ಪತ್ರಿಕೆ ತಲುಪಬೇಕು’ ಎಂದರು.

ಪತ್ರಕರ್ತ, ವಿಧಾನ ಪರಿಷತ್ ಮಾಜಿ ಸದಸ್ಯ ಪಿ. ರಾಮಯ್ಯ ಅವರು ಪತ್ರಿಕೆ ಬಿಡುಗಡೆ ಮಾಡಿದರು.

ಕಾರ್ಯಾಗಾರಕ್ಕೆ ಚಾಲನೆ: ಮುಂದಿನ ಚುನಾವಣೆಗೆ ಸಿದ್ಧತೆ ಸೇರಿದಂತೆ ಪಕ್ಷವನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಂಘಟಿಸುವ ಸಲುವಾಗಿ ಒಂದು ವಾರ ನಡೆಯಲಿರುವ ಎರಡನೇ ಹಂತದ ಕಾರ್ಯಾಗಾರಕ್ಕೆ ಎಚ್‌.ಡಿ. ದೇವೇಗೌಡ ಅವರು ಚಾಲನೆ ನೀಡಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಕೆ. ಕುಮಾರಸ್ವಾಮಿ, ಮುಖಂಡರಾದ ಬಂಡೆಪ್ಪ ಕಾಶೆಂಪೂರ, ಲಿಂಗೇಶ್, ಅಶ್ವಿನ್ ಕುಮಾರ್, ವೀರಭದ್ರಯ್ಯ, ಮಂಜುನಾಥ್, ತಿಪ್ಪೇಸ್ವಾಮಿ, ರಮೇಶ್ ಗೌಡ ಇದ್ದರು.

ಹೈಕೋರ್ಟ್ ನ್ಯಾಯಪೀಠ ಕಠಿಣ ಎಚ್ಚರಿಕೆ

‘ಬಿಬಿಎಂಪಿ ಆಯುಕ್ತರನ್ನು ಜೈಲಿಗೆ ಕಳುಹಿಸಬೇಕಾದೀತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು (ಬಿಬಿಎಂಪಿ) ಕೋರ್ಟ್ ಆದೇಶಗಳನ್ನು ಲಘುವಾಗಿ ಪರಿಗಣಿಸುತ್ತಿದ್ದಾರೆ’ ಎಂಬ ಕಾರಣಕ್ಕೆ ಕೆಂಡಾಮಂಡಲವಾದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು, ‘ಸರ್ಕಾರಿ ಅಧಿಕಾರಿಗಳ ಇಂತಹ ವರ್ತನೆ ಇದೇ ರೀತಿ ಮುಂದುವರಿದರೆ ಅವರನ್ನು ಜೈಲಿಗೆ ಕಳುಹಿಸಬೇಕಾಗುತ್ತದೆ’ ಎಂದು ಕಠಿಣ ಎಚ್ಚರಿಕೆ ನೀಡಿದ್ದಾರೆ.

ಪಾರ್ಕ್ ಮತ್ತು ಮೈದಾನಗಳಲ್ಲಿನ ಅಕ್ರಮ ಕಟ್ಟಡಗಳ ತೆರವಿಗೆ ಸಂಬಂಧಿಸಿದಂತೆ ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಬಿಬಿಎಂಪಿ ಆಯುಕ್ತರ ನಡೆಗೆ ನ್ಯಾಯಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

ಬಿಬಿಎಂಪಿ ಪರ ವಕೀಲರನ್ನು ಉದ್ದೇಶಿಸಿ, ‘ಅಧಿಕಾರಿಗಳು ದೊಡ್ಡವರ ವಿರುದ್ಧ ಕ್ರಮಕ್ಕೆ ಹಿಂಜರಿಯಬಹುದು. ಆದರೆ, ನಾವು ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲ. ನಿಮ್ಮ ಪಾಲಿಕೆ ಆಯುಕ್ತರನ್ನು ಜೈಲಿಗೆ ಕಳಿಸಿದರೆ ಸರಿಹೋಗುತ್ತದೆ. ಈ ಸಂಬಂಧ ತಕ್ಷಣವೇ ಕ್ರಮ ಕೈಗೊಳ್ಳದಿದ್ದರೆ ಅಧಿಕಾರಿಗಳಿಗೆ ತೊಂದರೆ ಕಟ್ಟಿಟ್ಟ ಬುತ್ತಿ’ ಎಂದು ನ್ಯಾಯಪೀಠ ಎಚ್ಚರಿಸಿತು.

ಪಾರ್ಕ್, ಮೈದಾನಗಳ ಸರ್ವೆ ವರದಿಯನ್ನು ಸಲ್ಲಿಸಲು ಹತ್ತು ದಿನಗಳ ಕಾಲಾವಕಾಶ ಕೋರಿದ ಬಿಬಿಎಂಪಿ ಪರ ವಕೀಲರ ಮನವಿ ಮನ್ನಿಸಿದ ನ್ಯಾಯಪೀಠ ಸರ್ವೆ ವರದಿ ಸಲ್ಲಿಕೆಗೆ ಕೊನೆಯ ಅವಕಾಶ ನೀಡಿ ವಿಚಾರಣೆ ಮುಂದೂಡಿದೆ.

ಸಿಐಟಿಯು, ಎಎಪಿ ಆಟೋರಿಕ್ಷಾ ಚಾಲಕರ ಘಟಕ ಪ್ರತಿಭಟನೆ

ಎಲ್‌ಪಿಜಿ ದರ ಏರಿಕೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊಗಳಿಗೆ ಬಳಸುವ ಎಲ್‌ಪಿಜಿ ದರ ಏರಿಕೆಯನ್ನು ಖಂಡಿಸಿ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಚಾಲಕರು, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ಸಿಐಟಿಯು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಹಾಗೂ ಆಮ್ ಆದ್ಮಿ ಪಕ್ಷದ ಆಟೊ ಚಾಲಕರ ಘಟಕದಿಂದ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾಧಿಕಾರಿ ಕಚೇರಿ ಎದುರು ಹಾಗೂ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಚಾಲಕರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

‘ಕಳೆದ ವರ್ಷ ಎಲ್‌ಪಿಜಿ ಪ್ರತಿ ಕೆ.ಜಿ.ಗೆ ₹ 38 ದರವಿತ್ತು. ಇದೀಗ ದರವನ್ನು ₹ 66ಕ್ಕೆ ಏರಿಸಲಾಗಿದೆ. ದಿನದಿಂದ ದಿನಕ್ಕೆ ದರ ಏರಿಕೆ ಮಾಡುವ ಮೂಲಕ ಕೇಂದ್ರ ಸರ್ಕಾರ, ಬಡ ಆಟೊ ಚಾಲಕರ ಹೊಟ್ಟೆ ಮೇಲೆ ಬರೆ ಎಳೆಯುತ್ತಿದೆ. ಇಂದಿನ ತುಟ್ಟಿ ದಿನಗಳಲ್ಲಿ ಚಾಲಕರು ಜೀವನ ನಡೆಸುವುದೇ ಕಷ್ಟವಾಗುತ್ತಿದೆ’ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

‘ಎಲ್‌ಪಿಜಿ ಪೂರೈಸುವ ಕಂಪನಿಗಳ ಪರ ಕೇಂದ್ರ ಸರ್ಕಾರ ಕೆಲಸ ಮಾಡುತ್ತಿದೆ. ಉದ್ಯಮಿಗಳಿಗೆ ಲಾಭ ಮಾಡಿಕೊಡಲು ಬೆಲೆ ಏರಿಕೆ ಮಾಡಿದೆ. ಇಂಥ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಜನ ವಿರೋಧಿ ಸರ್ಕಾರ ನಡೆಸುತ್ತಿದ್ದಾರೆ. ಬಡವರು ಹಾಗೂ ಚಾಲಕರ ಬಗ್ಗೆ ಅವರಿಗೆ ಕನಿಕರ ಇದ್ದರೆ, ಕೂಡಲೇ ಎಲ್‌ಪಿಜಿ ದರ ಇಳಿಕೆ ಮಾಡಲಿ’ ಎಂದು ಪ್ರತಿಭಟನಕಾರರು ಸವಾಲು ಹಾಕಿದರು.



ಸಿಐಟಿಯು ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ನೇತೃತ್ವದಲ್ಲಿ ಚಾಲಕರು ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ನಿಧಿಗಾಗಿ ಪೂಜೆ ಸಲ್ಲಿಸುತ್ತಿದ್ದವರು ವಶಕ್ಕೆ

ಪ್ರಜಾವಾಣಿ ವಾರ್ತೆ

ರಾಮನಗರ: ಕನಕಪುರ ತಾಲ್ಲೂಕಿನ ಭೂಹಳ್ಳಿಯ ಮನೆಯೊಂದರಲ್ಲಿ ನಿಧಿ ಆಸೆಗಾಗಿ ಪೂಜೆ ಸಲ್ಲಿಸಿ ವಾಮಾಚಾರ ನಡೆಸುತ್ತಿದ್ದವರನ್ನು ಮಂಗಳವಾರ ತಡರಾತ್ರಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಒಟ್ಟು 13 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಇವರ ಜೊತೆಗೆ ನಾಲ್ಕು ವರ್ಷದ ಹೆಣ್ಣು ಮಗುವೂ ಇದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ.

ಗ್ರಾಮದ ಮನೆಯಲ್ಲಿ ಕೆಲವು ತಿಂಗಳಿಂದ ರಾತ್ರೋ ರಾತ್ರಿ ಪೂಜೆ ನಡೆಯುತ್ತಿತ್ತು. ಮನೆಯಲ್ಲೆಲ್ಲ ಗುಂಡಿಗಳನ್ನು ಅಗೆಯಲಾಗಿತ್ತು. ಹೊರ ಜಿಲ್ಲೆಗಳಿಂದ ಬಂದು ಇಲ್ಲಿ ಆಗಾಗ್ಗೆ ಪೂಜೆ ನೆರವೇರಿಸಿ ಹೋಗುತ್ತಿದ್ದರು ಎಂದು ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಮನೆಯ ಮಾಲೀಕರನ್ನೂ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಸಾತನೂರು ಠಾಣೆ ಸಿಬ್ಬಂದಿ ಈ ದಾಳಿ ನಡೆಸಿದರು.



ಪುನೀತ್ ಅವರ ಹೆಸರಿನಲ್ಲಿ ನಟ ವಿನೋದ್‌ರಾಜ್ ಸೋಮವಾರ ಕಾವೇರಿ ನದಿಯಲ್ಲಿ ಪುಣ್ಯ ತಿಥಿಯ ಸಾಂಪ್ರದಾಯಿಕ ಪೂಜೆ ನೆರವೇರಿಸಿದರು

ಪುನೀತ್ ಹೆಸರಿನಲ್ಲಿ ವಿನೋದ್‌ರಾಜ್ ಪಿಂಡ ಪ್ರದಾನ

ಶ್ರೀರಂಗಪಟ್ಟಣ: ದಿವಂಗತ ನಟ ಪುನೀತ್ ರಾಜಕುಮಾರ್ ಪುಣ್ಯ ತಿಥಿಯ ಪ್ರಯುಕ್ತ ಹಿರಿಯ ನಟ ವಿನೋದ್ ರಾಜ್ ಸೋಮವಾರ ಸಮೀಪದ ಕಾವೇರಿ ಸಂಗಮದ ಕಾವೇರಿ ನದಿ ದಡದ ಲೋಕೇಶ್ ಅವರ ತೋಟದ ಕುಟೀರದಲ್ಲಿ ಪಿಂಡ ಪ್ರದಾನ ಮಾಡಿದರು.

ಪುನೀತ್ ಅವರ ಸಮಾಧಿಯ ಮೃತ್ತಿಕೆ (ಮಣ್ಣು)ಯ ಕುಡಿಕೆ ಇಟ್ಟು ಪುಣ್ಯ ತಿಥಿಯ ವಿಧಿ, ವಿಧಾನಗಳನ್ನು ವಿನೋದ್‌ರಾಜ್ ಪೂರೈಸಿದರು. ತಿಲ ತರ್ಪಣ, ನಾರಾಯಣಬಲಿ, ಪುಣ್ಯಾಹ, ಗಣಪತಿ ಪೂಜೆ ಮತ್ತು ಹೋಮ ದೇವರಾಜ ದೀಕ್ಷಿತ್ ಮಾರ್ಗದರ್ಶನದಲ್ಲಿ ನಡೆಯಿತು. ಮೃತ್ತಿಕೆಯನ್ನು ಪೂಜಿಸಿದ ಬಳಿಕ ಕಾವೇರಿ ನದಿಯಲ್ಲಿ ವಿಸರ್ಜಿಸಲಾಯಿತು. ಹಿರಿಯ ನಟಿ ಲೀಲಾವತಿ ಕಾರಿನಲ್ಲೇ ಕುಳಿತು ವೀಕ್ಷಿಸಿದರು. ವಿನೋದ್‌ರಾಜ್ ಕುಟುಂಬದ ಹತ್ತಿರದ ಬಂಧುಗಳು ಹಾಜರಿದ್ದರು.

ಮೈ ನವಿರೇಳಿಸುವ ಧಾರವಾಡದ ಕ್ರೀಡಾಪಟುಗಳ ಕಸರತ್ತು, ದೊಡ್ಡ ಸಾಧನೆಯ ಗುರಿ

ಜಿಮ್ನಾಸ್ಟ್‌ಗಳ ಸಾಹಸ ಲೋಕ...

● ಪ್ರಮೋದ

ಹುಬ್ಬಳ್ಳಿ: ಅಲ್ಲಿ ಬೆಳಗಿನ ಜಾವ ಐದು ಗಂಟೆಗೆಲ್ಲ ಮಕ್ಕಳ ಕಲರವ. ದೈಹಿಕ ಕಸರತ್ತು ನಡೆಸಲು ನಾ ಮುಂದು, ತಾ ಮುಂದು ಎನ್ನುವ ಪೈಪೋಟಿ. ದೊಡ್ಡ ಸಾಧನೆ ಮಾಡುವ ಹೆಬ್ಬಯಕೆ ಹೊಂದಿರುವ ಜಿಮ್ನಾಸ್ಟ್‌ಗಳಿಗೆ ಕೋಚ್‌ಗಳಿಂದ ಕಟ್ಟುನಿಟ್ಟಿನ ತರಬೇತಿ.

ಇದು ಧಾರವಾಡದ ಕಿಲ್ಲಾ ಏರಿಯಾದಲ್ಲಿರುವ ಬಾಲಮಾರುತಿ ಸಂಸ್ಥೆಯ ಹಾರಾಡಿ ರಾಮಣ್ಣ ಶೆಟ್ಟಿ ಜಿಮ್ನಾಸ್ಟಿಕ್ ಸಂಸ್ಥೆಯ ಕೇಂದ್ರದಲ್ಲಿ ನಿತ್ಯ ಕಂಡುಬರುವ ದೃಶ್ಯ.

1969ರಲ್ಲಿ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಮೂಲಕ ಧಾರವಾಡದಲ್ಲಿ ಜಿಮ್ನಾಸ್ಟಿಕ್ ಚಟುವಟಿಕೆಗಳು ಆರಂಭವಾದವು. ಹಾರಾಡಿ ರಾಮಣ್ಣ ಶೆಟ್ಟಿ ಕೇಂದ್ರದಲ್ಲಿ ತರಬೇತಿ ಪಡೆದ ಜಿಮ್ನಾಸ್ಟ್‌ಗಳು ರಾಷ್ಟ್ರೀಯ ಮಟ್ಟದಲ್ಲಿ 35 ಪದಕಗಳನ್ನು ಜಯಿಸಿದ್ದಾರೆ. ರಾಜ್ಯಮಟ್ಟದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಪದಕಗಳು ಬಂದಿವೆ.

10, 12 ಹಾಗೂ 14 ವರ್ಷದ ಒಳಗಿನ ಬಾಲಕ, ಬಾಲಕಿಯರ ವಿಭಾಗ ಮತ್ತು ಸೀನಿಯರ್ ವಿಭಾಗದಲ್ಲಿ ಪದಕಗಳು ಲಭಿಸಿವೆ. ಹಾರಾಡಿ ರಾಮಣ್ಣಶೆಟ್ಟಿ ಜಿಮ್ನಾಸ್ಟಿಕ್ ಸಂಸ್ಥೆ ಹಲವು ಬಾರಿ ಟೂರ್ನಿಗಳನ್ನು ಸಂಘಟಿಸಿದೆ.

ಕೋವಿಡ್ ಪ್ರಕರಣಗಳು ಕಡಿಮೆಯಾದ ಬಳಿಕ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಆರೋಗ್ಯದ ಕಾಳಜಿ ಹೆಚ್ಚಾಗಿದೆ. ಪೋಷಕರು ತಮ್ಮ ಮಕ್ಕಳು ಸಾಹಸ ಕ್ರೀಡೆ ಕಲಿಯಲಿ ಎಂದು ಪ್ರೋತ್ಸಾಹ ನೀಡುತ್ತಿದ್ದಾರೆ. ಬೆಳಿಗ್ಗೆ ಸಾಮಾನ್ಯ ದೈಹಿಕ ವ್ಯಾಯಾಮದಿಂದ ಆರಂಭವಾಗುವ ಅಭ್ಯಾಸ ಕೊನೆಗೆ ಕಠಿಣ ತಾಲೀಮಿನ ತನಕ ಮುಂದುವರಿಯುತ್ತದೆ ಎಂದು ಜಿಮ್ನಾಸ್ಟಿಕ್ ಸಂಸ್ಥೆಯ ಮುಖ್ಯ ಕೋಚ್ ವಿಠ್ಠಲ್ ಮೂರ್ತಗುಡ್ಡೆ ಹೇಳುತ್ತಾರೆ.



ಧಾರವಾಡದ ಜಿಮ್ನಾಸ್ಟಿಕ್ ಕೇಂದ್ರದಲ್ಲಿ ಮಕ್ಕಳಿಗೆ ತರಬೇತಿ ನೀಡುತ್ತಿರುವ ಮುಖ್ಯ ಕೋಚ್ ವಿಠ್ಠಲ್ ಮೂರ್ತಗುಡ್ಡೆ

‘ಧಾರವಾಡದಲ್ಲಿ ಜಿಮ್ನಾಸ್ಟಿಕ್ ಹವಾ’ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಜಾರಕಿಹೊಳಿ ಸಿ.ಡಿ ಬಹಿರಂಗ ಪ್ರಕರಣ ಅಂತಿಮ ವರದಿ ಸಲ್ಲಿಸಲು ಆದೇಶ

ಬೆಂಗಳೂರು: ‘ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿ.ಡಿ ಬಹಿರಂಗ ಪ್ರಕರಣದ ತನಿಖಾ ವರದಿಯನ್ನು ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿಯವರು ಪರಿಶೀಲಿಸಿ ಅದನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು’ ಎಂದು ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಸಲ್ಲಿಸಲಾಗಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಅಂತಿಮ ವರದಿ ಸಲ್ಲಿಸುವ ವೇಳೆಯಲ್ಲಿ ಎಸ್‌ಐಟಿ ಮುಖ್ಯಸ್ಥ ಸೌಮೇಂದು ಮುಖರ್ಜಿ ರಜೆಯಲ್ಲಿದ್ದರು’ ಎಂಬ ಅಂಶವನ್ನು ಗಮನಕ್ಕೆ ತೆಗೆದುಕೊಂಡ ನ್ಯಾಯಪೀಠ, ‘ಈ ಸಂಬಂಧದ ಅಂತಿಮ ವರದಿಯನ್ನು ಎಸ್‌ಐಟಿ ಮುಖ್ಯಸ್ಥ ಮುಖರ್ಜಿ ಅವರು ಪರಿಶೀಲಿಸಿ ಅದನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಬೇಕು. ವರದಿಯನ್ನು ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸುವಂತಿಲ್ಲ’ ಎಂದು ನಿರ್ದೇಶಿಸಿದೆ.

ಸಂತ್ರಸ್ತ ಯುವತಿ ಪರ ವಾದ ಮಂಡಿಸಿದ ಸುಪ್ರೀಂ ವಕೀಲೆ ಇಂದಿರಾ ಜೈಸಿಂಗ್, ‘ಎಸ್‌ಐಟಿ ಮುಖ್ಯಸ್ಥರ ಅನುಪಸ್ಥಿತಿಯಲ್ಲಿ ತನಿಖೆ ನಡೆಸಲಾಗಿದೆ. ಮುಖ್ಯಸ್ಥರ ಸಹಿ ಇಲ್ಲದೆ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಗೆ ಬೆಲೆಯಿಲ್ಲ. ಆದ್ದರಿಂದ, ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ದಾಖಲಿಸಲು ಅನುಮತಿ ನೀಡಬಾರದು’ ಎಂದರು.

ಎಸ್‌ಐಟಿ ಪರ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ‘ತನಿಖೆಯನ್ನು ನಿಯಮಬದ್ಧವಾಗಿಯೇ ಪೂರ್ಣಗೊಳಿಸಲಾಗಿದೆ. ಆರೋಪ ಪಟ್ಟಿ ಸಲ್ಲಿಕೆಗೆ ಅವಕಾಶ ನೀಡಬೇಕು’ ಎಂದರು.

ಎಸ್‌ಐಟಿ ಮುಖ್ಯಸ್ಥರು ತನಿಖಾ ವರದಿಯನ್ನು ಪರಿಶೀಲಿಸಿ ವರದಿಗೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯ ಸಲ್ಲಿಸುವವರೆಗೂ ಆರೋಪ ಪಟ್ಟಿ ಸಲ್ಲಿಸದಂತೆ ಸೂಚಿಸಿದೆ.

ಉತ್ತಂಗಿಯ ಕಾಟ್ರಹಳ್ಳಿ ಕಲ್ಲಪ್ಪಗೆ ಒಲಿದ ರಾಷ್ಟ್ರೀಯ ಪ್ರಶಸ್ತಿ


ಕಲ್ಲಪ್ಪ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಸಿರಿಧಾನ್ಯ ಹಾಗೂ ದೇಸಿ ಬೀಜ ತಳಿಗಳ ಸಂರಕ್ಷಣೆಯಲ್ಲಿ ತೊಡಗಿರುವ ತಾಲ್ಲೂಕಿನ ಉತ್ತಂಗಿ ಗ್ರಾಮದ ಸಾವಯವ ಕೃಷಿಕ ಕಾಟ್ರಹಳ್ಳಿ ಕಲ್ಲಪ್ಪ ಅವರು 'ಸಸ್ಯ ವಂಶವಾಹಿ ಸಂರಕ್ಷಕ ರೈತ' ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕೇಂದ್ರ ಸರ್ಕಾರದ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪ್ರಶಸ್ತಿ ನೀಡುತ್ತದೆ. ಇದೇ 11ರಂದು ನವ ದೆಹಲಿಯಲ್ಲಿ ಅವರು ಪ್ರಶಸ್ತಿ ಸ್ವೀಕರಿಸುವರು. ಪ್ರಶಸ್ತಿಯು ₹1 ಲಕ್ಷ ನಗದು ಪುರಸ್ಕಾರ ಒಳಗೊಂಡಿದೆ.

ಜೆಡಿಎಸ್‌ನಿಂದ 'ಜನತಾ ಜಲಧಾರೆ' ಅಭಿಯಾನ

ಪ್ರಜಾವಾಣಿ ವಾರ್ತೆ


ಕುಮಾರಸ್ವಾಮಿ

ಬೆಂಗಳೂರು: ರಾಜ್ಯದಲ್ಲಿರುವ 38 ನದಿಗಳ ನೀರಿನ ಸಂಗ್ರಹ ಮತ್ತು ಸಮರ್ಪಕ ಬಳಕೆಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ತಮ್ಮ ಪಕ್ಷದಿಂದ 'ಜನತಾ ಜಲಧಾರೆ' ಅಭಿಯಾನ ನಡೆಸಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ನಡೆಯುತ್ತಿರುವ 'ಜನತಾ ಸಂಗಮ'ದಲ್ಲಿ ಪಾಲ್ಗೊಳ್ಳುವ ಮುನ್ನ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನೀರಾವರಿ ವಿಷಯದಲ್ಲಿ ರಾಷ್ಟ್ರೀಯ ಪಕ್ಷಗಳು ರಾಜ್ಯದ ಹಿತವನ್ನು ರಕ್ಷಿಸುವುದಿಲ್ಲ. ಈಗಾಗಲೇ ರಾಜ್ಯ ಸರ್ಕಾರ ಕಳುಹಿಸಿರುವ ಮನವಿಗಳಿಗೆ ಕೇಂದ್ರ ಸರ್ಕಾರದ ಸರಿಯಾದ ಪ್ರತಿಕ್ರಿಯೆ ನೀಡಿಲ್ಲ. ಈ ಎಲ್ಲ ವಿಷಯಗಳನ್ನೂ ಅಭಿಯಾನದ ಮೂಲಕ ರಾಜ್ಯದ ಜನರ ಮುಂದಿಡುತ್ತೇವೆ' ಎಂದರು.

ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷವು ಪಾದಯಾತ್ರೆ ನಡೆಸಲು ತೀರ್ಮಾನಿಸಿರುವುದನ್ನು ತಾವು ಟೀಕಿಸುವುದಿಲ್ಲ. ಕಾಂಗ್ರೆಸ್ ನಾಯಕರು ಪಕ್ಷ ಸಂಘಟನೆಗಾಗಿ ಈ ಕಾರ್ಯಕ್ರಮ ನಡೆಸುತ್ತಿದ್ದಾರೋ ಎಂಬುದು ಗೊತ್ತಿಲ್ಲ. ಜೆಡಿಎಸ್ ಬದ್ಧತೆಯಿಂದ ಕೆಲಸ ಮಾಡುವ ಪಕ್ಷ. ಕಾಂಗ್ರೆಸ್‌ನ ವೇಗ ತಮ್ಮ ಪಕ್ಷಕ್ಕೆ ಬೇಡ. ಯಾವುದೇ ವಿಚಾರದಲ್ಲೂ ಗಿಮಿಕ್ ಮಾಡುವುದಿಲ್ಲ ಎಂದು ಹೇಳಿದರು.

ಹೃದಯ ವೈಶಾಲ್ಯತೆ ಮೆರೆಯಲಿ: ಕರ್ನಾಟಕದ ನೀರಾವರಿ ವಿಚಾರಗಳ ಕುರಿತು ನೆರೆಯ ರಾಜ್ಯಗಳು ತಗಾದೆ ತೆಗೆಯುತ್ತಿವೆ. ಮೇಕೆದಾಟು ಯೋಜನೆಗೆ ತಮಿಳುನಾಡು ವಿರೋಧ ವ್ಯಕ್ತಪಡಿಸುತ್ತಿದೆ. ಕೃಷ್ಣಾ ನದಿ ನೀರಿನ ವಿಚಾರದಲ್ಲಿ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ ರಾಜ್ಯಗಳು ವಿವಾದ ಸೃಷ್ಟಿಸುತ್ತಿವೆ. ನೆರೆಯ ರಾಜ್ಯಗಳ ಲಕ್ಷಾಂತರ ಮಂದಿ ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಈ ವಿಷಯವನ್ನು ಅರ್ಥ ಮಾಡಿಕೊಂಡು ನೀರಾವರಿ ಯೋಜನೆಗಳ ವಿಷಯದಲ್ಲಿ ಹೃದಯ ವೈಶಾಲ್ಯತೆ ಪ್ರದರ್ಶಿಸಬೇಕು ಎಂದರು.

'ಪಕ್ಷದ ಪ್ರಮುಖರ ಸಮಿತಿಯನ್ನು ಶೀಘ್ರದಲ್ಲಿ ರಚಿಸಲಾಗುವುದು. ಸಮಿತಿಯಲ್ಲಿ ಯಾರೆಲ್ಲ ಇರಬೇಕು ಎನ್ನುವ ಕುರಿತು ಚರ್ಚೆ ನಡೆಯುತ್ತಿದೆ. ಪ್ರಾಮಾಣಿಕವಾಗಿ ಪಕ್ಷಕ್ಕೆ ದುಡಿಯುತ್ತಿರುವವರಿಗೆ ಸಮಿತಿಯಲ್ಲಿ ಸ್ಥಾನ ನೀಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜೆಡಿಎಸ್ ವಕ್ತಾರ ಟಿ.ಎ. ಶರವಣ ಪತ್ರಿಕಾಗೋಷ್ಠಿಯಲ್ಲಿದ್ದರು.

'ಹೆಸರು ಬದಲಿಸಿದರೆ ಸಾಕೆ?'

'ಮುಂಬೈ ಕರ್ನಾಟಕದ ಹೆಸರನ್ನು 'ಕಿತ್ತೂರು ಕರ್ನಾಟಕ' ಎಂದು ಬದಲಾವಣೆ ಮಾಡಲಾಗಿದೆ. ಅದಕ್ಕಾಗಿ ಸಿಹಿ ಹಂಚಿ ಸಂಭ್ರಮಿಸುವ ಅಗತ್ಯವಿಲ್ಲ. ಹೈದರಾಬಾದ್ ಕರ್ನಾಟಕದ ಹೆಸರನ್ನು ಕಲ್ಯಾಣ ಕರ್ನಾಟಕ ಎಂದು ಬದಲಿಸಲಾಗಿದೆ. ಅಲ್ಲಿನ ಜನರ ಬದುಕು ಬದಲಾಗಿದೆಯಾ? ಈಗಲೂ ಅಲ್ಲಿನ ಜನರು ಕಷ್ಟದಲ್ಲೇ ಬದುಕುತ್ತಿದ್ದಾರೆ. ಇದು ರಾಷ್ಟ್ರೀಯ ಪಕ್ಷಗಳ ನಡವಳಿಕೆ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ವೆಂಕಟಾಚಲಶಾಸ್ತ್ರಿಗೆ 'ಅನಕೃ ಪ್ರಶಸ್ತಿ'


ಟಿ.ವಿ. ವೆಂಕಟಾಚಲಶಾಸ್ತ್ರಿ


ಸವಿತಾ ಶ್ರೀನಿವಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಕೃ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 'ಅನಕೃ ಪ್ರಶಸ್ತಿ'ಗೆ ವಿದ್ವಾಂಸ ಟಿ.ವಿ.ವೆಂಕಟಾಚಲಶಾಸ್ತ್ರಿ ಹಾಗೂ 'ಕೆ.ಟಿ.ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಪೊಲೀಸ್ ಅಧಿಕಾರಿಯಾಗಿರುವ ಲೇಖಕಿ ಸವಿತಾ ಶ್ರೀನಿವಾಸ್ ಅವರನ್ನು ಆಯ್ಕೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಪ್ರತಿಷ್ಠಾನದ ಟ್ರಸ್ಟಿ ಜಿ. ಅಶ್ವತ್ಥನಾರಾಯಣ, 'ಅನಕೃ ಪ್ರಶಸ್ತಿ ₹50 ಸಾವಿರ ಹಾಗೂ ಕೆ.ಟಿ. ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿ ₹10 ಸಾವಿರ ನಗದು ಒಳಗೊಂಡಿವೆ. ಇದೇ 14ರಂದು ಬೆಳಿಗ್ಗೆ 10 ಗಂಟೆಗೆ ಎನ್.ಆರ್.ಕಾಲೊನಿಯ ಬಿಎಂಶ್ರೀ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದರು.

'ಅನಕೃ ಪ್ರಶಸ್ತಿಯನ್ನು ಕುವೆಂಪು ಭಾಷಾಭಾರತಿಯ ಅಧ್ಯಕ್ಷ ಅಜಕ್ಕಳ ಗಿರೀಶ್ ಭಟ್ ಹಾಗೂ ಕೆ.ಟಿ. ಚಂದ್ರಶೇಖರ್ ಸಾಹಿತ್ಯಶ್ರೀ ಪ್ರಶಸ್ತಿಯನ್ನು ಲೇಖಕಿ ಸಂಧ್ಯಾ ರೆಡ್ಡಿ ಪ್ರದಾನ ಮಾಡಲಿದ್ದಾರೆ. ಅನಕೃ ಸ್ವರ್ಣ ಜಯಂತಿಯ ಸ್ಮರಣ ಗ್ರಂಥ 'ಅದಮ್ಯ ಚೇತನ' ಪುಸ್ತಕವನ್ನು ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಗುವುದು. ಪ್ರತಿಷ್ಠಾನದ ಗೌರವಾಧ್ಯಕ್ಷ ಅಶೋಕ್ ಹಾರನಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಲೇಖಕರಾದ ಪಿ.ವಿ.ನಾರಾಯಣ, ಎಲ್.ಜಿ.ಮೀರಾ ಭಾಗವಹಿಸಲಿದ್ದಾರೆ' ಎಂದು ಪ್ರತಿಷ್ಠಾನದ ಸದಸ್ಯ ಶಾ.ಮಂ.ಕೃಷ್ಣರಾಯ ಅವರು ಹೇಳಿದರು.

ನಿಧನ ವಾರ್ತೆ

ಪಿ. ಭೋಜರಾಜ ಹೆಗ್ಡೆ



ಬೆಳ್ತಂಗಡಿ: ಸ್ವಾತಂತ್ರ್ಯ ಹೋರಾಟಗಾರ, ಪಡಂಗಡಿಯ ಪಿ. ಭೋಜರಾಜ ಹೆಗ್ಡೆ (99) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ನಿಧನರಾದರು. ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ.

ಗಾಂಧಿವಾದಿಯಾಗಿದ್ದ ಭೋಜರಾಜ ಹೆಗ್ಡೆ ಅವರು 1942ರಲ್ಲಿ ಮಹಾತ್ಮ ಗಾಂಧಿ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ನಡೆದ 'ಭಾರತ ಬಿಟ್ಟು ತೊಲಗಿ' ಚಳವಳಿಯಲ್ಲಿ ಭಾಗವಹಿಸಿದ್ದರು. ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ರಾಮಕೃಷ್ಣ ಹೆಗಡೆ ಸೇರಿದಂತೆ ಅನೇಕ ರಾಜಕೀಯ ನಾಯಕರ ನಿಕಟ ಸಂಪರ್ಕ ಹೊಂದಿದ್ದರು. ತುರ್ತು ಪರಿಸ್ಥಿತಿ ಸಂದರ್ಭ ಜೈಲುವಾಸ ಅನುಭವಿಸಿದ್ದರು. ಉಜಿರೆ ರಬ್ಬರ್ ಸೊಸೈಟಿ, ಮುಂಡಾಜೆಯ ಶತಾಬ್ದಿ ವಿದ್ಯಾಲಯ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

ಮೂಡುಬಿದಿರೆಯ ಜೈನ ಮಠದ 'ತ್ಯಾಗಿ ಸೇವಾರತ್ನ' ಪ್ರಶಸ್ತಿ, ಅಹಮದಾಬಾದ್‌ನ ಮೊರಾರ್ಜಿ ದೇಸಾಯಿ ಪ್ರತಿಷ್ಠಾನದ 'ಗ್ರಾಮೋದ್ಧಾರ ಪ್ರಶಸ್ತಿ' ಅವರಿಗೆ ಸಂದಿತ್ತು.

ಗಣಿತ ತಜ್ಞ ಆರ್‌. ಎಲ್‌. ಕಶ್ಯಪ್‌ಗೆ ಪದ್ಮಶ್ರೀ, ಗಾಯಕ ಎಸ್‌. ಪಿ. ಬಾಲಸುಬ್ರಹ್ಮಣ್ಯಂಗೆ ಪದ್ಮವಿಭೂಷಣ

‘ಪದ್ಮ’ ಸ್ವೀಕರಿಸಿದ ಡಾ. ಹೆಗ್ಡೆ, ಕಂಬಾರ, ಮಂಜಮ್ಮ



ನವದೆಹಲಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಎಡದಿಂದ) ಡಾ. ಬಿ.ಎಂ. ಹೆಗ್ಡೆ (ಪದ್ಮವಿಭೂಷಣ), ಚಂದ್ರಶೇಖರ ಕಂಬಾರ (ಪದ್ಮಭೂಷಣ), ಆರ್‌.ಎಲ್‌. ಕಶ್ಯಪ್ (ಪದ್ಮಶ್ರೀ), ಬಿ.ಮಂಜಮ್ಮ ಜೋಗತಿ (ಪದ್ಮಶ್ರೀ) ಅವರು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಕ್ಷೇತ್ರಗಳ ಸಾಧಕರ ವಿಶಿಷ್ಟ ಸೇವೆ ಪರಿಗಣಿಸಿ ನೀಡಲಾಗುವ 2021ನೇ ಸಾಲಿನ ‘ಪದ್ಮ’ ಪ್ರಶಸ್ತಿಗಳನ್ನು ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಪ್ರದಾನ ಮಾಡಿದರು.

ಗಾಯಕ, ದಿವಂಗತ ಡಾ.ಎಸ್‌.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಮರಣೋತ್ತರವಾಗಿ ನೀಡಲಾದ ‘ಪದ್ಮವಿಭೂಷಣ’ ಪ್ರಶಸ್ತಯನ್ನು ಅವರ ಪುತ್ರ ಎಸ್‌.ಪಿ. ಚರಣ್ ಸ್ವೀಕರಿಸಿದರು.

ರಾಜ್ಯದ ಹೃದ್ರೋಗ ತಜ್ಞ ಡಾ.ಬಿ.ಎಂ. ಹೆಗ್ಡೆ ಅವರನ್ನು ‘ಪದ್ಮವಿಭೂಷಣ’ ಪ್ರಶಸ್ತಿಯಿಂದ ಗೌರವಿಸಲಾಯಿತು. ಕನ್ನಡದ ಸಾಹಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಚಂದ್ರಶೇಖರ ಕಂಬಾರ ಅವರು ‘ಪದ್ಮಭೂಷಣ ಪ್ರಶಸ್ತಿಯಿಂದ ಭಾಜನರಾದರೆ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆಯೂ ಆಗಿರುವ ಜಾನಪದ ಕಲಾವಿದೆ, ವಿಜಯನಗರ ಜಿಲ್ಲೆ ಮರಿಯಮ್ಮನಹಳ್ಳಿ ಗ್ರಾಮದ ಮಂಜಮ್ಮ ಜೋಗತಿ, ರಾಜ್ಯದ ಪ್ಯಾರಾ ಅಥ್ಲೀಟ್ (ಕುಬ್ಜ ಕ್ರೀಡಾಪಟು) ಕೆ.ವೈ. ವೆಂಕಟೇಶ್, ಅನ್ವಯಿಕ ಗಣಿತ ತಜ್ಞ ಆರ್‌.ಎಲ್‌. ಕಶ್ಯಪ್ ಅವರಿಗೆ ಪದ್ಮಶ್ರೀ ನೀಡಿ ಗೌರವಿಸಲಾಯಿತು.

ಸಾವಯವ ಕೃಷಿಯನ್ನು ಜನಪ್ರಿಯಗೊಳಿಸಿದ ಸಾಧನೆಗಾಗಿ 105 ವರ್ಷ ವಯಸ್ಸಿನ ರೈತ ಮಹಿಳೆ, ತಮಿಳುನಾಡಿನ ಕೊಯಮತ್ತೂರು ಮೂಲದ ಆರ್. ಪಾಪಮ್ಮಾಳ್ ಅವರು ‘ಪದ್ಮಶ್ರೀ’ ಪ್ರಶಸ್ತಿ ಸ್ವೀಕರಿಸಿದರು.

ಮಾಜಿ ಮುಖ್ಯಮಂತ್ರಿಗಳಾದ ಗುಜರಾತ್‌ನ ಕೇಶುಭಾಯ್ ಪಟೇಲ್, ಅಸ್ಸಾಂನ ತರುಣ್ ಗೊಗೊಯ್, ಹಾಗೂ ಕೇಂದ್ರದ ಮಾಜಿ ಸಚಿವ ರಾಮವಿಲಾಸ್ ಪಾಸ್ವಾನ್ ಅವರನ್ನು ಮರಣೋತ್ತರ ‘ಪದ್ಮಭೂಷಣ’ ಪ್ರಶಸ್ತಿಯಿಂದ ಗೌರವಿಸಲಾಯಿತು.

ಲೋಕಸಭೆಯ ಮಾಜಿ ಸ್ಪೀಕರ್ ಸುಮಿತ್ರಾ ಮಹಾಜನ್, ನಿವೃತ್ತ ಐಎಎಸ್ ಅಧಿಕಾರಿ ನೃಪೇಂದ್ರ ಮಿಶ್ರಾ ಅವರು ‘ಪದ್ಮಭೂಷಣ’ ಪ್ರಶಸ್ತಿಗೆ ಭಾಜನರಾದರು.

ಮಂಗಳವಾರ ಒಟ್ಟು ಮೂರು ‘ಪದ್ಮವಿಭೂಷಣ’, ಐದು ‘ಪದ್ಮಭೂಷಣ’ ಹಾಗೂ 52 ‘ಪದ್ಮಶ್ರೀ’ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ನಿರ್ಮಲಾ ಸೀತಾರಾಮನ್ ಹಾಗೂ ಪ್ರಶಸ್ತಿ ಪುರಸ್ಕೃತರ ಸಂಬಂಧಿಗಳು, ಸ್ನೇಹಿತರು ಸಮಾರಂಭದಲ್ಲಿ ಹಾಜರಿದ್ದರು.

ಕೊಡಗಿನ ಹಾಕಿ ಪಟು ಎಂ.ಪಿ. ಗಣೇಶ ಅವರು ಸೋಮವಾರ ನಡೆದ ಸಮಾರಂಭದಲ್ಲಿ 2020ನೇ ಸಾಲಿನ ‘ಪದ್ಮಶ್ರೀ’ ಪ್ರಶಸ್ತಿ ಸ್ವೀಕರಿಸಿದರು.

ರಾಷ್ಟ್ರಪತಿ ‘ದೃಷ್ಟಿ’ ತೆಗೆದ ಮಂಜಮ್ಮ!

ನವದೆಹಲಿ: ಜೋಗತಿ ನೃತ್ಯದೊಂದಿಗೆ ನಾಡಿನ ಮನೆಮಾತಾಗಿರುವ ಮಂಜಮ್ಮ ಜೋಗತಿ 2021ನೇ ಸಾಲಿನ ‘ಪದ್ಮಶ್ರೀ’ ಪ್ರಶಸ್ತಿ ಸ್ವೀಕರಿಸಲು ರಾಷ್ಟ್ರಪತಿ ಭವನದ ಸಭಾಂಗಣದಲ್ಲಿ, ತಮ್ಮ ವಿಶಿಷ್ಟ ಸಂಪ್ರದಾಯವನ್ನು ಆಚರಿಸಿ ಸಭಿಕರ ಗಮನ ಸೆಳೆದರು.

ನೇರಳೆ ಬಣ್ಣದ ರೇಷ್ಮೆ ಸೀರೆ, ಕಡುಗೆಂಪು ಬಣ್ಣದ ತುಂಬು ತೋಳಿನ ಕುಪ್ಪಸ ತೊಟ್ಟು, ಕೈತುಂಬ ಹಸಿರು ಬಳೆ ಧರಿಸಿ, ತಲೆಯಲ್ಲಿ ಮೈಸೂರು ಮಲ್ಲಿಗೆ ಮುಡಿದು ನಗು ಮೊಗದೊಂದಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರತ್ತ ನಡೆದ ಮಂಜಮ್ಮ, ತಮ್ಮ ಎಡಗೈಯಲ್ಲಿ ಸೆರಗು ಹಿಡಿದು ಜೋಗತಿ ಸಂಪ್ರದಾಯದಂತೆ, ಅಡಿಯಿಂದ ಮುಡಿಯವರೆಗೆ ಮೂರು ಬಾರಿ ರಾಷ್ಟ್ರಪತಿಯವರ ‘ದೃಷ್ಟಿ’ ತೆಗೆಯುತ್ತಿದ್ದಂತೆಯೇ ಸಭಿಕರೆಲ್ಲ ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ರಾಮನಾಥ ಕೋವಿಂದ್ ಅವರು ಕುಳಿತ ಆಸನದ ಕೆಳಗಿನ ಮೆಟ್ಟಿಲನ್ನು ಎರಡು ಬಾರಿ ಮುಟ್ಟಿ ನಮಸ್ಕರಿಸಿ ಎದ್ದ ಮಂಜಮ್ಮ, ಸೆರಗಿನಿಂದ ಇದ್ದಕ್ಕಿದ್ದಂತೆಯೇ ಮೂರು ಬಾರಿ ರಾಷ್ಟ್ರಪತಿಯವರ ದೃಷ್ಟಿತೆಗೆದು, ನಿವಾಳಿಸಿ, ಲಟಿಕೆ ಮುರಿದರು.

ಇದನ್ನು ಕಂಡು ಮುಗುಳುನಕ್ಕು ಮಾತಿಗಿಳಿದ ರಾಷ್ಟ್ರಪತಿಯವರೊಂದಿಗೆ, ನಗುತ್ತಲೇ ಮಾತು ಮುಂದುವರಿಸಿದ ಮಂಜಮ್ಮ, ಪ್ರಶಸ್ತಿ ಸ್ವೀಕರಿಸಿದಾಗ ಕರತಾಡನ ಕೇಳಿಬಂತು.

ಡಿ.10: ಮೇಲ್ಮನೆಗೆ ಹಣಾಹಣಿ

ಒಂದನೇ ಪುಟದಿಂದ

ಕಾಂಗ್ರೆಸ್ ನಾಯಕರು ಭಾನುವಾರ ಈ ಸಂಬಂಧ ವಿಶೇಷ ಸಭೆ ನಡೆಸಿದರು. ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದರು. ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೇ ಟಿಕೆಟ್ ನೀಡಬೇಕು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಅವಧಿ ಮುಗಿಯಲಿರುವ ಸದಸ್ಯರು: ವಿಜಯಸಿಂಗ್ (ಬೀದರ್), ಬಿ.ಜಿ. ಪಾಟೀಲ(ಕಲಬುರಗಿ), ಎಸ್.ಆರ್. ಪಾಟೀಲ, ಸುನೀಲ್‌ಗೌಡ ಪಾಟೀಲ (ವಿಜಯಪುರ), ಮಹಾಂತೇಶ ಕವಟಗಿಮಠ, ವಿವೇಕರಾವ್ ಪಾಟೀಲ(ಬೆಳಗಾವಿ), ಶ್ರೀಕಾಂತ್ ಘೋಟ್ನೇಕರ (ಉತ್ತರಕನ್ನಡ), ಪ್ರದೀಪ ಶೆಟ್ಟರ್, ಶ್ರೀನಿವಾಸ ಮಾನೆ (ಧಾರವಾಡ), ಬಸವರಾಜ ಪಾಟೀಲ ಇಟಗಿ (ರಾಯಚೂರು), ಕೆ.ಸಿ. ಕೊಂಡಯ್ಯ (ಬಳ್ಳಾರಿ), ಜೆ.ರಘು ಆಚಾರ್ (ಚಿತ್ರದುರ್ಗ), ಆರ್. ಪ್ರಸನ್ನ ಕುಮಾರ್ (ಶಿವಮೊಗ್ಗ), ಕೆ.ಪ್ರತಾಪಚಂದ್ರ ಶೆಟ್ಟಿ, ಕೋಟ ಶ್ರೀನಿವಾಸಪೂಜಾರಿ (ದಕ್ಷಿಣಕನ್ನಡ), ಎಂ.ಕೆ.ಪ್ರಾಣೇಶ್ (ಚಿಕ್ಕಮಗಳೂರು), ಎಂ.ಎ.ಗೋಪಾಲಸ್ವಾಮಿ (ಹಾಸನ), ಕಾಂತರಾಜ್ (ತುಮಕೂರು), ಎನ್.ಅಪ್ಪಾಜಿಗೌಡ (ಮಂಡ್ಯ), ಎಂ. ನಾರಾಯಣಸ್ವಾಮಿ (ಬೆಂಗಳೂರು), ಎಸ್.ರವಿ (ಬೆಂಗಳೂರು ಗ್ರಾಮಾಂತರ), ಸಿ.ಆರ್. ಮನೋಹರ್ (ಕೋಲಾರ), ಸುನೀಲ್ ಸುಬ್ರಮಣಿ (ಕೊಡಗು) ಮತ್ತು ಆರ್. ಧರ್ಮಸೇನಾ, ಸಂದೇಶ್ ನಾಗರಾಜು (ಮೈಸೂರು).

ಶಾಸಕರ ಸಹೋದರರು ಕಣಕ್ಕೆ: ಶಾಸಕರಾದ ಜಗದೀಶ ಶೆಟ್ಟರ್ ತಮ್ಮ ಪ್ರದೀಪ್ ಶೆಟ್ಟರ್, ಅಜಯ್‌ಸಿಂಗ್ ಅವರ ಅಣ್ಣ ವಿಜಯ್ ಸಿಂಗ್, ಅಪ್ಪಚ್ಚು ರಂಜನ್ ತಮ್ಮ ಸುನೀಲ್ ಸುಬ್ರಮಣಿ, ಎಂ.ಬಿ.ಪಾಟೀಲ ತಮ್ಮ ಸುನೀಲ್‌ಗೌಡ ಪಾಟೀಲ ಅವರು ಪರಿಷತ್ ಪ್ರತಿನಿಧಿಸುತ್ತಿದ್ದಾರೆ. ಅವರೆಲ್ಲರೂ ಮತ್ತೆ ಕಣಕ್ಕೆ ಇಳಿಯುವ ಸಾಧ್ಯತೆ ಇದೆ.

‘ರಾಬಿನ್ ಆನ್‌ಲೈನ್ ಸರ್ವೀಸ್’ ಮಾಲೀಕ ಹೇಳಿಕೆ

‘ಬಿಟ್ ಕಾಯಿನ್’ ಕಿತ್ತುಕೊಳ್ಳಲು ಅಪಹರಣ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ವಿವಿಧ ಜಾಲತಾಣಗಳನ್ನು ಹ್ಯಾಕ್ ಮಾಡಿ ದೋಚಿಟ್ಟುಕೊಂಡಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು (ಬಿಟಿಸಿ) ಕಿತ್ತುಕೊಳ್ಳಲು ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣನನ್ನೇ ಅಪಹರಿಸಿದ್ದ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಬಯಲಾಗಿದೆ.

‘ಬಿಟ್ ಕಾಯಿನ್ ಹಗರಣದ ಮೂಲ ಸೂತ್ರಧಾರ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (26), ದಿನದ ಬಹುಪಾಲು ಸಮಯವನ್ನು ಹ್ಯಾಕಿಂಗ್‌ಗೆ ಮೀಸಲಿರಿಸುತ್ತಿದ್ದ. ಜೊತೆಗಿದ್ದ ಸ್ನೇಹಿತರೇ, ಆತನನ್ನು ಅಪಹರಿಸಿ ಬಿಟ್ ಕಾಯಿನ್‌ಗಳನ್ನು ತಮ್ಮದಾಗಿಸಿಕೊಳ್ಳಲು ಮುಂದಾಗಿದ್ದರು’ ಎಂಬ ಅಂಶವನ್ನು ಸಿಸಿಬಿ ಪೊಲೀಸರ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುವ ಸಿಸಿಬಿ ಪೊಲೀಸರು, ಶ್ರೀಕೃಷ್ಣನನ್ನು ಅಪಹರಿಸಿದ್ದ ಹಾಗೂ ಅಕ್ರಮ ಬಂಧನದಲ್ಲಿಟ್ಟಿದ್ದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

‘ಶ್ರೀಕೃಷ್ಣನಿಂದ ಬಿಟ್ ಕಾಯಿನ್‌ಗಳನ್ನು ಪಡೆದು ಬೇರೆಯವರಿಗೆ ಮಾರಾಟ ಮಾಡುತ್ತಿದ್ದ ‘ರಾಬಿನ್ ಆನ್‌ಲೈನ್ ಸರ್ವೀಸ್’ ಮಾಲೀಕ ರಾಬಿನ್ ಖಂಡೇಲ್‌ವಾಲಾ, ಶ್ರೀಕೃಷ್ಣನ ಅಪಹರಣದ ಬಗ್ಗೆ ಹೇಳಿಕೆ ನೀಡಿದ್ದಾನೆ. ಜೊತೆಗೆ, ಸ್ನೇಹಿತರಿಂದ ತಪ್ಪಿಸಿಕೊಂಡ ಬಗೆಯನ್ನೂ ವಿವರಿಸಿದ್ದಾನೆ’ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

‘ಶ್ರೀಕೃಷ್ಣನ ಜೊತೆ ಬಿಟ್ ಕಾಯಿನ್ ವ್ಯವಹಾರ ಇಟ್ಟುಕೊಂಡಿದ್ದ ರಾಬಿನ್, 2020ರ ಆಗಸ್ಟ್ 13ರಂದು ಬೆಂಗಳೂರಿಗೆ ಬಂದಿದ್ದ. ಹೋಟೆಲ್ ಶೆರಟಾನ್‌ನಲ್ಲಿ ಎರಡು ದಿನ, ಗೋಕುಲಂ ಹೋಟೆಲ್‌ನಲ್ಲಿ 2 ದಿನ ಹಾಗೂ ಪ್ರೆಸ್ಟೀಜ್ ಗಾಲ್ಫ್ ಶೇರ್‌ನಲ್ಲಿ 30 ದಿನ ವಾಸವಿದ್ದ. ಇದೇ ಸಮಯದಲ್ಲೇ ಶ್ರೀಕೃಷ್ಣ, ಜಾಲತಾಣಗಳನ್ನು ಹ್ಯಾಕ್ ಮಾಡಿ ಬಿಟ್ ಕಾಯಿನ್ ದೋಚುತ್ತಿದ್ದ. ಅದೇ ಕಾಯಿನ್‌ಗಳನ್ನು ರಾಬಿನ್ ಮೂಲಕ ಮಾರಾಟ ಮಾಡಿಸಿ, ವಿವಿಧ ಖಾತೆಗಳಿಗೆ ಹವಾಲಾ ಮೂಲಕ ಹಣ ಹಾಕಿಸಿಕೊಳ್ಳುತ್ತಿದ್ದ’ ಎಂಬ ಸಂಗತಿ ಪಟ್ಟಿಯಲ್ಲಿದೆ.

ಬಿಟ್ ಕಾಯಿನ್ ನೀಡದಿದ್ದಕ್ಕೆ ಜಗಳ: ‘ಹ್ಯಾಕ್‌ನಿಂದ ದೋಚಿದ್ದ ಬಿಟ್ ಕಾಯಿನ್‌ಗಳನ್ನು ಶ್ರೀಕೃಷ್ಣ, ಸ್ನೇಹಿತರಿಗೆ ಕೊಟ್ಟಿರಲಿಲ್ಲ. ಪ್ರಕರಣದ ಆರೋಪಿಗಳಾದ ಸುನೀಶ್ ಹೆಗ್ಡೆ, ಸುಜಯ್ ಹಾಗೂ ಇತರರು ಶ್ರೀಕೃಷ್ಣನ ಮೇಲೆ ಸಿಟ್ಟಾಗಿದ್ದರು. ಬಿಟ್ ಕಾಯಿನ್ ನೀಡದಿದ್ದನ್ನು ಪ್ರಶ್ನಿಸಿ ಜಗಳ ಮಾಡಿ ಪರಸ್ಪರ ಕೈ ಕೈ ಮಿಲಾಯಿಸಿದ್ದರು’ ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

‘ರಾಬಿನ್ ಮುಂದಿಟ್ಟುಕೊಂಡು ಶ್ರೀಕೃಷ್ಣನನ್ನು ಹೆದರಿಸಿ ಬಿಟ್ ಕಾಯಿನ್‌ಗಳನ್ನು ತಮ್ಮದಾಗಿಸಿಕೊಳ್ಳಲು ಆರೋಪಿಗಳು ಸಂಚು ರೂಪಿಸಿದ್ದರು. ರಾಬಿನ್ ಕಾಲಿಗೆ ಬ್ಯಾಂಡೇಜ್ ಸುತ್ತಿ, ಆತನಿಗೆ ಹೊಡೆದಿರುವುದಾಗಿ ಶ್ರೀಕೃಷ್ಣನಿಗೆ ತೋರಿಸಿದ್ದರು. ಬಿಟ್ ಕಾಯಿನ್ ನೀಡದಿದ್ದರೆ ಜೀವಂತ ಬಿಡುವುದಿಲ್ಲವೆಂದು ಶ್ರೀಕೃಷ್ಣನನ್ನು ಬೆದರಿಸಿದ್ದರು. ಅದಕ್ಕೆ ಸೊಪ್ಪು ಹಾಕದ ಶ್ರೀಕೃಷ್ಣ, ಹೋಟೆಲ್‌ನಿಂದ ಪರಾರಿಯಾಗಿದ್ದ.’

‘ಶ್ರೀಕೃಷ್ಣನಿಗಾಗಿ ಆರೋಪಿಗಳು ಹಲವೆಡೆ ಹುಡುಕಾಟ ಆರಂಭಿಸಿದ್ದರು. ಸ್ನೇಹಿತರ ಮನೆಯಲ್ಲೂ ಶೋಧ ನಡೆಸಿದ್ದರು. ಶ್ರೀಕೃಷ್ಣನ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಇದೇ ಸಂದರ್ಭದಲ್ಲೇ ರಾಬಿನ್‌ಗೆ ಕರೆ ಮಾಡಿದ್ದ ಶ್ರೀಕೃಷ್ಣ, ಬಿಡದಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ವೊಂದರಲ್ಲಿ ಇರುವುದಾಗಿ ಹೇಳಿದ್ದ. ರಾಬಿನ್ ಹಾಗೂ ಇತರೆ ಆರೋಪಿಗಳು ಸ್ಥಳಕ್ಕೆ ಹೋಗಿದ್ದರು. ಅವಾಗಲೂ ಶ್ರೀಕೃಷ್ಣ, ಜಾಲತಾಣವೊಂದನ್ನು ಹ್ಯಾಕ್ ಮಾಡುತ್ತಿದ್ದದ್ದನ್ನು ಕಂಡಿದ್ದರು’ ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

‘ಶ್ರೀಕೃಷ್ಣನನ್ನು ಅಪಹರಿಸಿ ಬೆಂಗಳೂರಿಗೆ ಕರೆತಂದಿದ್ದ ಆರೋಪಿಗಳು, ಸುನೀಶ್‌ಗೆ ಸೇರಿದ್ದ ಫ್ಲ್ಯಾಟ್‌ನಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದರು. ಬಿಟ್ ಕಾಯಿನ್‌ಗಳನ್ನು ತಮಗೆ ಹಸ್ತಾಂತರ ಮಾಡುವಂತೆ ಒತ್ತಾಯಿಸಿದ್ದರು. ಅದಕ್ಕೆ ಶ್ರೀಕೃಷ್ಣ ಒಪ್ಪಿರಲಿಲ್ಲ. ರಾಬಿನ್‌ನನ್ನೂ ಆತನ ಜೊತೆಯಲ್ಲೇ ಕೊಠಡಿಯಲ್ಲಿ ಕೂಡಿ ಹಾಕಿದ್ದರು.’

‘ಯಾರಿಗೂ ಬಿಟ್ ಕಾಯಿನ್ ಕೊಡುವುದಿಲ್ಲವೆಂದು ಹೇಳಿದ್ದ ಶ್ರೀಕೃಷ್ಣ, ರಾಬಿನ್ ಜೊತೆಯಲ್ಲಿ ತಡರಾತ್ರಿ ಫ್ಲ್ಯಾಟ್‌ನಿಂದ ತಪ್ಪಿಸಿಕೊಂಡಿದ್ದ. ಬಾಣಸವಾಡಿಯ ವಸತಿಗೃಹವೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದ. ಮರುದಿನ ಬೇರೊಬ್ಬ ಸ್ನೇಹಿತನ ಜೊತೆ ಶ್ರೀಕೃಷ್ಣ ಹೊರಟುಹೋಗಿದ್ದ. ರಾಬಿನ್ ವಾಪಸು ತಮ್ಮೂರಿಗೆ ಹೋಗಿದ್ದ’ ಎಂಬ ಅಂಶವನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.



‘ಸಾಕ್ಷ್ಯ ಇದ್ದರೆ ಹಿಂದೇಟು ಏಕೆ?’

ಬೆಂಗಳೂರು: ಬಿಟ್ ಕಾಯಿನ್ ವ್ಯವಹಾರದ ಬಗ್ಗೆ ಸಾಕ್ಷ್ಯಗಳಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಯಾರ ಮೇಲೆ ನಂಬಿಕೆ ಇದೆಯೋ ಅವರಿಗೆ ಕೊಡಲಿ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಕಾಂಗ್ರೆಸ್‌ಗೆ ಯಾರ ಮೇಲೆ ನಂಬಿಕೆ ಇದೆ? ನ್ಯಾಯಾಂಗದ ಮೇಲೆ ವಿಶ್ವಾಸವಿದ್ದರೆ ಅವರಿಗೆ ಕೊಡಲಿ, ಸಿಬಿಐ ಮೇಲೆ ನಂಬಿಕೆ ಇದ್ದರೆ ಅವರಿಗೆ ಆಧಾರ ಕೊಡಲಿ. ಪೊಲೀಸರಿಗಾದರೂ ಕೊಡಲಿ. ಹಿಂದೇಟು ಏಕೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕಿಯನ್ನು ಬಂಧಿಸಿದ್ದು ಬಿಜೆಪಿ ಸರ್ಕಾರವಲ್ಲವೇ? ಆತ ಮಲ್ಯ ಟವರ್‌ನಲ್ಲಿ ಯಾರ ಜೊತೆ ಪಾರ್ಟಿ ಮಾಡ್ತಾ ಕುಳಿತಿದ್ದ? ಬಿಜೆಪಿ ಎಂಎಲ್‌ಎ ಮಗನ ಜೊತೆಗಾ? ಅಥವಾ ಕಾಂಗ್ರೆಸ್ ಶಾಸಕನ ಜೊತೆಗಾ ಎಂಬುದನ್ನು ತಿಳಿಸಲಿ’ ಎಂದರು.

ತನಿಖೆ ನಡೆಸಲಿ: ಸಿದ್ದರಾಮಯ್ಯ

‘ಬಿಟ್ ಕಾಯಿನ್ ಪ್ರಕರಣದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದವರು ಯಾರೇ ಇದ್ದರೂ ಮೊದಲು ತನಿಖೆ ಆರಂಭಿಸಬೇಕು. ಅದನ್ನು ಬಿಟ್ಟು ಸರ್ಕಾರ ನನ್ನ ಬಳಿಯೇ ಸಾಕ್ಷ್ಯ ಕೇಳುತ್ತಿದೆ. ಸಾಕ್ಷ್ಯ ಹುಡುಕುವುದು ತನಿಖಾಧಿಕಾರಿಗಳ ಕೆಲಸ. ನನ್ನಲ್ಲಿರುವ ಮಾಹಿತಿಯನ್ನು ಅಗತ್ಯ ಬಿದ್ದರೆ ನ್ಯಾಯಾಲಯಕ್ಕೆ ನೀಡುವೆ. ಈ ಕುರಿತು ಅಧಿವೇಶನದಲ್ಲಿ ಚರ್ಚಿಸುವೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಜಟಾಪಟಿಗೆ ಕಾರಣವಾದ ಮೀಡಿಯಾಪಾರ್ಟ್ ವರದಿ

ರಫೇಲ್ ಮಧ್ಯವರ್ತಿಗೆ ಲಂಚ ಕಾಂಗ್ರೆಸ್–ಬಿಜೆಪಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಫೇಲ್ ಯುದ್ಧ ವಿಮಾನ ಖರೀದಿ ವ್ಯವಹಾರದಲ್ಲಿ ಮಧ್ಯವರ್ತಿಗೆ ಲಂಚ ನೀಡಲಾಗಿದೆ ಎಂದು ಫ್ರಾನ್ಸ್‌ನ ಪೋರ್ಟಲ್ ‘ಮೀಡಿಯಾಪಾರ್ಟ್’ ಪ್ರಕಟಿಸಿರುವ ವರದಿಯು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಮಧ್ಯವರ್ತಿಗೆ ಲಂಚ ನೀಡಿದ್ದ ದಾಖಲೆಗಳು ಲಭ್ಯ ಇದ್ದರೂ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸಿಲ್ಲ; ನರೇಂದ್ರ ಮೋದಿ ನೇತೃತ್ವದ ಮೊದಲ ಅವಧಿಯ ಸರ್ಕಾರ ಇದ್ದಾಗ ರಕ್ಷಣಾ ಸಚಿವಾಲಯದ ದಾಖಲೆಗಳು ಮಧ್ಯವರ್ತಿಯ ಕೈಗೆ ಸಿಕ್ಕಿತ್ತು ಎಂದು ಮೀಡಿಯಾಪಾರ್ಟ್ ವರದಿ ಹೇಳಿದೆ.

ಭ್ರಷ್ಟಾಚಾರ, ಲಂಚ ಮತ್ತು ವಂಚನೆಯನ್ನು ಮುಚ್ಚಿ ಹಾಕಲು ಸರ್ಕಾರ ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಇದಕ್ಕೆ ತಿರುಗೇಟು ನೀಡಿರುವ ಬಿಜೆಪಿ, ‘ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಐಎನ್‌ಸಿ) ಎಂಬ ಹೆಸರನ್ನು ಐ ನೀಡ್ ಕಮಿಷನ್ (ನನಗೆ ಕಮಿಷನ್ ಬೇಕಿದೆ) ಎಂದು ಬದಲಾಯಿಸಬೇಕು’ ಎಂದು ಹೇಳಿದೆ.

ಮಧ್ಯವರ್ತಿ ಸುಶೇನ್ ಗುಪ್ತಾ ಅವರ ವಿರುದ್ಧದ ದಾಖಲೆಗಳನ್ನು ಮಾರಿಷಸ್ ಸರ್ಕಾರವು ಸಿಬಿಐಗೆ ನೀಡಿದ ಕೆಲವೇ ದಿನಗಳಲ್ಲಿ ಆಗ ಸಿಬಿಐ ನಿರ್ದೇಶಕರಾಗಿದ್ದ ಅಲೋಕ್ ವರ್ಮಾ ಅವರನ್ನು ವರ್ಗಾವಣೆ ಮಾಡಿದ್ದು ಏಕೆ? ಗುಪ್ತಾ ಅವರಿಂದ ರಫೇಲ್ ವಹಿವಾಟಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳನ್ನು ಇ.ಡಿ ವಶಪಡಿಸಿಕೊಂಡಿದ್ದರೂ ತನಿಖೆ ಮುಂದುವರಿಸಿಲ್ಲ ಏಕೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ರಫೇಲ್ ಯುದ್ಧವಿಮಾನ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೊದಲಿನಿಂದಲೂ ಆರೋಪಿಸುತ್ತಿದ್ದಾರೆ. ಮೀಡಿಯಾಪಾರ್ಟ್ ವರದಿ ಪ್ರಕಟವಾದ ಬಳಿಕ ತಮ್ಮ ಆರೋಪವನ್ನು ಅವರು ಪುನರುಚ್ಚರಿಸಿದ್ದಾರೆ. ‘ಪ್ರತಿ ಹೆಜ್ಜೆಯಲ್ಲಿಯೂ ಸತ್ಯ ನಿಮ್ಮ ಜತೆಗಿರುವಾಗ ಚಿಂತೆ ಏಕೆ? ನನ್ನ ಪ್ರೀತಿಯ ಕಾಂಗ್ರೆಸ್ ಕಾರ್ಯಕರ್ತರೇ, ಸರ್ಕಾರದ ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ನಿಲ್ಲಿಸಬೇಡಿ, ದಣಿಯಬೇಡಿ, ಭಯಪಡಬೇಡಿ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

‘ಬಿಜೆಪಿ ನೇತೃತ್ವದ ಸರ್ಕಾರವು ರಾಷ್ಟ್ರೀಯ ಹಿತಾಸಕ್ತಿಯನ್ನು ಬಲಿಕೊಟ್ಟಿದೆ. ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ನಷ್ಟ ಮಾಡಿದೆ. ಅನುಮಾನಾಸ್ಪದ ವ್ಯವಹಾರದ ಒಂದೊಂದು ವಿಚಾರ ಬಹಿರಂಗವಾದಾಗಲೂ ಅದು ಪ್ರಧಾನಿಯ ಮನೆಬಾಗಿಲಿಗೆ ಹೋಗಿ ನಿಲ್ಲುತ್ತದೆ’ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಹೇಳಿದ್ದಾರೆ.

ಯುಪಿಎ ಅಧಿಕಾರದಲ್ಲಿ ಇದ್ದಾಗ ಗುಪ್ತಾಗೆ ‘ರಹಸ್ಯವಾಗಿ ಕಮಿಷನ್’ ನೀಡಿದ ಬಗ್ಗೆ ರಾಹುಲ್ ಅವರು ಪ್ರತಿಕ್ರಿಯೆ ನೀಡಬೇಕು ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಆಗ್ರಹಿಸಿದ್ದಾರೆ. ‘ಐಎನ್‌ಸಿ ಎಂಬುದನ್ನು ಐ ನೀಡ್ ಕಮಿಷನ್ ಎಂದು ಬದಲಾಯಿಸುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ರಾಬರ್ಟ್ ವಾದ್ರಾ ಎಲ್ಲರೂ ತಮಗೆ ಕಮಿಷನ್ ಬೇಕು ಎನ್ನುತ್ತಿದ್ದಾರೆ’ ಎಂದು ಪಾತ್ರಾ ಆಪಾದಿಸಿದ್ದಾರೆ.

> **ದಾಖಲೆ ಇದ್ದರೂ ಇ.ಡಿ. ತನಿಖೆ ಏಕೆ ಮಾಡಿಲ್ಲ? ತನಿಖೆ ನಡೆಸದಂತೆ ಸರ್ಕಾರದ ಮೇಲೆ ಇದ್ದ ಒತ್ತಡ ಏನು? ಸರ್ಕಾರದ ಚಿಂತೆ ಏನು?**
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

> **ರಾಹುಲ್ ಅವರು ಸುಳ್ಳು ಮತ್ತು ತಪ್ಪು ಮಾಹಿತಿ ಹರಡುತ್ತಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಭ್ರಷ್ಟಾಚಾರಕ್ಕೆ ನೆಲೆ ಇಲ್ಲದಂತಾಗಿದೆ**
> **ಸಂಬಿತ್ ಪಾತ್ರಾ,** ಬಿಜೆಪಿ ವಕ್ತಾರ

ಏಳು ಮಂದಿಗೆ ಕೃಷಿ ಪ್ರಶಸ್ತಿ

ಬೆಂಗಳೂರು: ಕೃಷಿಯಲ್ಲಿ ಉತ್ತಮ ಸಾಧನೆ ಮಾಡಿದ ರೈತರು, ವಿಜ್ಞಾನಿಗಳು ಹಾಗೂ ವಿಸ್ತರಣಾ ಕಾರ್ಯಕರ್ತರು ಸೇರಿದಂತೆ ಏಳು ಮಂದಿಗೆ ಈ ಬಾರಿಯ ರಾಜ್ಯಮಟ್ಟದ ವಿವಿಧ ಕೃಷಿ ಪ್ರಶಸ್ತಿಗಳನ್ನು ಕೃಷಿ ವಿಶ್ವವಿದ್ಯಾಲಯ ಕುಲಪತಿ ಎಸ್. ರಾಜೇಂದ್ರ ಪ್ರಸಾದ್ ತಿಳಿಸಿದರು.

‘ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ’ಗೆ ಹಾಸನ ಜಿಲ್ಲೆಯ ದೊಡ್ಡಮಗ್ಗೆಯ ಎಂ.ಸಿ. ರಂಗಸ್ವಾಮಿ, ‘ಎಂ.ಎಚ್.ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ’ಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ತುಮಕೂರಿನ ಟಿ.ಎಂ.ಅರವಿಂದ, ‘ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ’ಗೆ ಹಾಸನ ಜಿಲ್ಲೆಯ ಯಡೂರು ಗ್ರಾಮದ ವೈ.ಜಿ.ಮಂಜುಳಾ, ‘ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ’ಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಷ್ಮಿದೇವಿಪುರದ ಸಿ. ನವಿಕ್ರಮ್, ‘ಆರ್.ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ’ಗೆ ಕೋಲಾರ ಜಿಲ್ಲೆಯ ಅರಿನಾಗನಹಳ್ಳಿ ಮುನಿರೆಡ್ಡಿ, ‘ಆರ್.ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ’ಗೆ ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಎ.ಪಿ.ಮಲ್ಲಿಕಾರ್ಜುನಗೌಡ, ‘ಎಂ.ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ’ಗೆ ಬಾಗಲಕೋಟೆ ತೋಟಗಾರಿಕಾ ವಿ.ವಿ ಸಂಶೋಧನಾ ನಿರ್ದೇಶಕ ಎಚ್.ಪಿ.ಮಹೇಶ್ವರಪ್ಪ ಆಯ್ಕೆಯಾಗಿದ್ದಾರೆ.

ನ.14ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದರು.

ಲೈಂಗಿಕ ಕಿರುಕುಳ: ರಾಜೇಶ್ ಭಟ್ ವಿರುದ್ಧ ಲುಕ್‌ಔಟ್ ನೋಟಿಸ್

ಮಂಗಳೂರು: ‘ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊಂದಿ, ತಲೆಮರೆಸಿಕೊಂಡಿರುವ ವಕೀಲ ಕೆ.ಎಸ್.ಎನ್. ರಾಜೇಶ್ ಭಟ್ ಪತ್ತೆಗಾಗಿ ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿದೆ. ಆರೋಪಿಯ 12 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಆರೋಪಿ ಪತ್ತೆಗೆ ಎಸಿಪಿ ರಂಜಿತ್ ಬಂಡಾರು ಅವರನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಲಾಗಿದ್ದು, ನಾಲ್ಕು ತಂಡಗಳು ಆರೋಪಿಯ ಪತ್ತೆ ಕಾರ್ಯದಲ್ಲಿ ನಿರತವಾಗಿವೆ. ಸಾಕ್ಷ್ಯನಾಶಕ್ಕೆ ಸಂಬಂಧಿಸಿದಂತೆ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ಪವಿತ್ರಾ ಆಚಾರ್ಯ ಹಾಗೂ ಅನಂತ ಭಟ್ ಎಂಬುವರನ್ನು ಈಗಾಗಲೇ ಬಂಧಿಸಲಾಗಿದೆ ಎಂದು ಹೇಳಿದ್ದಾರೆ.

ಆರೋಪಿಯ ಹೆಸರಿನಲ್ಲಿದ್ದ 12 ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಬ್ಯಾಂಕ್‌ಗಳಿಗೆ ಮನವಿ ನೀಡಲಾಗಿದೆ. ಆರೋಪಿಯು ವಿದೇಶಕ್ಕೆ ಪ್ರಯಾಣಿಸುವುದನ್ನು ತಡೆಯಲು ಲುಕ್‌ಔಟ್ ನೋಟಿಸ್ ಜಾರಿಗೊಳಿಸಲಾಗಿದೆ ಎಂದಿದ್ದಾರೆ.

‘ಆರೋಪಿ ಆಂಧ್ರಪ್ರದೇಶ, ತಮಿಳುನಾಡು ಮೊದಲಾದೆಡೆ ಸಂಚರಿಸುತ್ತಿರುವ ಮಾಹಿತಿ ಲಭಿಸಿದೆ. ಶೀಘ್ರದಲ್ಲಿ ತನಿಖಾ ತಂಡಗಳು ಆರೋಪಿಯನ್ನು ಬಂಧಿಸಲಿವೆ’ ಎಂದು ತಿಳಿಸಿದ್ದಾರೆ.

ಪುನೀತ್ ಪ್ರೇರಣೆ: ಕಣ್ಣು ದಾನ ಮಾಡಲು 150 ಜನ ಒಪ್ಪಿಗೆ

ನೇತ್ರದಾನಕ್ಕೆ ಮುಂದಾದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಹೊಳಲ್ಕೆರೆ (ಚಿತ್ರದುರ್ಗ ಜಿ.): ಚಿತ್ರನಟ ಪುನೀತ್ ರಾಜಕುಮಾರ್ ಪ್ರೇರಣೆಯಿಂದ ಒಂದೇ ದಿನ ತಾಲ್ಲೂಕಿನ ದಾಸಯ್ಯನ ಹಟ್ಟಿಯ 150 ಜನ ನೇತ್ರದಾನ ಮಾಡಲು ಒಪ್ಪಿಗೆ ಪತ್ರ ನೀಡಿದರು.

ಮಂಗಳವಾರ ಗ್ರಾಮದಲ್ಲಿ ನಡೆದ ಪುನೀತ್ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಬಸವೇಶ್ವರ ಪುನರ್ಜ್ಯೋತಿ ನೇತ್ರ ಬ್ಯಾಂಕ್‌ನವರನ್ನು ಕರೆಸಿ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿದರು.

‘ನೇತ್ರದಾನಕ್ಕೆ ಒಪ್ಪಿಗೆ ನೀಡುವ ಮೂಲಕ ಪುನೀತ್ ಅವರಿಗೆ ಗೌರವ ಸೂಚಿಸಿದ್ದೇವೆ. ನಮ್ಮ ಕಾರ್ಯ ನೋಡಿ ಬೇರೆಯವರೂ ನೇತ್ರದಾನಕ್ಕೆ ಮುಂದಾಗಲಿ ಎಂಬುದು ನಮ್ಮ ಉದ್ದೇಶ. ಈಗ 150 ಜನ ನೇತ್ರದಾನಕ್ಕೆ ಒಪ್ಪಿಗೆ ನೀಡಿದ್ದು, ಇನ್ನೂ ಹೆಚ್ಚು ಜನ ಮುಂದೆ ಬರುವ ನಿರೀಕ್ಷೆ ಇದೆ’ ಎನ್ನುತ್ತಾರೆ ಕಾರ್ಯಕ್ರಮ ಆಯೋಜಿಸಿದ್ದ ಬಿ. ಚಂದ್ರು. ಎಂ.ಚಂದ್ರಶೇಖರ್.

‘ದಾಸಯ್ಯನ ಹಟ್ಟಿ ಗ್ರಾಮಸ್ಥರ ಕೋರಿಕೆಯ ಮೇರೆಗೆ ಅವರ ಗ್ರಾಮಕ್ಕೇ ಹೋಗಿ ನೇತ್ರದಾನದ ಒಪ್ಪಿಗೆ ಪತ್ರಗಳನ್ನು ಪಡೆದಿದ್ದೇವೆ. ಒಂದೇ ಗ್ರಾಮದಲ್ಲಿ ಇಷ್ಟೊಂದು ಜನ ನೇತ್ರದಾನಕ್ಕೆ ಸಹಿ ಹಾಕಿರುವುದು ಎಲ್ಲರಿಗೂ ಮಾದರಿ. ನೇತ್ರದಾನಕ್ಕೆ ಮರಣಪೂರ್ವ ನೋಂದಣಿ ಮಾಡಲೇಬೇಕು ಎಂದು ಕಡ್ಡಾಯವೇನೂ ಇಲ್ಲ. ಕನ್ನಡಕ ಹಾಕುವವರು, ಮಧುಮೇಹ, ಬಿಪಿ, ಕಣ್ಣಿನ ಪೊರೆ ಹಾಗೂ ಸಾಮಾನ್ಯ ಕಾಯಿಲೆಗಳು ನೇತ್ರದಾನಕ್ಕೆ ಅಡ್ಡಿ ಮಾಡುವುದಿಲ್ಲ’ ಎನ್ನುತ್ತಾರೆ ಬಸವೇಶ್ವರ ಪುನರ್ಜ್ಯೋತಿ ನೇತ್ರ ಬ್ಯಾಂಕ್ ಸ್ಥಾಪನಾ ಅಧ್ಯಕ್ಷೆ ಗಾಯತ್ರಿ ಶಿವರಾಮ್.



ಹೊಳಲ್ಕೆರೆ ತಾಲ್ಲೂಕಿನ ದಾಸಯ್ಯನ ಹಟ್ಟಿಯಲ್ಲಿ ಮಂಗಳವಾರ ಗ್ರಾಮಸ್ಥರು ನೇತ್ರದಾನಕ್ಕೆ ಒಪ್ಪಿಗೆ ಪತ್ರ ನೀಡಿದರು.

ಪುನೀತ್ ಸಾವಿನ ನಂತರ ನೇತ್ರದಾನಿಗಳ ಸಂಖ್ಯೆ ಹೆಚ್ಚಳ

‘ಪುನೀತ್ ರಾಜಕುಮಾರ್ ಸಾವಿನ ನಂತರ ನೇತ್ರದಾನಿಗಳ ಸಂಖ್ಯೆ ಹೆಚ್ಚುತ್ತಿದೆ’ ಎಂದು ಬಸವೇಶ್ವರ ಪುನರ್ಜ್ಯೋತಿ ನೇತ್ರ ಬ್ಯಾಂಕ್ ಸ್ಥಾಪನಾ ಅಧ್ಯಕ್ಷೆ ಗಾಯತ್ರಿ ಶಿವರಾಮ್ ತಿಳಿಸಿದರು.

‘ಕೋವಿಡ್ ಕಾರಣದಿಂದ ಫೆ.2020ರಿಂದ ಸ್ಥಗಿತಗೊಂಡಿದ್ದ ನೇತ್ರ ಸಂಗ್ರಹ ಕಾರ್ಯವನ್ನು ಮತ್ತೆ ಆರಂಭಿಸಲಾಗಿದೆ. ಪುನೀತ್ ಸಾವಿನ ನಂತರ ಎಲ್ಲಾ ಕಡೆಯಿಂದಲೂ ಕರೆಗಳು ಬರುತ್ತಿವೆ. ಒಂದು ವಾರದಲ್ಲಿ 500ಕ್ಕೂ ಹೆಚ್ಚು ಪತ್ರ ನೀಡಿದ್ದೇವೆ’ ಎನ್ನುತ್ತಾರೆ ಅವರು.

ಅರಮನೆ ಮೈದಾನದಲ್ಲಿ 30 ಸಾವಿರಕ್ಕೂ ಹೆಚ್ಚು ಜನರಿಗೆ ಊಟ

‘ಅಭಿ’ಮಾನದ ಭೋಜನಕ್ಕೆ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನಾದ್ಯಂತ ಮತ್ತೆ ಹರಿದು ಬಂದು ಒಂದೆಡೆ ಸೇರಿದ ಅಭಿಮಾನದ ಹೊಳೆ. ಅಂಬರ ಮುಟ್ಟಿದ ಜಯಘೋಷ, ಅಭಿಮಾನದ ಹರಿವಿಗೆ ಸಾವಿರಾರು ನದಿಗಳು... ಎಂಬ ಹೊಸ ಭಾವನಾತ್ಮಕ ರೂಪಕಕ್ಕೆ ಪುನೀತ್ ಪುಣ್ಯಸ್ಮರಣೆಯ 12ನೇ ದಿನ ಸಾಕ್ಷಿಯಾಯಿತು.

ಪುಣ್ಯಸ್ಮರಣೆಯ ಅಂಗವಾಗಿ ಮಂಗಳವಾರ ಸಾರ್ವಜನಿಕ ಅನ್ನಸಂತರ್ಪಣೆ ನಗರದ ಅರಮನೆ ಮೈದಾನದ ‘ತ್ರಿಪುರ ವಾಸಿನಿ’ಅಂಗಣದಲ್ಲಿನಡೆಯಿತು.ಸುಮಾರು 30 ಸಾವಿರಕ್ಕೂ ಹೆಚ್ಚು ಅಭಿಮಾನಿಗಳು ಅನ್ನಸಂತರ್ಪಣೆಯಲ್ಲಿ ಭಾಗವಹಿಸಿದ್ದರು. ಸಸ್ಯಾಹಾರ, ಮಾಂಸಾಹಾರ ಎರಡು ವಿಭಾಗಗಳಿದ್ದವು. ಮಾಂಸಾಹಾರ ಭೋಜನ ವಿಭಾಗದಲ್ಲಿ ಅಭಿಮಾನಿಗಳ ಸಂಖ್ಯೆ ಹೆಚ್ಚು ಇತ್ತು. ಅಪ್ಪು ಅವರಿಗೆ ಪ್ರಿಯವಾದ ಖಾದ್ಯಗಳನ್ನೇ ಅಭಿಮಾನಿಗಳಿಗೆ ಬಡಿಸಲಾಯಿತು.

ಮೈದಾನದ ಆವರಣದಲ್ಲಿ ರಕ್ತದಾನ ಶಿಬಿರವೂ ನಡೆಯಿತು.

‘ಪುನೀತ್ ಅವರಿಗೆ ಅಭಿಮಾನದ ಪ್ರಾರ್ಥನೆ ಸಲ್ಲಬೇಕು. ಅವರನ್ನು ಪ್ರೀತಿಯಿಂದ ಕಳುಹಿಸಿಕೊಡಲೇಬೇಕಾದ ಸಂದರ್ಭವಿದು. ಹಾಗಾಗಿ ಈ ಭೋಜನವನ್ನು ಊಟ ಎಂದು ಭಾವಿಸದೇ ಪ್ರಸಾದ ಎಂಬ ಭಾವದಲ್ಲಿ ಸ್ವೀಕರಿಸಿದ್ದೇವೆ’ ಎಂದು ಮಂಡ್ಯದ ಅಭಿಮಾನಿಯೊಬ್ಬರು ಹೇಳಿದರು.

ಪುನೀತ್ ಪತ್ನಿ ಅಶ್ವಿನಿ, ನಟ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಅಭಿಮಾನಿಗಳಿಗೆ ಊಟ ಬಡಿಸಿದರು. ಬಳಿಕ ಶಿವರಾಜ್‌ಕುಮಾರ್ ರಕ್ತದಾನ ಮಾಡಿದರು. ಅನ್ನಸಂತರ್ಪಣೆಗೆ ಚಾಲನೆ ನೀಡಿದ ಬಳಿಕ ಭಾವುಕರಾದ ಅಶ್ವಿನಿ ಮನೆಗೆ ವಾಪಸಾದರು.

ಅಭಿಮಾನಿಗಳನ್ನು ಮಾತನಾಡಿಸಿದ ಶಿವರಾಜ್‌ಕುಮಾರ್, ‘ಸಾವಕಾಶವಾಗಿ ಊಟ ಮಾಡಿ’ ಎಂದು ಕೋರಿದರು. ಪುನೀತ್ ಮಕ್ಕಳಾದ ಧೃತಿ, ವಂದನಾ ಸೇರಿದಂತೆ ಡಾ.ರಾಜ್ ಕುಟುಂಬದ ಎಲ್ಲ ಸದಸ್ಯರು ಭಾಗವಹಿಸಿದ್ದರು.

‘ಪುನೀತ್ ಹೆಸರಲ್ಲಿ ಈ ರೀತಿ ಊಟ ಹಾಕಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಅಂದುಕೊಂಡಿರಲಿಲ್ಲ. ಪುನೀತ್ ನಂತಹ ತಮ್ಮನನ್ನು ಪಡೆಯಬೇಕಾದರೆ ಪುಣ್ಯ ಮಾಡಿದ್ದೇನೆ. ಪುನೀತ್‌ನ ಒಳ್ಳೆಯ ಕೆಲಸಗಳು ಸ್ವತಃ ಕುಟುಂಬಕ್ಕೇ ಗೊತ್ತಿರಲಿಲ್ಲ ಅಂದರೆ ನೀವೇ ಅರ್ಥ ಮಾಡಿಕೊಳ್ಳಿ’ ಎಂದು ಶಿವರಾಜ್‌ಕುಮಾರ್ ಹೇಳಿದರು.

‘ಅಭಿಮಾನಿಗಳಿಗೆ ಊಟ ಹಾಕಬೇಕು ಎಂಬುದು ಅಪ್ಪು ಅವರ ಕನಸೂ ಆಗಿತ್ತು’ ಎಂದು ರಾಘವೇಂದ್ರ ರಾಜ್‌ಕುಮಾರ್ ಹೇಳಿದರು.



ಅಭಿಮಾನಿಗಳಿಗೆ ಊಟ ಬಡಿಸಿದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್


ರಾಘವೇಶ್ವರ ಭಾರತೀ ಶ್ರೀ ವಿರುದ್ಧದ ಆರೋಪ ಪ್ರಕರಣ

ವಿಚಾರಣೆಯಿಂದ ಬಿಡುಗಡೆ ಪಡೆದ ನ್ಯಾ. ಸುಧೀಂದ್ರರಾವ್

ಬೆಂಗಳೂರು: ‘ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಶ್ರೀಗಳನ್ನು ಅತ್ಯಾಚಾರ ಆರೋಪದಿಂದ ಮುಕ್ತಗೊಳಿಸಿರುವ ಸೆಷನ್ಸ್ ಕೋರ್ಟ್ ಆದೇಶ ಪ್ರಶ್ನಿಸಿದ ಕ್ರಿಮಿನಲ್ ಅರ್ಜಿಗಳ ವಿಚಾರಣೆಗೆ ಸಂಬಂಧಿಸಿದಂತೆ ಮುಂದುವರಿದ ವಾದವನ್ನು ಆಲಿಸಲು ಸಮಯಾವಕಾಶ ಕಡಿಮೆ ಇರುವ ಕಾರಣ ನಾನು ಈ ಪ್ರಕರಣದ ವಿಚಾರಣೆಯಿಂದ ಬಿಡುಗಡೆಯಾಗುತ್ತಿದ್ದೇನೆ’ ಎಂದು ನ್ಯಾಯಮೂರ್ತಿ ಎನ್.ಕೆ.ಸುಧೀಂದ್ರರಾವ್ ವಿಚಾರಣೆಯಿಂದ ಬಿಡುಗಡೆ ಪಡೆದಿದ್ದಾರೆ.

‘ನ್ಯಾಯಾಧೀಶ ಜಿ.ಬಿ. ಮುದಿಗೌಡರ್ 2016ರ ಮಾರ್ಚ್ 31ರಂದು ಹೊರಡಿಸಿದ ಆದೇಶ ರದ್ದುಗೊಳಿಸಬೇಕು’ ಎಂದು ಕೋರಿ ಸಂತ್ರಸ್ತೆ ರಾಮಕಥಾ ಗಾಯಕಿ ಮತ್ತು ಪ್ರಾಸಿಕ್ಯೂಷನ್ ಸಲ್ಲಿಸಿರುವ ಅರ್ಜಿವಿಚಾರಣೆ ನಡೆಸುತ್ತಿದ್ದ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ಎನ್.ಕೆ.ಸುಧೀಂದ್ರರಾವ್ ಮುಂದಿನ ತಿಂಗಳ 3ಕ್ಕೆ ನಿವೃತ್ತಿ ಹೊಂದುತ್ತಿದ್ದಾರೆ.

ಶ್ರೀಗಳ ಕುರಿತ ಪರ– ವಿರುದ್ಧದ ವ್ಯಾಜ್ಯಗಳಲ್ಲಿ ಈವರೆಗೆ ವಿಚಾರಣೆಯಿಂದ ಹಿಂದೆ ಸರಿದ ಪಟ್ಟಿಗಳ ಸಂಖ್ಯೆ 16 ಇತ್ತು. ಇದೀಗ ಪಾರ್ಟ್ ಹರ್ಡ್ (ವಾದ ಅರ್ಧ ಆಲಿಸಿದ್ದ) ಪ್ರಕರಣದ ವಿಚಾರಣೆಯಿಂದ ನ್ಯಾಯಮೂರ್ತಿ ಸುಧೀಂದ್ರ ರಾವ್ ಬಿಡುಗಡೆ ಹೊಂದಿದ್ದಾರೆ.



‘ಹನಿ’ಯಿಂದ ಹಾಲಿನ ಪರೀಕ್ಷೆ



ಸೋಷಿಯಲ್ ಮೀಡಿಯಾದಿಂದ ಮೆಟಾವರ್ಸ್ ಕಡೆಗೆ!

ಕೃಷ್ಣ ಭಟ್

ಫೇಸ್‌ಬುಕ್ ತನ್ನ ಮೂಲಕಂಪನಿಯ ಹೆಸರನ್ನ ‘ಮೆಟಾ’ ಎಂದು ಬದಲಿಸಿ ಕೊಳ್ಳುತ್ತಿದ್ದಂತೆಯೇ ಹೊಸದೊಂದು ಲೋಕಸೃಷ್ಟಿಗೆ ಯಂತ್ರಪೂಜೆ ಮಾಡಿದ ಹಾಗೆ ತಂತ್ರಜ್ಞಾನ ವಲಯ ಪ್ರತಿಕ್ರಿಯಿಸುತ್ತಿದೆ. ಎಲ್ಲ ಕಂಪನಿಗಳೂ ತಮ್ಮ ಹಲವು ಉತ್ಪನ್ನ, ಸೇವೆಗಳನ್ನು ಒಂದೇ ಸೂರಿನಡಿ ತರುವುದಕ್ಕಾಗಿ ಒಂದು ಮೂಲಕಂಪನಿಯನ್ನು ಸ್ಥಾಪಿಸಿಕೊಳ್ಳುತ್ತವೆ. ಆರಂಭದಲ್ಲಿ ಒಂದು ಸೋಷಿಯಲ್ ವೆಬ್‌ಸೈಟ್ ಆಗಿ ಶುರುವಾಗಿದ್ದ ಫೇಸ್‌ಬುಕ್ ಕಾಲಾನಂತರದಲ್ಲಿ ಅಗಾಧವಾಗಿ ಬೆಳೆಯಿತು. ಈಗ ಅದರ ಅಡಿಯಲ್ಲಿ ಹಲವು ಉತ್ಪನ್ನಗಳಿವೆ. ವಾಟ್ಸ್ ಆ್ಯಪ್, ಇನ್‌ಸ್ಟಾಗ್ರಾಮ್‌ಗಳೂ ಅದರ ಅಡಿಯಲ್ಲಿ ಇವೆ. ಹೀಗಾಗಿ ಅದಕ್ಕೊಂದು ಮೂಲಕಂಪನಿ ಹೆಸರು ಬೇಕೆಂದಾಯಿತು. ಆಗ ಭವಿಷ್ಯವನ್ನೂ, ಭವಿಷ್ಯದಲ್ಲಿ ತಾನು ಹೋಗಬಹುದಾದ ದಾರಿಯನ್ನೂ ಗಮನದಲ್ಲಿಟ್ಟುಕೊಂಡು ‘ಮೆಟಾ’ ಎಂಬ ಹೆಸರನ್ನು ಇಟ್ಟುಕೊಂಡಿತು.

> ಮೆಟಾ ಎಂಬುದು ಗ್ರೀಕ್‌ನ ಪದ, ವರ್ಸ್ ಎಂಬುದು ಯೂನಿವರ್ಸ್‌ನ ಹ್ರಸ್ವಸ್ವರೂಪ.

ಈ ಹಿಂದೆ ಗೂಗಲ್ ಕೂಡ ತನ್ನ ಮೂಲಕಂಪನಿ ಹೆಸರನ್ನು ‘ಆಲ್ಫಾಬೆಟ್’ ಎಂದು ಬದಲಿಸಿಕೊಂಡಿತ್ತು. ಆದರೆ, ಆಲ್ಫಾಬೆಟ್ ಎಂಬುದು ಯಾವುದೇ ನಿರ್ದಿಷ್ಟ ಧ್ಯೇಯವನ್ನು ಸೂಚಿಸುತ್ತಿರಲಿಲ್ಲ. ಹೀಗಾಗಿ, ಇದೊಂದು ಸಾಮಾನ್ಯ ಹೆಸರು ಬದಲಾವಣೆ ಎಂದಷ್ಟೇ ತಂತ್ರಜ್ಞಾನ ವಲಯ ಪರಿಗಣಿಸಿತ್ತು. ಆದರೆ, ಫೇಸ್‌ಬುಕ್ ಮಾಡಿದ ಈ ಹೆಸರು ಬದಲಾವಣೆ ಭಾರಿ ಚರ್ಚೆಗೆ ಕಾರಣವಾಗಿದೆ. ಕೆಲವರು ಇದನ್ನು, ಇತ್ತೀಚೆಗೆ ಫೇಸ್‌ಬುಕ್ ಎದುರಿಸಿದ ಹಲವು ಟೀಕೆ, ವಿವಾದಗಳಿಂದ ಗಮನ ಬೇರೆಡೆ ಸೆಳೆಯಲು ಮಾಡಿದ ತಂತ್ರ ಎಂದೂ ಜರಿದವರಿದ್ದಾರೆ.



ಈ ಮೆಟಾ ಎಂಬುದು ‘ಮೆಟಾವರ್ಸ್’ ಎಂಬುದರ ಸಂಕ್ಷಿಪ್ತ ರೂಪ. 1992ರಲ್ಲಿ ನೀಲ್ ಸ್ಟೀಫನ್ಸನ್ ತನ್ನ ‘ಸ್ನೋ ಕ್ರ್ಯಾಶ್’ ಎಂಬ ಕಾದಂಬರಿಯಲ್ಲಿ ಮೊದಲು ಈ ಪದವನ್ನು ಬಳಸಿದ. ಮೆಟಾ ಎಂಬುದು ಗ್ರೀಕ್‌ನ ಪದ, ವರ್ಸ್ ಎಂಬುದು ಯೂನಿವರ್ಸ್‌ನ ಹ್ರಸ್ವಸ್ವರೂಪ. ಇದನ್ನು ಕನ್ನಡದಲ್ಲಿ ‘ವರ್ಚುವಲ್ ವಿಶ್ವ’ ಎಂದು ಕರೆಯಬಹುದೇನೋ!

ವಾಸ್ತವವಾಗಿ ಈ ಮೆಟಾವರ್ಸ್ ಎಂಬುದು ಯಾವ ರೂಪದಲ್ಲಿ ನಮ್ಮ ಎದುರು ಅನಾವರಣಗೊಳ್ಳಲಿದೆ ಎಂಬುದು ಯಾರಿಗೂ ಸ್ಪಷ್ಟವಿಲ್ಲ. ಈಗಾಗಲೇ ನಾವು ಒಂದಷ್ಟು ಭಾಗ ವರ್ಚುವಲ್ ವಿಶ್ವದಲ್ಲೇ ಬದುಕುತ್ತಿದ್ದೇವೆ. ಅದರಲ್ಲೂ ಕೋವಿಡ್ ಬಂದ ಮೇಲಂತೂ ನಾವು ಹಲವು ವಿಷಯಗಳಲ್ಲಿ ವರ್ಚುವಲ್ ಜಗತ್ತಿಗೆ ನಮ್ಮನ್ನು ತೆರೆದುಕೊಂಡಿದ್ದೇವೆ.

ಕೆಲವರು ಇದನ್ನು ವರ್ಚುವಲ್ ರಿಯಾಲಿಟಿಯದ್ದೇ ಇನ್ನೊಂದು ಹೆಸರು ಎಂದೂ ಹೇಳುತ್ತಾರೆ. ಸದ್ಯದ ಮಟ್ಟಿಗೆ ಮೇಲ್ನೋಟಕ್ಕೆ ಇದು ಹಾಗೆಯೇ ಅನಿಸೀತು. ಈಗಾಗಲೇ ನಾವು ಸ್ಮಾರ್ಟ್‌ಫೋನ್, ಝೂಮ್ ಸಂವಹನ, ಸೋಷಿಯಲ್ ಮೀಡಿಯಾ, ವರ್ಚುವಲ್ ಗೇಮ್, ಟ್ವಿಟರ್ ಸ್ಪೇಸಸ್, ಕ್ಲಬ್‌ಹೌಸ್‌ನಂತಹ ವರ್ಚುವಲ್ ವೇದಿಕೆಗಳಲ್ಲಿ ಒಂದೆಡೆಯಿಂದ ಇನ್ನೊಂದೆಡೆ ಕುಪ್ಪಳಿಸುತ್ತಾ ಇದ್ದೇವೆ. ಆದರೆ, ಇನ್ನು ಮುಂದಿನ ದಿನಗಳಲ್ಲಿ 5ಜಿ ತಂತ್ರಜ್ಞಾನವೂ ಬಂದು ನಮ್ಮ ಕೈಯಲ್ಲಿರುವ ಸ್ಮಾರ್ಟ್‌ಫೋನ್‌ಗಳೇ ಒಂದು ವರ್ಚುವಲ್ ವಿಶ್ವವನ್ನೇ ತೋರಿಸುವ ದಿನಗಳು ದೂರವಿಲ್ಲ.

> ಸ್ಮಾರ್ಟ್‌ಫೋನ್ ಇಟ್ಟುಕೊಂಡು ಓಡಾಡುತ್ತಿರುವಂತೆ, ವಿಆರ್ ಹೆಡ್‌ಸೆಟ್ ಧರಿಸಿ ಓಡಾಡುವ ಕಾಲವೂ ಬಂದೀತು!

ಈ ಮೆಟಾವರ್ಸ್‌ಗೆ ಒಂದು ಉದಾಹರಣೆಯನ್ನು ಕೊಡಬಹುದಾದರೆ, ಗೆಳೆಯರ ಜೊತೆಗೆ ವಿಆರ್ ಟೆನಿಸ್ ಆಡಲು ತೊಡಗುತ್ತೀರಿ. ಆತ ಬೇರೆ ಯಾವುದೋ ದೇಶದಲ್ಲಿದ್ದಾನೆ. ಸ್ವಲ್ಪ ಹೊತ್ತಿನ ನಂತರ ನಿಮಗೆ ಈ ಆಟ ಬೇಸರವಾಗುತ್ತದೆ. ಕೋರ್ಟ್ ಬದಲಿಸಿ ವಾಲಿಬಾಲ್ ಆಡಬೇಕು ಎನಿಸುತ್ತದೆ. ನೀವೇ ಕೋರ್ಟ್‌ ಅನ್ನು ವರ್ಚುವಲ್‌ನಲ್ಲೇ ಅಗೆದು ತೆಗೆದು ವಾಲಿಬಾಲ್ ಕೋರ್ಟ್ ಮಾಡುತ್ತೀರಿ. ಅದೂ ಬೇಡವೆಂದಾದರೆ, ಜಗಳ ಮಾಡಿಕೊಂಡು ಸ್ನೇಹಿತನ ಜೊತೆ ಹೊಡೆದಾಟವನ್ನೂ ಮಾಡುತ್ತೀರಿ. ಇದೆಲ್ಲವೂ ವರ್ಚುವಲ್‌ನಲ್ಲೇ ನಡೆಯುತ್ತದೆ. ವಾಸ್ತವದಲ್ಲಿನ ನೀವೇ ವರ್ಚುವಲ್‌ನಲ್ಲಿ ನಿಮ್ಮ ಅವತಾರ!

ಬಹುಶಃ ಇದರ ಮೊದಲ ಪ್ರಯತ್ನವಾಗಿ ಕಳೆದ ಕೆಲವು ತಿಂಗಳುಗಳ ಹಿಂದೆ ನಡೆದ ಫೇಸ್‌ಬುಕ್ ಕನೆಕ್ಟ್‌ನಲ್ಲಿ ಒಕುಲಸ್ ಕಂಪನಿ ಸಹಭಾಗಿತ್ವದಲ್ಲಿ ಒಕುಲಸ್ ಹೋಮ್ ಅನ್ನು ಪರಿಚಯಿಸುವುದಾಗಿ ಫೇಸ್‌ಬುಕ್ ಹೇಳಿಕೊಂಡಿತ್ತು. ಈ ಒಕುಲಸ್ ಹೋಮ್ ಮತ್ತು ಒಕುಲಸ್ ವರ್ಡ್ ಎಂಬುದು ಒಂದು ವರ್ಚುವಲ್ ರಿಯಾಲಿಟಿ ಜಗತ್ತು. ಅಲ್ಲಿ ಟೆನಿಸ್ ಕೋರ್ಟ್ ಇದೆ, ವಾಲಿಬಾಲ್ ಕೋರ್ಟ್ ಇದೆ. ಥರಹೇವಾರಿ ಗೇಮ್ ಇವೆ. ಅಡುಗೆ ಮಾಡುವುದಾದರೆ ಅಡುಗೆಮನೆಯೂ ಇದೆ! ಅಷ್ಟೇ ಅಲ್ಲ, ವರ್ಕ್‌ರೂಮ್‌ಗಳೂ ಇವೆ. ಇಲ್ಲೇ ನೀವು ನಿಮ್ಮ ಪ್ರಾಜೆಕ್ಟ್‌ನ 3ಡಿ ರೂಪವನ್ನು ಸಿದ್ಧಪಡಿಸಿ ನಿಮ್ಮ ತಂಡದವರಿಗೆ ತೋರಿಸಬಹುದು. ಫೇಸ್‌ಬುಕ್ ಕನೆಕ್ಟ್‌ನಲ್ಲಿ ಈ ಬಗ್ಗೆ ಹೇಳಿದಾಗ ಇದೊಂದು ಅವಾಸ್ತವಿಕ ಪ್ರಲಾಪದ ಹಾಗೆ ಕಂಡುಬಂದಿತ್ತು. ಹೀಗಾಗಿ, ಇದರ ಬಗ್ಗೆ ಯಾರಿಗೂ ಹೆಚ್ಚು ಆಸಕ್ತಿ ಕುದುರಲಿಲ್ಲ. ಆದರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕಂಪನಿ ತನ್ನ ಹೆಸರನ್ನೇ ಮೆಟಾ ಎಂದು ಬದಲಿಸಿಕೊಂಡಾಗ, ಇದನ್ನು ಜನರು ಇನ್ನಷ್ಟು ಗಂಭೀರವಾಗಿ ಪರಿಗಣಿಸುವಂತಾಯಿತು.

ಇದೇ ರೀತಿಯ ಪರಿಕಲ್ಪನೆಗಳನ್ನು ಕಳೆದ ವರ್ಷ ಜಿಯೋ ಕಂಪನಿಯೂ ತನ್ನ ಎಜಿಎಂನಲ್ಲಿ ಹೇಳಿತ್ತು. ಇಡೀ ಶಿಕ್ಷಣ ಕ್ಷೇತ್ರವನ್ನೇ ಬದಲಾಯಿಸಿ, ವರ್ಚುವಲ್ ರಿಯಾಲಿಟಿ ಮೂಲಕ ಶಿಕ್ಷಣ ಒದಗಿಸುವ ಬೃಹತ್ ಕಲ್ಪನೆಯನ್ನು ಜಿಯೋ ತನ್ನ ಎಜಿಎಂನಲ್ಲಿ ಹೇಳಿಕೊಂಡಿತ್ತು. ಈ ನಿಟ್ಟಿನಲ್ಲಿ ರಿಲಾಯನ್ಸ್ ತನ್ನ ಹಲವು ಅಂಗಸಂಸ್ಥೆಗಳ ಜೊತೆಗೆ ಕೆಲಸವನ್ನೂ ಮಾಡುತ್ತಿದೆ.

ಇಷ್ಟು ವರ್ಷ ತಂತ್ರಜ್ಞಾನದ ಎಲ್ಲ ಪ್ರಯೋಗಗಳೂ ಕಂಪ್ಯೂಟರ್ ಅನ್ನು ಆಧರಿಸಿರುತ್ತಿದ್ದವು. ಆದರೆ, ಈಗ ಮೆಟಾವರ್ಸ್ ಎಂಬ ಹೊಸ ಕಲ್ಪನೆ ಶುರುವಾದ ನಂತರ ಎಲ್ಲರ ಗಮನ ವಿಆರ್ ಹೆಡ್‌ಸೆಟ್‌ಗಳ ಮೇಲೆ ನೆಟ್ಟಿದೆ. ❖

ಕೊಳ್ಳೇಗಾಲ ಶರ್ಮ

ಹನಿಯಿಂದಲೇ? ಲೀಟರುಗಟ್ಟಲೆ ಹಾಲಿನಲ್ಲಿಯೇ ಆಗಿರುವ ಕಲಬೆರಕೆ ಪತ್ತೆ ಮಾಡಲಾಗುವುದಿಲ್ಲ. ಇನ್ನು ಹನಿ ಹಾಲಿನಿಂದ ಹೇಗೋ ಎಂದು ಮೂಗಿನ ಮೇಲೆ ಬೆರಳಿಡಬೇಡಿ. ಹಾಲಿನ ಹನಿಯನ್ನು ಒಣಗಿಸಿದರೆ ತೋರುವ ಕರೆಯೇ ಅದರಲ್ಲಿ ಕಲಬೆರಕೆ ಆಗಿದೆಯೋ ಇಲ್ಲವೋ ಎನ್ನುವುದನ್ನು ತೋರಿಸಬಹುದು ಎನ್ನುತ್ತಾರೆ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದ ವಿಜ್ಞಾನಿಗಳು. ಇತ್ತೀಚೆಗೆ ಹಾಲಿನಲ್ಲಿ ನೀರಿನ ಕಲಬೆರಕೆಯನ್ನು ಪತ್ತೆ ಮಾಡಲು ಹನಿಯನ್ನು ಆವಿಯಾಗಿಸುವ ವಿಧಾನವನ್ನು ಇವರು ಪರಿಚಯಿಸಿದ್ದು ಸುದ್ದಿಯಾಗಿತ್ತು.

> ಹಾಲಿನ ಕಲಬೆರಕೆಯಲ್ಲಿ ನೀರಿನ ಜೊತೆಗೆ ಇತ್ತೀಚಿಗೆ ಯೂರಿಯಾ ಸಕ್ಕರೆಗಳೂ ಪತ್ತೆಯಾಗಿವೆ

ಆವಿಯಾದಾಗ ಕಲಬೆರಕೆ ಕಾಣುವುದು ಹೇಗೆ ಎಂದಿರಾ? ಇದು ಬಲು ಜಟಿಲವಾದ ಭೌತವಿಜ್ಞಾನ. ಹಾಲಿನಂತಹ ವಿವಿಧ ವಸ್ತುಗಳು ಮಿಶ್ರವಾಗಿರುವ ದ್ರವಗಳು ಆವಿಯಾದ ಮೇಲೆ ಅವುಗಳೊಳಗೆ ಕರಗದೆ ಇದ್ದಂತಹ ಘನ ಪದಾರ್ಥಗಳು ಉಳಿಯುತ್ತವಷ್ಟೆ. ಇವು ಕರೆಯನ್ನುಂಟುಮಾಡುತ್ತವೆ. ಆದರೆ ಈ ಕರೆಯೇ ದ್ರವದೊಳಗೆ ಇರುವ ವಸ್ತುಗಳ ಬಗ್ಗೆ ಸುಳಿವು ಬಿಟ್ಟುಕೊಡಬಹುದು ಎನ್ನುವ ತರ್ಕವಿತ್ತು. ಇದನ್ನು ಆಧರಿಸಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸುಶ್ಮಿತಾ ದಾಶ್ ಮತ್ತು ಅವರ ವಿದ್ಯಾರ್ಥಿ ವೀರಕೇಶ್ವರ ಕುಮಾರ್ ಕಲಬೆರಕೆ ಪತ್ತೆ ಮಾಡುವ ವಿಧಾನವೊಂದನ್ನು ರೂಪಿಸಿದ್ದಾರೆ.

ಹಾಲಿನ ಕಲಬೆರಕೆಯ ಹಾವಳಿಯ ಬಗ್ಗೆ ಹೇಳಬೇಕಿಲ್ಲ. ಭಾರತೀಯ ಆಹಾರ ಸುರಕ್ಷತೆ ಹಾಗೂ ಮಾನಕಗಳ ನಿಕಾಯವು ನಿಗದಿಪಡಿಸಿರುವ ಮಾನಕಗಳನ್ನು ಪಾಲಿಸದ ಹಾಲು ಸರಬರಾಜುದಾರರೇ ಹೆಚ್ಚು. ಹಾಲಿನಲ್ಲಿ ಕಲಬೆರಕೆ ಎಂದರೆ ಕೇವಲ ನೀರಷ್ಟೆ ಅಲ್ಲ. ಇತ್ತೀಚೆಗೆ ಹಾಲನ್ನು ಇನ್ನಷ್ಟು ಬೆಳ್ಳಗಾಗಿ, ಗಟ್ಟಿಯಾಗಿ, ಸಿಹಿಯಾಗಿ ಕಾಣಲೆಂದು ಯೂರಿಯಾ, ಸಕ್ಕರೆ ಮೊದಲಾದ ವಸ್ತುಗಳನ್ನು ಬೆರೆಸುವುದೂ ಪತ್ತೆಯಾಗಿದೆ. ಎರಡು ವರ್ಷಗಳ ಹಿಂದೆ ನಡೆದ ಅಧ್ಯಯನವೊಂದು ಭಾರತದಲ್ಲಿ ಮಾರಾಟವಾಗುವ ಹಾಲಿನಲ್ಲಿ ಹನ್ನೆರಡಲ್ಲೊಂದು ಅಂಶ ಕಲಬೆರಕೆಯಾಗಿರುತ್ತದೆ ಎಂದು ಹೇಳಿತ್ತು. ನೀರಷ್ಟೇ ಆದರೆ ಪರವಾಗಿಲ್ಲ. ಆದರೆ ಯೂರಿಯಾದಂತಹ ವಸ್ತುಗಳು ಜೇಬಿಗಷ್ಟೆ ಕತ್ತರಿ ಹಾಕುವುದಲ್ಲದೆ ದೇಹದ ವಿವಿಧ ಅಂಗಗಳಿಗೆ ಅಪಾಯವನ್ನೂ ತರಬಲ್ಲವು.

ಹಾಲಿನಲ್ಲಿ ನೀರು ಬೆರೆತಿದೆಯೋ ಇಲ್ಲವೋ ಎನ್ನುವುದನ್ನು ಪತ್ತೆ ಮಾಡಲು ಲ್ಯಾಕ್ಟೋಮೀಟರನ್ನು ಬಳಸಬೇಕು. ಅಥವಾ ಅದು ಹೆಪ್ಪುಗಟ್ಟುವ ಉಷ್ಣತೆಯನ್ನು ಗಮನಿಸಬೇಕು. ಹಾಲಿನಲ್ಲಿ ಶೇ. 3.5ರಷ್ಟು ಹೆಚ್ಚುವರಿ ನೀರು ಬೆರೆಸಿದ್ದರಷ್ಟೆ ಈ ವಿಧಾನಗಳು ಕಲಬೆರಕೆಯನ್ನು ಪತ್ತೆ ಮಾಡಬಲ್ಲುವು. ಯೂರಿಯಾ ಕಲಬೆರಕೆಯ ಪತ್ತೆ ಇನ್ನೂ ಕಷ್ಟ. ಅದನ್ನು ಪತ್ತೆ ಮಾಡುವ ಜೈವಿಕ ಸೆನ್ಸಾರುಗಳಂತಹ ಸುಧಾರಿತ ವಿಧಾನಗಳು ಇವೆಯಾದರೂ, ಆ ಉಪಕರಣಗಳು ದುಬಾರಿ ಹಾಗೂ ಬೇಗನೆ ಹಾಳಾಗಬಲ್ಲವು.

ಇದಕ್ಕೆ ಪರ್ಯಾಯವಾಗಿ ಹನಿಯನ್ನು ಒಣಗಿಸಿ, ಉಳಿವ ಕರೆಯನ್ನು ಬಳಸಿದರೆ ಹೇಗೆ? ಈ ಹಿಂದೆ ಇದೇ ವಿಧಾನವನ್ನು ಬಳಸಿ ವಿವಿಧ ವ್ಯಕ್ತಿಗಳ ಅಥವಾ ಪ್ರಾಣಿಗಳ ರಕ್ತವನ್ನು ಪತ್ತೆ ಮಾಢಬಹುದೇ ಎಂದು ಪರಿಶೀಲಿಸಲಾಗಿತ್ತು. ಹಾಗೆಯೇ ಅಮೆರಿಕೆಯಲ್ಲಿ ವಿವಿಧ ವೈನ್ ಬಗೆಗಳನ್ನು ಗುರುತಿಸಲೂ ಈ ರೀತಿಯಲ್ಲಿ ದ್ರವ ಒಣಗಿಸುವ ವಿಧಾನ ಉಪಯುಕ್ತ ಎಂದು ಪತ್ತೆ ಮಾಡಿದ್ದರು. ಇದೀಗ ಇದೇ ಅಂಶವನ್ನು ಬಳಸಿ ಹಾಲಿನ ಹನಿಯೊಂದರಿಂದಲೇ ಕಲಬೆರಕೆಯನ್ನು ಪತ್ತೆ ಮಾಡಲು ಐಐಎಸ್ಸಿ ವಿಜ್ಞಾನಿಗಳು ಪ್ರಯತ್ನಿಸಿದ್ದಾರೆ. ಹನಿಯನ್ನು ಗಾಜಿನ ಹಾಳೆಯ ಮೇಲೆ ಇಟ್ಟು ಒಣಗಿಸಿ ಪರೀಕ್ಷಿಸಿದ್ದಾರೆ.



ಚೆಲ್ಲಿದ ಹಾಲಿನ ಹನಿ ಹಾಲು ಆವಿಯಾದಾಗ ಉಳಿಯುವ ಕರೆಯ ವಿನ್ಯಾಸಗಳು ಹೇಗಿರುತ್ತವೆ ಎಂದು ವಿಜ್ಞಾನಿಗಳು ಗಮನಿಸಿದ್ದಾರೆ. ನೀರು ಕಲಬೆರಕೆ ಮಾಡಿದ ಅಥವಾ ಅಪ್ಪಟ ಹಾಲು ಉಳಿಸುವ ವಿನ್ಯಾಸಗಳು ಯೂರಿಯಾ ಕಲಬೆರಕೆ ಮಾಡಿದ ಹಾಲಿಗಿಂತ ಬೇರೆಯಾಗಿದ್ದುವು. ಕಲಬೆರಕೆ ಇಲ್ಲದ ಅಪ್ಪಟ ಹಾಲು ಆವಿಯಾದಾಗ ನಿರ್ದಿಷ್ಟ ಗಾತ್ರವಿಲ್ಲದ, ವಿನ್ಯಾಸವೂ ಇಲ್ಲದ ಗುಳ್ಳೆಗಳನ್ನು ಉಳಿಸಿಬಿಟ್ಟಿತ್ತು. ನೀರು ಬೆರೆಸಿದ ಹಾಲಿನಲ್ಲಿ ಈ ವಿನ್ಯಾಸ ಇರಲಿಲ್ಲ. ಬೆರೆಸಿದ ನೀರಿನ ಪ್ರಮಾಣಕ್ಕೆ ತಕ್ಕಂತೆ ವಿನ್ಯಾಸ ಬದಲಾಗಿತ್ತು. ಯೂರಿಯಾ ಬೆರೆಸಿದ ಹಾಲು ಉಳಿಸಿದ ವಿನ್ಯಾಸದಲ್ಲಿ ನಟ್ಟನಡುವೆ ಏನೂ ಇರಲೇ ಇಲ್ಲ. ಇದು ಆವಿಯಾಗದ ಪದಾರ್ಥವಾದ್ದರಿಂದ, ಹನಿಯ ನಡುವಿನಿಂದ ಅಂಚಿನವರೆಗೂ ಅದು ಕ್ರಮೇಣ ಹರಳುಗಟ್ಟಿರುತ್ತದೆ.

ಹಾಲು ಕರೆಗಟ್ಟಿದ ವಿನ್ಯಾಸಗಳು ‘ಹಾಲಿನ ಶೇ. 30ರಷ್ಟು ನೀರು ಬೆರೆಸಿದ್ದರೂ ತೋರಿಸಿಕೊಡಬಲ್ಲವು. ಹಾಗೆಯೇ ಶೇ. 0.4ರಷ್ಟು ಕಡಿಮೆ ಯೂರಿಯಾ ಬೆರಕೆ ಆಗಿದ್ದರೂ ಪತ್ತೆ ಮಾಡಬಲ್ಲವು’ ಎನ್ನುತ್ತಾರೆ ಕುಮಾರ್. ಈ ವಿಧಾನವನ್ನು ಬಳಸಲು ಪ್ರಯೋಗಾಲಯಗಳಾಗಲಿ, ಇತರೆ ಉಪಕರಣಗಳಾಗಲಿ ಬೇಕಿಲ್ಲ. ಕುಗ್ರಾಮದಲ್ಲಿಯೂ ಇದನ್ನು ಸುಲಭವಾಗಿ ಬಳಸಬಹುದಂತೆ. ‘ಯಾವ ವಸ್ತು ಬೆರಕೆ ಆಗಿದೆ ಎನ್ನುವುದನ್ನು ಅವಲಂಬಿಸಿ ಈ ವಿನ್ಯಾಸಗಳು ಕರೆಗಟ್ಟುವುದರಿಂದ ಹಾಲಿನಂತಹ ಆವಿಯಾಗುವ ಬೇರೆ ವಸ್ತುಗಳಲ್ಲಿನ ವಿವಿಧ ಕಲಬೆರಕೆಯನ್ನು ಪತ್ತೆ ಮಾಡಲೂ ಇದು ನೆರವಾಗಬಹುದು’ ಎನ್ನುವುದು ದಾಶ್ ಅವರ ಆಶಯ.

‘ಹಾಲಿನಲ್ಲಿ ಬೆರೆತಿರಬಹುದಾದ ಎಣ್ಣೆ ಹಾಗೂ ಇತರೆ ವಸ್ತುಗಳು ರಚಿಸುವ ವಿನ್ಯಾಸಗಳನ್ನು ಅಧ್ಯಯನ ಮಾಡುತ್ತಿದ್ದೇವೆ. ಇವೆಲ್ಲ ವಿನ್ಯಾಸಗಳನ್ನೂ ಪತ್ತೆ ಮಾಡಿದ ಮೇಲೆ, ಹಾಲಿನ ಹನಿಯನ್ನು ಒಣಗಲು ಬಿಟ್ಟು, ರೂಪುಗೊಂಡ ಕರೆಯ ವಿನ್ಯಾಸದ ಚಿತ್ರವನ್ನು ತೆಗೆದು, ಹೋಲಿಸಿ, ಯಾವ ವಸ್ತು ಕಲಬೆರಕೆಯಾಗಿದೆ ಎಂದು ನಿರ್ದಿಷ್ಟವಾಗಿ ಹೇಳಲೂ ಸಾಧ್ಯವಾಗಬಹುದು. ಈ ನಿಟ್ಟಿನಲ್ಲಿ ಪ್ರಯೋಗ ನಡೆಸಿದ್ದೇವೆ’ ಎನ್ನುತ್ತಾರೆ ದಾಶ್. ❖



ಸುಭಾಷಿತ

ನೀವು ನಡೆಯತೊಡಗಿದರೆ ದಾರಿ ತಾನಾಗೇ ಕಾಣತೊಡಗುತ್ತದೆ. -ರೂಮಿ

ಹೊಸ ಮರಳು ನೀತಿ ಸ್ವಾಗತಾರ್ಹ ಅನುಷ್ಠಾನದಲ್ಲಿ ಬೇಕು ಬದ್ಧತೆ

ರಾಜ್ಯದ ನದಿ, ಹಳ್ಳ, ಕೊಳ್ಳ, ಕೆರೆಗಳು, ಜಲಾಶಯ ಪಾತ್ರಗಳಲ್ಲಿ ಶೇಖರಣೆಯಾಗುವ ಮರಳಿನ ಗಣಿಗಾರಿಕೆ ಮತ್ತು ಸಾಗಣೆಯ ಮೇಲೆ ನಿಯಂತ್ರಣ ಸಾಧಿಸುವುದೇ ಕಷ್ಟಸಾಧ್ಯ ಎಂಬ ಪರಿಸ್ಥಿತಿ ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣವಾಗಿದೆ. ಲಭ್ಯವಿರುವ ಮರಳಿನ ಪ್ರಮಾಣ ಮತ್ತು ಬೇಡಿಕೆಯ ನಡುವಿನ ಭಾರಿ ಅಂತರವು ಅದರ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನು ಹೆಚ್ಚಲು ಕಾರಣವಾಗಿದೆ. ಮರಳು ಗಣಿಗಾರಿಕೆ ಕೆಲವು ದಶಕಗಳಿಂದ ಈಚೆಗೆ 'ಮಾಫಿಯಾ' ಸ್ವರೂಪವನ್ನು ಪಡೆದುಕೊಂಡಿದ್ದು, ಅದಕ್ಕೆ ಕಡಿವಾಣ ಹಾಕುವುದು ಸರ್ಕಾರಕ್ಕೂ ಸವಾಲಾಗಿ ಪರಿಣಮಿಸಿದೆ. ಎರಡು ದಶಕಗಳ ಅವಧಿಯಲ್ಲಿ ಹಲವು ಬಾರಿ 'ಉಪಖನಿಜ (ಮರಳು) ರಿಯಾಯಿತಿ ನೀತಿ' ಮತ್ತು 'ಉಪಖನಿಜ (ಮರಳು) ರಿಯಾಯಿತಿ ನಿಯಮ'ಗಳಲ್ಲಿ ಬದಲಾವಣೆ ಮಾಡಿದ್ದರೂ ಅಕ್ರಮಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವುದಕ್ಕೆ ಸಾಧ್ಯವಾಗಿಲ್ಲ. 2008, 2011 ಮತ್ತು 2017ರಲ್ಲಿ ಮರಳು ನೀತಿಯಲ್ಲಿ ಬದಲಾವಣೆಗಳನ್ನು ತರಲಾಗಿತ್ತು. ನದಿ ಪಾತ್ರದ ಮರಳು ನಿಕ್ಷೇಪಗಳಲ್ಲಿ ಗಣಿಗಾರಿಕೆಗೆ ಗುತ್ತಿಗೆ ನೀಡುವುದು ಹಾಗೂ ಪಟ್ಟಾ ಜಮೀನಿನಲ್ಲಿ ಲಭ್ಯವಿರುವುದನ್ನು ತೆಗೆದು, ಮಾರಾಟ ಮಾಡಲು ಜಮೀನು ಮಾಲೀಕರಿಗೆ ಅನುಮತಿ ನೀಡುವುದಕ್ಕೆ ಅವಕಾಶ ಕಲ್ಪಿಸಿ 2016ರಲ್ಲಿ ನಿಯಮಗಳಿಗೆ ತಿದ್ದುಪಡಿ ತರಲಾಗಿತ್ತು. 2017ರ ಮರಳು ನೀತಿಯಲ್ಲಿ ವಿದೇಶದಿಂದ ಮರಳನ್ನು ಆಮದು ಮಾಡಿಕೊಂಡು ಮಾರಾಟ ಮಾಡುವುದಕ್ಕೂ ಅವಕಾಶ ಕಲ್ಪಿಸಲಾಗಿತ್ತು. ಈ ನೀತಿ ಮತ್ತು ನಿಯಮಗಳಲ್ಲಿನ ಗೊಂದಲಗಳನ್ನೇ ಬಂಡವಾಳ ಮಾಡಿಕೊಂಡ 'ಮಾಫಿಯಾ' ಮಂದಿ ನದಿ, ಹಳ್ಳ, ಕೊಳ್ಳ, ಕೆರೆಗಳಲ್ಲಿನ ಮರಳನ್ನು ಬರಿದು ಮಾಡುತ್ತಲೇ ಇದ್ದಾರೆ.



ಮರಳು ಸುಲಭವಾಗಿ ಲಭ್ಯವಾಗುವಂತೆ ಮಾಡುವುದು ಎಷ್ಟು ಮುಖ್ಯವೋ ಪರಿಸರ ಸಂರಕ್ಷಣೆಯೂ ಅಷ್ಟೇ ಮುಖ್ಯ

ಮೊದಲು ಲೋಕೋಪಯೋಗಿ ಇಲಾಖೆಯ ಹಿಡಿತದಲ್ಲಿದ್ದ ಮರಳು ಗಣಿಗಾರಿಕೆಯು ನಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕೈಸೇರಿತು. ಆದರೆ, ಯಾವ ಬದಲಾವಣೆಯೂ ಗೋಚರಿಸಲಿಲ್ಲ. ಅಧಿಕೃತವಾಗಿ ಗುತ್ತಿಗೆ ಪಡೆದವರೇ ಕಾನೂನು, ಕಟ್ಟಲೆಗಳನ್ನು ಗಾಳಿಗೆ ತೂರಿ ಜಲಮೂಲಗಳ ಒಡಲು ಬಗೆದು ಥೈಲಿ ತುಂಬಿಸಿಕೊಳ್ಳುತ್ತಿರುವುದು ಯಥಾವತ್ತಾಗಿ ನಡೆದುಕೊಂಡು ಬರುತ್ತಿದೆ. ಮರಳು ಗಣಿಗಾರಿಕೆ ಮತ್ತು ಸಾಗಣೆ ನಡೆಸುವವರ ಹಿಡಿತಕ್ಕೆ ಇಡೀ ವ್ಯವಸ್ಥೆಯೇ ಸಿಲುಕಿ, ಕೆಲವು ಜಿಲ್ಲೆಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಕಾಮಗಾರಿಗಳಿಗೂ ಮರಳು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದ ನಿದರ್ಶನಗಳು ಬಹಳಷ್ಟಿವೆ. ಮರಳಿನ ದರ ನಿಯಂತ್ರಿಸುವುದಕ್ಕೂ ಸರ್ಕಾರಕ್ಕೆ ಈವರೆಗೂ ಸಾಧ್ಯವಾಗಿಲ್ಲ. ಇದು ಸಾಮಾನ್ಯ ಜನರು ಸ್ವಂತ ಸೂರಿನ ಕನಸನ್ನು ನನಸಾಗಿಸಿಕೊಳ್ಳುವುದಕ್ಕೆ ಪ್ರಬಲ ಅಡ್ಡಿಯಾಗಿ ಕಾಡುತ್ತಿದೆ. ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಸುಲಭವಾಗಿ ಮತ್ತು ಕೈಗೆಟುಕುವ ದರದಲ್ಲಿ ಮರಳು ಲಭ್ಯವಾಗುವಂತೆ ಮಾಡಲು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ವೈಜ್ಞಾನಿಕವಾಗಿ ಅದರ ಗಣಿಗಾರಿಕೆಗೆ ಅವಕಾಶ ಕಲ್ಪಿಸಲು 'ಹೊಸ ಮರಳು ನೀತಿ–2020' ಅನ್ನು ರೂಪಿಸಲಾಗಿತ್ತು. 2020ರ ಮೇ 5ರಿಂದಲೇ ಈ ನೀತಿ ಜಾರಿಗೆ ಬಂದಿತ್ತು. ಆದರೆ, ನಿಯಮಗಳನ್ನು ರಚಿಸದ ಕಾರಣ ಅದು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಂಡಿರಲಿಲ್ಲ. 'ಹೊಸ ಮರಳು ನೀತಿ–2020'ಕ್ಕೆ ಪೂರಕವಾಗಿ 'ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮ–2021'ಕ್ಕೆ ಸಚಿವ ಸಂಪುಟ ಸಭೆ ಸೋಮವಾರ ಒಪ್ಪಿಗೆ ನೀಡಿದೆ. ಇದರೊಂದಿಗೆ ಹೊಸ ಮರಳು ನೀತಿ ಜಾರಿಯ ವಿಚಾರದಲ್ಲಿ ಒಂದು ರೀತಿಯ ಸ್ಪಷ್ಟತೆ ದೊರಕಿದಂತಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಲಭ್ಯವಾಗುವ ಮರಳಿನಲ್ಲಿ ಒಂದು ಭಾಗವನ್ನು ಸ್ಥಳೀಯ ಬಳಕೆಗೆ ಮೀಸಲಿಡಬೇಕೆಂಬ ಬೇಡಿಕೆಯನ್ನು ಹೊಸ ನೀತಿ ಮಾನ್ಯ ಮಾಡಿದೆ. ಹಳ್ಳ, ತೊರೆ ಮತ್ತು ಕೆರೆಗಳಲ್ಲಿನ ಮರಳಿನ ಹಂಚಿಕೆಯ ಅಧಿಕಾರ ಆಯಾ ಗ್ರಾಮ ಪಂಚಾಯಿತಿಗೆ ಲಭಿಸಲಿದೆ. ನದಿಗಳು, ಜಲಾಶಯಗಳಲ್ಲಿ ಲಭ್ಯವಿರುವ ಮರಳಿನ ಗಣಿಗಾರಿಕೆ ಇನ್ನು ಮುಂದೆ ರಾಜ್ಯ ಸರ್ಕಾರಿ ಸ್ವಾಮ್ಯದ ಹಟ್ಟಿ ಚಿನ್ನದ ಗಣಿ ನಿಗಮ ಹಾಗೂ ಕರ್ನಾಟಕ ರಾಜ್ಯ ಖನಿಜ ನಿಗಮದ ಮೂಲಕವೇ ನಡೆಯಲಿದೆ. ನಿಕ್ಷೇಪಗಳಲ್ಲಿ ಲಭ್ಯವಿರುವ ಮರಳನ್ನು ತೆಗೆದು, ಸಂಗ್ರಹಾಗಾರಗಳಿಗೆ (ಸ್ಟಾಕ್ ಯಾರ್ಡ್) ಸಾಗಿಸುವ ಕೆಲಸಕ್ಕೆ ಖಾಸಗಿ ಗುತ್ತಿಗೆದಾರರ ಪಾತ್ರ ಸೀಮಿತವಾಗಲಿದೆ. ಗ್ರಾಮ ಪಂಚಾಯಿತಿಗಳು ವಿತರಿಸುವ ಮರಳಿನ ದರ ಪ್ರತೀ ಟನ್‌ಗೆ ₹ 300 ಮತ್ತು ನಿಗಮಗಳು ವಿತರಿಸುವ ಮರಳಿನ ದರ ಪ್ರತೀ ಟನ್‌ಗೆ ₹ 700 ನಿಗದಿಯಾಗಿದೆ. ಬಳಕೆದಾರರ ಹಿತದೃಷ್ಟಿಯಿಂದ ಇವೆಲ್ಲವೂ ಸಕಾರಾತ್ಮಕ ಕ್ರಮಗಳೇ ಆಗಿವೆ. ಆದರೆ, ಈಗಲೂ ರಾಜ್ಯದಲ್ಲಿ ಮರಳಿನ ಬೇಡಿಕೆ ಮತ್ತು ಪೂರೈಕೆ ನಡುವೆ ದೊಡ್ಡ ಅಂತರವಿದೆ. ಎಂ- ಸ್ಯಾಂಡ್‌ನಂತಹ ಪರ್ಯಾಯ ಉತ್ಪನ್ನಗಳ ಬಳಕೆಯಿಂದಲೂ ಅಂತರವನ್ನು ಗಣನೀಯವಾಗಿ ಕುಗ್ಗಿಸಲು ಸಾಧ್ಯವಾಗಿಲ್ಲ. ಮರಳು ಗಣಿಗಾರಿಕೆಯ ಮೇಲುಸ್ತುವಾರಿಗೆ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದ ಮೇಲ್ವಿಚಾರಣಾ ಸಮಿತಿಗಳನ್ನು ರಚಿಸಲಾಗುತ್ತಿದೆ. ಹೊಸ ನೀತಿಯಿಂದ ರಾಜ್ಯವು ಮರಳಿನ ಅಕ್ರಮ ಗಣಿಗಾರಿಕೆ ಮತ್ತು ಸಾಗಣೆಯಿಂದ ಸಂಪೂರ್ಣವಾಗಿ ಮುಕ್ತವಾಗುತ್ತದೆ ಎಂದು ಭಾವಿಸುವುದು ಕಷ್ಟ. ನೀತಿಯ ಅನುಷ್ಠಾನದಲ್ಲಿ ಸರ್ಕಾರ ಬದ್ಧತೆಯನ್ನು ಪ್ರದರ್ಶಿಸುವುದು ಅಗತ್ಯ. ಗ್ರಾಮ ಪಂಚಾಯಿತಿಗಳ ಮೂಲಕ ಮರಳು ವಿತರಣೆಗೆ ಅವಕಾಶ ಕಲ್ಪಿಸುವ ವ್ಯವಸ್ಥೆಯು ದುರ್ಬಳಕೆ ಆಗದಂತೆ ನೋಡಿಕೊಳ್ಳಬೇಕು. ಅದು ಸುಲಭವಾಗಿ ಲಭ್ಯವಾಗುವಂತೆ ಮಾಡುವುದಕ್ಕೆ ನೀಡುವುದಕ್ಕಿಂತಲೂ ಪರಿಸರ ಮತ್ತು ಜಲಮೂಲಗಳ ಸಂರಕ್ಷಣೆಗೆ ಹೆಚ್ಚು ಮಹತ್ವ ನೀಡಬೇಕು. ಅಕ್ರಮ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ಪ್ರಕರಣಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿ ಮಾಡಬೇಕು. ಮರಳು ದಂಧೆಯಲ್ಲಿ ತೊಡಗಿಕೊಂಡಿರುವವರು ಹಾಗೂ ಅವರ ಜತೆ ಶಾಮೀಲಾಗುವ ಸರ್ಕಾರದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಸಂದೇಶವನ್ನು ರವಾನಿಸಿದರೆ ಮಾತ್ರ ಹೊಸ ನೀತಿಯ ಜಾರಿಯಿಂದ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಾಗಬಹುದು.

ದಿನದ ಟ್ವೀಟ್



ನಿರಾಸೆ ನಡುವೆಯೂ...

ದಕ್ಷಿಣ ಚಿತ್ರರಂಗದ ದಿಗ್ಗಜರಿಗೆ ಪದ್ಮ ಪ್ರಶಸ್ತಿ ಸಿಗಲಿಲ್ಲ ಎಂಬ ನಿರಾಸೆ ಇದೆ. ಆದರೆ ಅದೇ ಪ್ರಶಸ್ತಿ ತುಳಸಿ ಗೌಡ, ಹಾಜಬ್ಬ, ಮೊಹಮ್ಮದ್ ಶರೀಫ್ ಇಂತಹ ವಿಶಿಷ್ಟ ವ್ಯಕ್ತಿಗಳಿಗೂ ಲಭಿಸುತ್ತಿದೆ ಎಂಬ ಸಾರ್ಥಕತೆಯ ಭಾವವೂ ಮೂಡಿದೆ. ಮಹಲುಗಳಿಗೆ ಮೀಸಲಿದ್ದ ಪ್ರಶಸ್ತಿಯನ್ನು ಕಾಡಿನ ಅಂಚಿನ ಹೆಂಚಿನ ಮನೆಗೂ ತೆಗೆದುಕೊಂಡು ಹೋದ ಮೋದಿ ನೇತೃತ್ವದ ಸರ್ಕಾರಕ್ಕೆ ಅಭಿನಂದನೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕಪ್ಪುಹಣ ವಿರುದ್ಧದ ಹೋರಾಟದ ನೆಪದಲ್ಲಿ ದೇಶದ ಜನರನ್ನು ಬಿಜೆಪಿ ಸರತಿ ಸಾಲಿನಲ್ಲಿ ನಿಲ್ಲಿಸಿತು. ಕಪ್ಪುಪಟ್ಟಿಯಲ್ಲಿರುವ ಕಂಪನಿಗಳು ಭ್ರಷ್ಟಾಚಾರದಿಂದ ಗಳಿಸಿದ್ದನ್ನು ಅಡಗಿಸಿಡಲು ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಸರತಿ ಸಾಲಿನಲ್ಲಿ ನಿಂತಿವೆ.



ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

25 ವರ್ಷಗಳ ಹಿಂದೆ

ಭಾನುವಾರ, 10-11-1996

- **ರೈತರು ಬೆಳೆ ನೀತಿ ಪಾಲಿಸಿದಲ್ಲಿ ಉತ್ಪನ್ನಗಳ ಬೆಲೆ ಕುಸಿತ ತಡೆ ಸಾಧ್ಯ: ಪಟೇಲ್**

ಬೆಂಗಳೂರು, ನ. 9 – ರೈತರು ಬೆಳೆ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ಈಗ ಅನುಭವಿಸುತ್ತಿರುವ ಬೆಲೆಯಲ್ಲಿನ ಏರುಪೇರೂ ಇರುವುದಿಲ್ಲ; ಸಂಕಷ್ಟದಲ್ಲಿ ಬೀಳುವ ಪಡಿಪಾಟಲೂ ಇರುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ರಾಜ್ಯದ ರೈತರಿಗೆ ಕಿವಿಮಾತು ಹೇಳಿದರು.

ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ವಿವಿಧ ಬೆಳೆಗಳಲ್ಲಿ ಅತ್ಯಧಿಕ ಇಳುವರಿ ಪಡೆದವರಿಗೆ ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ವಿತರಿಸಿದ ಅವರು, 'ಯಾವುದಾದರೊಂದು ಬೆಳೆಗೆ ಒಳ್ಳೆ ಬೆಲೆ ಬಂತೆಂದರೆ ಅಷ್ಟೇ ಸಾಕು ಎಲ್ಲಾ ರೈತರೂ ಅದನ್ನೇ ಬೆಳೆಯುತ್ತಾರೆ. ಬೆಲೆ ಕುಸಿತಕ್ಕೆ ಬಲಿಯಾಗುತ್ತಾರೆ. ಬೆಳೆ ನೀತಿ ಪಾಲಿಸುವುದರಿಂದ ಇಂಥ ಅನಾಹುತದಿಂದ ಪಾರಾಗಲು ಸಾಧ್ಯ' ಎಂದರು.

- **ಸೌಂದರ್ಯ ಸ್ಪರ್ಧೆಗೆ ಸರ್ಕಾರಿ ವೆಚ್ಚ ಇಲ್ಲ: ನಾಣಯ್ಯ ಸ್ಪಷ್ಟನೆ**

ಬೆಂಗಳೂರು, ನ. 9– ವಿಶ್ವಸುಂದರಿ ಸ್ಪರ್ಧೆ ನಗರದಲ್ಲಿ ನಡೆಯುವುದರಿಂದ ರಾಜ್ಯ ಸರ್ಕಾರ ಆ ಕಾರ್ಯಕ್ರಮಕ್ಕಾಗಿ ಹಣ ಖರ್ಚು ಮಾಡುವ ಪ್ರಶ್ನೆಯೇ ಇಲ್ಲ ಎಂದು ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಎಂ.ಸಿ. ನಾಣಯ್ಯ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಬುಧವಾರ, 10-11-1971

- **ಚೀನಾ ಜೊತೆ ಮಾಮೂಲು ಬಾಂಧವ್ಯ, ರಾಯಭಾರಿ ವಿನಿಮಯಕ್ಕೆ ಭಾರತ ಸಿದ್ಧ**

ಪ್ಯಾರಿಸ್, ನ. 9– ಎರಡೂ ದೇಶಗಳ ನಡುವಣ ಗಡಿ ಸಮಸ್ಯೆಯ ಇತ್ಯರ್ಥಕ್ಕೆ ಕಾಯದೆಯೇ ಚೀನಾದ ಜೊತೆ ಮಾಮೂಲಿನ ಬಾಂಧವ್ಯವನ್ನು ಪುನರಾರಂಭಿಸಿ ರಾಯಭಾರಿಗಳ ನೇಮಕಕ್ಕೆ ಭಾರತ ಸಿದ್ಧವಿದೆಯೆಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿದರು.

ಚೀನಾದ ಜೊತೆ ಮಾಮೂಲಿನ ರಾಜತಾಂತ್ರಿಕ ಬಾಂಧವ್ಯದ ಪುನರಾರಂಭಕ್ಕೆ ಫ್ರಾನ್ಸಿನ ಪ್ರಭಾವವನ್ನು ಬಳಸಿಕೊಳ್ಳಲು ಭಾರತ ಇಚ್ಛಿಸುವುದೇ ಎಂದು ಪ್ರಶ್ನಿಸಿದಾಗ, ರಾಯಭಾರಿ ಪ್ರತಿನಿಧಿ ಮಟ್ಟದಲ್ಲಿ ಭಾರತವು ಚೀನಾದ ಜೊತೆ ಈಗಾಗಲೇ ಬಾಂಧವ್ಯವಿಟ್ಟುಕೊಂಡಿದೆಯೆಂದು ಶ್ರೀಮತಿ ಗಾಂಧಿ ನುಡಿದರು.

ಭವಿಷ್ಯದ ಇಂಧನ ಸುರಕ್ಷತೆಗೆ ಸುಸ್ಥಿರ ಮತ್ತು ಜನಸಹಭಾಗಿತ್ವದ ವಿಧಾನಗಳು ಬೇಕು

ಅಮೃತಸಿಂಚನವಾದೀತೇ 'ಪಂಚಾಮೃತ' ನೀತಿ?



ವಿಶ್ಲೇಷಣೆ

ಡಾ. ಕೇಶವ ಎಚ್.ಕೊರ್ಸೆ

ಹವಾಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಜಾಗತಿಕ ಶೃಂಗಸಮ್ಮೇಳನವು ಸ್ಕಾಟ್ಲೆಂಡಿನ ಗ್ಲಾಸ್ಗೋದಲ್ಲಿ ಅಕ್ಟೋಬರ್ 31ರಂದು ಆರಂಭವಾಗಿದೆ. ವಾತಾವರಣದ ತಾಪ ತಗ್ಗಿಸಲು ಭಾರತ ಪಾಲಿಸಲಿರುವ ಐದು ಅಂಶಗಳ 'ಪಂಚಾಮೃತ' ಕಲ್ಪನೆಯನ್ನು ಪ್ರಧಾನಿ ನರೇಂದ್ರ ಮೋದಿ ಅಲ್ಲಿ ಮಂಡಿಸಿದ್ದಾರೆ.

ಇಂಗಾಲದ ಸಂಯುಕ್ತಗಳನ್ನು ಕಕ್ಕುತ್ತ ನೆಲ-ಜಲ ವಾಯು ಮಾಲಿನ್ಯ ಉಂಟುಮಾಡಿ ತಾಪಮಾನ ಹೆಚ್ಚಿಸುವ ಪೆಟ್ರೋಲಿಯಂ ಹಾಗೂ ಕಲ್ಲಿದ್ದಲು ಇಂಧನ ಮೂಲಗಳ ಬಳಕೆ ಕಡಿಮೆ ಮಾಡುತ್ತ ಸಾಗಿ, ಪರಿಸರಸ್ನೇಹಿ ಇಂಧನಗಳನ್ನು ಹೆಚ್ಚೆಚ್ಚು ಬಳಸುತ್ತೇವೆಂದು ಪ್ರಪಂಚಕ್ಕೆ ದೇಶವು ನೀಡಿದ ವಾಗ್ದಾನವದು. ಮೇಘಸ್ಫೋಟ, ಚಂಡಮಾರುತ, ನೆರೆ-ಬರ, ಭೂಕುಸಿತ, ಬಿಸಿಗಾಳಿ ಇತ್ಯಾದಿ ಭೀಕರ ಹವಾಮಾನ ವೈಪರೀತ್ಯಗಳು ಭುವಿಯನ್ನೇ ಕಂಗೆಡಿಸುತ್ತಿರುವ ಈ ಸಂಕಟದ ಸಮಯದಲ್ಲಿ, ದೂರದೃಷ್ಟಿಯ ಈ ಹೆಜ್ಜೆ ಸ್ವಾಗತಾರ್ಹವೇ.


ವಾತಾವರಣದ ತಾಪ ಹಾಗೂ ಪರಿಸರ ಮಾಲಿನ್ಯ ತಗ್ಗಿಸುತ್ತಲೇ ಸುಸ್ಥಿರ ಅಭಿವೃದ್ಧಿ ಸಾಧಿಸಲು, ಬದಲೀ ಶಕ್ತಿ-ಮೂಲಗಳನ್ನು ಬಳಸಿಕೊಳ್ಳುವ ಚಿಂತನೆಗಳು ಆರಂಭವಾಗಿ ದಶಕಗಳೇ ಸಂದಿವೆ. ನೀತಿ ಆಯೋಗ ಸಿದ್ಧಪಡಿಸಿರುವ 'ವಿಷನ್-2035' ದಾಖಲೆಯು 2035ರ ವೇಳೆಗೆ ಈ ದಾರಿಯಲ್ಲಿ ಸಾಗಬೇಕಾದ ಕನಿಷ್ಠ ಮೈಲುಗಲ್ಲುಗಳನ್ನೂ ಗುರುತಿಸಿದೆ. ಇಂಧನ ಕ್ಷೇತ್ರದಲ್ಲಿ ಕ್ಷಮತೆ ಮತ್ತು ಸ್ವಾಯತ್ತತೆ ಸಾಧಿಸುವ ತಂತ್ರೋಪಾಯಗಳನ್ನೆಲ್ಲ 2020ರ 'ರಾಷ್ಟ್ರೀಯ ಇಂಧನ ನೀತಿ' ಸ್ಪಷ್ಟಪಡಿಸಿದೆ. ಅಂದರೆ, ಮಾಲಿನ್ಯ ತಗ್ಗಿಸುವ ಇಂಧನ ಮೂಲಗಳನ್ನು ಬಳಸಲೇಬೇಕಾದ ಅನಿವಾರ್ಯವನ್ನು ಸರ್ಕಾರ ತಾತ್ವಿಕವಾಗಿಯೇನೋ ಒಪ್ಪಿದೆ. ಆದರೆ, ಈ ಕನಸನ್ನು ನನಸಾಗಿಸಲು ಇರುವ ಅಡೆತಡೆಗಳಾದರೂ ಎಷ್ಟು!

ಒಂದೆಡೆ, ದೇಶದ ಆರ್ಥಿಕತೆಯನ್ನೇ ನಿರ್ಧರಿಸುತ್ತಿರುವ ಪೆಟ್ರೋಲಿಯಂ ಹಾಗೂ ಕಲ್ಲಿದ್ದಲು ಉದ್ಯಮ ಶ್ರೇಣಿಗಳನ್ನೆಲ್ಲ ಪರಿಸರ ಸುರಕ್ಷತೆಯ ಕನಿಷ್ಠ ಮಿತಿಯೊಳಗಾದರೂ ಕರೆದೊಯ್ಯಬೇಕು. ಇನ್ನೊಂದೆಡೆ, ಆಧುನಿಕ ಸೌಕರ್ಯಗಳನ್ನೆಲ್ಲ ಒಮ್ಮೆಲೆ ಬಯಸುವ ನವ ನಾಗರಿಕ ಸಮಾಜಕ್ಕೆ, ನೈಸರ್ಗಿಕ ತತ್ವಗಳ ಅಡಿಪಾಯವನ್ನೇ ಅಲ್ಲಾಡಿಸುತ್ತಿರುವ 'ಅಭಿವೃದ್ಧಿಯುಗ'ದ ಮಿತಿಯನ್ನು ಮನಗಾಣಿಸಬೇಕು. ಅಂತಿಮವಾಗಿ, ಈ ಸವಾಲುಗಳನ್ನೆಲ್ಲ ನಿಭಾಯಿಸಬಲ್ಲ ಆಶಯಗಳನ್ನು ಸೂಕ್ತ ಸರ್ಕಾರಿ ಯೋಜನೆಗಳನ್ನಾಗಿಸಿ ಜನಸಾಮಾನ್ಯರಿಗೆ ತಲುಪಿಸಲು, ಜಡಗಟ್ಟಿರುವ ಅಧಿಕಾರಶಾಹಿಯನ್ನು ಚಲನಶೀಲಗೊಳಿಸಬೇಕು! ಇವೆಲ್ಲವನ್ನೂ ಸರ್ಕಾರ ಸಾಧಿಸೀತೇ?

ಈ ಕುರಿತು ಪ್ರಯತ್ನಿಸದೆ ಬೇರೆ ದಾರಿಯೇ ಇಲ್ಲ. ಏಕೆಂದರೆ, ಇಂಗಾಲದ ಸಂಯುಕ್ತಗಳು ವಾತಾವರಣ ಸೇರಿ ಎಷ್ಟೊಂದು ಉಷ್ಣತೆ ಹೆಚ್ಚಿಸುತ್ತಿವೆಯೆಂದರೆ, ಇದೀಗ 'ಹವಾಮಾನ ತುರ್ತುಪರಿಸ್ಥಿತಿ'ಯೇ ಎದುರಾಗಿದೆ. ಇದರಿಂದಾಗಿ, ನೈಸರ್ಗಿಕ ಪ್ರಕೋಪಗಳು, ಸಾರ್ವಜನಿಕ ಆರೋಗ್ಯಸ್ಥಿತಿಯಲ್ಲಿ ಕುಸಿತ, ಕೃಷಿ ಉತ್ಪಾದನೆ ಕೊರತೆ- ಇವೆಲ್ಲ ಹೆಚ್ಚಾಗಿ, ಸಾಮೂಹಿಕ ಭವಿಷ್ಯವೇ ಅಪಾಯದಂಚಿಗೆ ತಲುಪುತ್ತಿದೆ. ಈಗಿನ ಪ್ರಕೃತಿ ವಿಕೋಪದಿಂದಾಗುತ್ತಿರುವ ನಷ್ಟವನ್ನು ಪರಿಗಣಿಸಿದರೆ, ಜಿಡಿಪಿಯ ವಾರ್ಷಿಕ ಬೆಳವಣಿಗೆ ದರ ವ್ಯರ್ಥವಾಗುತ್ತಿದೆಯೆಂದು ಅರ್ಥಶಾಸ್ತ್ರಜ್ಞರೇ ಒಪ್ಪುತ್ತಿದ್ದಾರೆ. ಹೀಗಾಗಿ, ಹವಾಮಾನ ಬದಲಾವಣೆ ವಿಷಯದಲ್ಲಿ ಮಾಡು ಇಲ್ಲವೆ ಮಡಿ ಸ್ಥಿತಿಗೆ ಜಗವು ತಲುಪಿದೆ. ಪರಿಸರ ಸಂರಚನೆಗೆ ಧಕ್ಕೆತಾರದ ಬದಲಿ ಇಂಧನಗಳನ್ನು ಬಳಸುವುದು ಈ ಕಾಲಘಟ್ಟದ ಅನಿವಾರ್ಯವಾಗಿದ್ದು ಇದಕ್ಕಾಗಿ.

ಪರಿಸರಸ್ನೇಹಿ ಇಂಧನ ಮೂಲಗಳಾದ ಸೌರಶಕ್ತಿ, ಪವನಶಕ್ತಿ, ಜೈವಿಕ ಇಂಧನ- ಇವೆಲ್ಲ ಅಭಿವೃದ್ಧಿಯಾಗತೊಡಗಿ ದಶಕಗಳೇ ಸಂದಿವೆ. ಆದರೆ, ಅವುಗಳ ಬಳಕೆಯನ್ನು ಮುಖ್ಯವಾಹಿನಿಗೆ ತರುವಲ್ಲಿನ ಈವರೆಗಿನ ನಮ್ಮ ಸಾಧನೆ ಮಾತ್ರ ಅಲ್ಪವೇ. ಸಾರಿಗೆ ಕ್ಷೇತ್ರವಂತೂ ಸಂಪೂರ್ಣ ಪೆಟ್ರೋಲಿಯಂ ಉತ್ಪನ್ನಗಳನ್ನೇ ಆಧರಿಸಿದೆ ತಾನೆ? ವಿದ್ಯುತ್ತಿನಲ್ಲೂ ಬದಲಿಮೂಲಗಳ ಪಾತ್ರ ಇಂದಿಗೂ ಶೇ 4 ಕೂಡ ತಲುಪಿಲ್ಲ. ಏನಿದ್ದರೂ ಮಾಲಿನ್ಯಕಾರಿಯಾದ ಕಲ್ಲಿದ್ದಲು (ಶೇ 86), ನೈಸರ್ಗಿಕ ಅನಿಲ (ಶೇ 9) ಹಾಗೂ ಪೆಟ್ರೋಲಿಯಂನದ್ದೇ (ಶೇ 2) ಪಾರಮ್ಯ! ಅಸಂಖ್ಯಾತ ಹಳ್ಳಿಗರು ಹಾಗೂ ವನವಾಸಿಗರ ಅಡುಗೆಮನೆಯಂತೂ ಇಂದಿಗೂ ಸೌದೆಯನ್ನೇ ಆಶ್ರಯಿಸಿದೆ. ಸುರಕ್ಷಿತ ಇಂಧನ ಮೂಲಗಳ ತಂತ್ರಜ್ಞಾನ ಲಭ್ಯವಿದ್ದೂ ಅವನ್ನು ಬಹುಜನರ ಬಳಿಗೊಯ್ಯಲು ಸೋತಿರುವುದಕ್ಕೆ ಕಾರಣ ಕಂಡುಕೊಳ್ಳುವುದೇ ಈಗ ಮುಂದಿರುವ ಪ್ರಥಮ ಸವಾಲೆನ್ನಬೇಕು.

ಸೌರಶಕ್ತಿಯಿಂದಂತೂ ಮನೆಬಳಕೆಯ ವಿದ್ಯುತ್ ಹಾಗೂ ವಾಹನಗಳ ನಿರ್ವಹಣಾ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಲು ಸಾಧ್ಯವಿದೆ. ಅಡುಗೆಗೆ ಸಗಣಿ ಹಾಗೂ ಸಾವಯವ ತ್ಯಾಜ್ಯಗಳಿಂದ ತಯಾರಿಸುವ 'ಗೋಬರ್-ಅನಿಲ' ಒಳ್ಳೆಯ ಇಂಧನವಾಗಬಲ್ಲದು. ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿಗಳು ಎಂಬತ್ತರ ದಶಕದಲ್ಲಿಯೇ ಅಭಿವೃದ್ಧಿಪಡಿಸಿದ 'ಅಸ್ತ್ರಒಲೆ' ತಂತ್ರಜ್ಞಾನವಂತೂ ಕಡಿಮೆ ಕಟ್ಟಿಗೆಯಲ್ಲೇ ಗ್ರಾಮೀಣರ ಮನೆಗಳನ್ನು ಹೊಗೆರಹಿತವಾಗಿಸಬಹುದು. ಹೊಂಗೆ, ಔಡಲ, ಜ್ಯಾಟ್ರೋಫಾ ಗಿಡಗಳ ಬೀಜದ ಎಣ್ಣೆಯನ್ನು 'ಬಯೋ-ಡೀಸೆಲ್' ಆಗಿ ಬಳಸುವ ತಂತ್ರಜ್ಞಾನವೂ ಈಗ ಲಭ್ಯವಿದೆ. ಇವೆಲ್ಲವೂ ಮಾಲಿನ್ಯರಹಿತ ಇಂಧನ ಒದಗಿಸುವುದರ ಜೊತೆಗೆ, ನಾಡಿನೆಲ್ಲೆಡೆ ಅಸಂಖ್ಯ ಉದ್ಯೋಗಾವಕಾಶ ನಿರ್ಮಿಸುವುದರ ಮೂಲಕ ಹೊಸ 'ಹಸಿರು-ಆರ್ಥಿಕತೆ'ಗೆ ನಾಂದಿಯಾಗಬಲ್ಲ ಸಾಮರ್ಥ್ಯದವು. ಇವನ್ನೆಲ್ಲ ಈಗಾಗಲೇ ಸರ್ಕಾರ ಹಾಗೂ ಸಂಶೋಧನಾ ಸಂಸ್ಥೆಗಳ ವಿವಿಧ ಮಾದರಿ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನ ಮಾಡಿತೋರಿಸಿವೆ ಕೂಡ! ಅವನ್ನು ಆರ್ಥಿಕತೆಯ ಎಲ್ಲ ಕ್ಷೇತ್ರ ಹಾಗೂ ಸಮಾಜದ ಎಲ್ಲ ಸ್ತರಗಳಿಗೆ ಕೊಂಡೊಯ್ಯುವುದು ಮಾತ್ರ ಆಗಬೇಕಿದೆ.




ಅಂದರೆ, ಬದಲಿ ಇಂಧನ ಬಳಕೆಯನ್ನು ಸಾರ್ವತ್ರೀಕರಣಗೊಳಿಸುವುದು ('ಸ್ಕೇಲ್-ಅಪ್'), ಮುಂದಿರುವ ಇನ್ನೊಂದು ಸವಾಲು. ದೂರದೃಷ್ಟಿಯುಳ್ಳ ಸೂಕ್ತ ನೀತಿ, ಸ್ಪಷ್ಟ ಯೋಜನೆಗಳು ಹಾಗೂ ಅವುಗಳ ಕಾಲಬದ್ಧ ಅನುಷ್ಠಾನಕ್ಕೆ ಸರ್ಕಾರ ಮುಂದಾದರೆ ಅದು ಖಂಡಿತ ಸಾಧ್ಯ. ಈ ಕುರಿತ ಖಚಿತ ಮಾಹಿತಿಗಳನ್ನು ವ್ಯಾಪಕವಾಗಿ ಪಸರಿಸುವುದು ಮತ್ತು ಜನರು ಅವನ್ನೊಪ್ಪಿ ಅಳವಡಿಸಿಕೊಳ್ಳಲು ಉತ್ತೇಜಿಸಬೇಕಿದೆ. ಈ ಜನಶಿಕ್ಷಣ ಕಾರ್ಯದಲ್ಲಿ ಶಿಕ್ಷಣಸಂಸ್ಥೆಗಳು, ಸಹಕಾರಿ ಕ್ಷೇತ್ರ, ಪಂಚಾಯತ್ ರಾಜ್ ವ್ಯವಸ್ಥೆ, ನಾಗರಿಕ ಸಂಘಟನೆಗಳು ಕೈಜೋಡಿಸಿದರೆ ಅದು ಕಷ್ಟಸಾಧ್ಯವೇನಲ್ಲ. ನಾಡಿನ ಹಲವೆಡೆ ಹಲವಾರು ಉದ್ಯಮಗಳು ಹಾಗೂ ಪ್ರಯೋಗಶೀಲರು ಈಗಾಗಲೇ ಈ ಕುರಿತಂತೆಲ್ಲ ಎಷ್ಟೆಲ್ಲ ಪ್ರಯೋಗ ನಡೆಸಿದ್ದಾರೆ. ಮಲೆನಾಡು-ಕರಾವಳಿ ಪ್ರದೇಶದಲ್ಲಂತೂ ಸೌರಶಕ್ತಿ ಹಾಗೂ ಬಯೋಗ್ಯಾಸನ್ನು ಬಳಸಿ ಅದ್ಭುತ ಉಪಯೋಗ ಪಡೆಯುತ್ತಿರುವ ಪ್ರಯೋಗಶೀಲ ವ್ಯಕ್ತಿಗಳು ಹಾಗೂ ಸಂಸ್ಥೆಗಳಿವೆ. ಇವರ ಯಶೋಗಾಥೆಗಳನ್ನು ಜನರ ಮುಂದಿಟ್ಟರೆ, ಬದಲಿ ಇಂಧನದ ಜನಾಂದೋಲನವೇ ರೂಪುಗೊಳ್ಳಬಹುದು.

ಜೀವನ ವಿಧಾನದಲ್ಲಿ ಕೊಂಚ ಬದಲಾವಣೆ ತಂದುಕೊಂಡು ಕುಟುಂಬ ಮಟ್ಟದಲ್ಲಿ ವಿದ್ಯುತ್ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆ ಮಾಡುವುದೊಂದು ಸಾಮಾಜಿಕ ಮೌಲ್ಯವಾಗಿ ಆಗ ತೋರಬಲ್ಲದು. ಕಾಲುನಡಿಗೆ, ಸೈಕ್ಲಿಂಗ್ ತೆರನ ಆರೋಗ್ಯಪೂರಕ ಚಟುವಟಿಕೆಗಳಿಗೆ ಜಾಗತಿಕ ಆಯಾಮಗಳಿರುವುದನ್ನು ನಾವಾಗ ಗುರುತಿಸಬಹುದು. ಮೇಲ್ಛಾವಣಿ ಸೌರವಿದ್ಯುತ್ ಸ್ಥಾವರ, ಸೌರಒಲೆ, ಸೌರ ನೀರುಕಾಯಿಸುವ ಯಂತ್ರ, ಮನೆಬಳಕೆಯ ಬಯೋಗ್ಯಾಸ್ ಸ್ಥಾವರ, ಸಮುದಾಯದ ಅಸ್ತ್ರ ಒಲೆ, ಜೈವಿಕ ಇಂಧನ ಮೂಲಿಕಾವನ, ಇತ್ಯಾದಿಗಳನ್ನೆಲ್ಲ ಮನ-ಮನೆಗಳಿಗೆ ತಲುಪಿಸಲು ಆರಂಭದಲ್ಲಿ ಆರ್ಥಿಕ ಉತ್ತೇಜನ ನೀಡಬೇಕು. ಆದರೆ, ಸರ್ಕಾರ ಈಗ ಕೊಡುತ್ತಿರುವ ಸಹಾಯಧನವೆಲ್ಲ ಗ್ರಾಹಕರ ಕೈಸೇರುವ ಬದಲು, ಕೆಲವೇ ಕೆಲವು ಉದ್ಯಮಗಳು ಅಥವಾ ಮಧ್ಯವರ್ತಿಗಳ ಪಾಲಾಗುತ್ತಿರುವುದು ಮತ್ತು ಇದರಲ್ಲಿರುವ ಭ್ರಷ್ಟಾಚಾರ ಇಂದು ಗುಟ್ಟಾಗಿ ಉಳಿದಿಲ್ಲ! ಪಾರದರ್ಶಕ ಆಡಳಿತ ವ್ಯವಸ್ಥೆ ಬರದೆ ಬಹುಜನರ ಹಿತ ಕಾಪಾಡಲು ಹೇಗೆ ಸಾಧ್ಯ? ಪ್ರಧಾನಿ ಮಂಡಿಸಿದ 'ಪಂಚಾಮೃತ'ವು ಜನಜೀವನವನ್ನು ನಿಜಕ್ಕೂ ಪ್ರಭಾವಿಸಬೇಕೆಂದರೆ, ಆಡಳಿತಕ್ಕೆ 'ಸುಧಾರಣೆಯ ಸಂಜೀವಿನಿ' ಒದಗಿಸಲೇಬೇಕಿದೆ!

ನಾಡಿನ ಅರಣ್ಯ ಹಾಗೂ ಪರಿಸರದ ಹಿತ ಕಾಯುತ್ತಲೇ ಸುಸ್ಥಿರ ಅಭಿವೃದ್ಧಿ ಸಾಧಿಸುವ ದಿಸೆಯಲ್ಲಿ 'ಪರಿಸರ ಬಜೆಟ್' ಅನ್ನು ಮುಂದಿನ ಮುಂಗಡಪತ್ರದಲ್ಲಿ ಅಳವಡಿಸುವುದಾಗಿ ರಾಜ್ಯದ ಮುಖ್ಯಮಂತ್ರಿ ಇತ್ತೀಚೆಗೆ ಪ್ರಕಟಿಸಿದ್ದಾರೆ. ನಿಜಕ್ಕೂ ಸ್ವಾಗತಾರ್ಹ ಸಂಗತಿಯಿದು. ಇದು ಕಾರ್ಯಗತವಾಗಬೇಕಾದರೆ, ಸುರಕ್ಷಿತ ಇಂಧನಕ್ಕೂ ಅದರಲ್ಲಿ ಆದ್ಯತೆ ದೊರಕಬೇಕಿದೆ.

ಲೇಖಕ: ನಿರ್ದೇಶಕ, ಸಂರಕ್ಷಣಾ ಜೀವಶಾಸ್ತ್ರ ಮತ್ತು ಸುಸ್ಥಿರ ಅಭಿವೃದ್ಧಿ ಅಧ್ಯಯನ ಕೇಂದ್ರ, ಶಿರಸಿ

ಚುರುಮುರಿ



ಬಾಗಿಲಿಗೆ ಭಾಗ್ಯ

• ಮಣ್ಣೆರಾಜು

'ರಸ್ತೆ ಗುಂಡಿಗಳ ರಿಪೇರಿ ಮಾಡಿ, ಗುಂಡಿಗೆ ಬಿದ್ದು ಗಾಯಗೊಂಡವರ ರಿಪೇರಿ ಖರ್ಚು ಕೊಡಿ...' ಎಂದು ಒತ್ತಾಯಿಸಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಶಾಸಕರು ಸ್ಥಳಕ್ಕೆ ಧಾವಿಸಿ ಬಂದರು.

'ಈ ಮಳೆಗಾಲದಲ್ಲಿ ಮೂರು ಬಾರಿ ಗುಂಡಿ ಮುಚ್ಚಿದ್ದೇವೆ, ಮುಚ್ಚಿದ ಮೂರೇ ದಿನಕ್ಕೆ ಹೊಸ ಗುಂಡಿಗಳು ತೆರೆದುಕೊಳ್ಳುತ್ತವೆ. ಗುಂಡಿಗೆ ಸುರಿದ ದುಡ್ಡು ಕೊಚ್ಚಿಕೊಂಡು ಹೋಗಿದೆ...' ಶಾಸಕರು ಅಸಹಾಯಕತೆ ತೋಡಿಕೊಂಡರು.

'ರಸ್ತೆ ಗುಂಡಿಗಳು ಪ್ರಕೃತಿವಿಕೋಪ ವ್ಯಾಪ್ತಿಗೆ ಬರುತ್ತವಾ ಸಾರ್?' ಒಬ್ಬ ಕೇಳಿದ.

'ಹೌದು ಕಣ್ರೀ, ಮಳೆಗೆ ಗುಡ್ಡಗಳೇ ಕುಸಿಯುತ್ತವೆ. ರಸ್ತೆ ಇರುತ್ತೇನ್ರೀ? ಗುಂಡಿ ರಸ್ತೆಗಳಲ್ಲಿ ಸಂಚಾರ ಮಾಡದೆ ಮಳೆಗಾಲ ಮುಗಿಯುವವರೆಗೂ ನೀವು ಮನೆಯಲ್ಲಿ ಇದ್ದುಬಿಡಿ' ಎಂದರು.

'ಮಳೆ ಲಾಕ್‌ಡೌನ್ ಘೋಷಿಸಿದರೆ ಬದುಕು ಕಷ್ಟ ಆಗುತ್ತೆ ಸಾರ್?' ಜನ ಆತಂಕಗೊಂಡರು.

'ಸರ್ಕಾರ ನಿಮ್ಮ ಕೈ ಬಿಡುವುದಿಲ್ಲ. ಅಗತ್ಯ ಸೌಲಭ್ಯಗಳನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸುತ್ತೇವೆ. ಈಗ ನೀರು, ವಿದ್ಯುತ್, ಗ್ಯಾಸ್ ಮನೆ ತಲುಪುತ್ತಿವೆ. ಇಷ್ಟರಲ್ಲೇ ಪಡಿತರ ಧಾನ್ಯವನ್ನೂ ಮನೆ ಬಾಗಿಲಿಗೆ ತಲುಪಿಸುತ್ತೇವೆ ಉಂಡುಕೊಂಡು ಇರಿ' ಎಂದರು. ಜನ ಚಪ್ಪಾಳೆ ಹೊಡೆದರು.

'ಸರ್ಕಾರದ ಸೌಲಭ್ಯ ಮಾತ್ರವಲ್ಲ, ಸರ್ಕಾರವನ್ನೂ ನಿಮ್ಮ ಮನೆ ಬಾಗಿಲಿಗೆ ತರುವ ಚಿಂತನೆಯಿದೆ. ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ವಿಸ್ತರಿಸಿ, ಜನಪ್ರತಿನಿಧಿಗಳು, ಅಧಿಕಾರಿಗಳು ನಿಮ್ಮ ಮನೆಯಲ್ಲಿ ವಾಸ್ತವ್ಯ ಮಾಡಿ, ನಿಮ್ಮ ಕುಟುಂಬದ ಕಷ್ಟಸುಖ ಕೇಳಿ, ಬೇಕಾದ ನೆರವು ನೀಡುವ ಕಾರ್ಯಕ್ರಮ ರೂಪಿಸಲು ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡ್ತೀನಿ...' ಎಂದರು.

ಜನ ಖುಷಿಯಾಗಿ ಶಾಸಕರಿಗೆ ಜೈಕಾರ ಕೂಗಿದರು.

'ನಿಮ್ಮ ಮನೆ ಬಾಗಿಲಿಗೆ ಸರ್ಕಾರಿ ಭಾಗ್ಯ ತಲುಪಿಸುತ್ತೇವೆ. ಚುನಾವಣೆಯಲ್ಲಿ ನೀವು ಮನೆಯಿಂದ ಮತಗಟ್ಟೆಗೆ ಬಂದು ತಪ್ಪದೇ ಮತದಾನ ಮಾಡಬೇಕು...' ಎಂದು ಶಾಸಕರು ಕೈ ಮುಗಿದು ಕೇಳಿಕೊಂಡರು.

ಸಂಗತ

ಕ್ಷುದ್ರಗ್ರಹ: ನಾವೇ ಡಿಕ್ಕಿ ಹೊಡೆಸಿದರೆ?!

ಭೂಮಿಯ ಬಳಿ ಸುಳಿದಾಡುತ್ತಿರುವ ಕ್ಷುದ್ರಗ್ರಹಕ್ಕೆ ಆಕಾಶನೌಕೆಯೊಂದನ್ನು ಡಿಕ್ಕಿ ಹೊಡೆಸಿ ಅದರ ಪಥ ಬದಲಿಸಿದರೆ ಹೇಗೆ ಎಂಬ ಆಲೋಚನೆಯಲ್ಲಿದೆ ನಾಸಾ

• ಗುರುರಾಜ್ ಎಸ್. ದಾವಣಗೆರೆ

ಪ್ರತೀ ಸಲ ಭೂಮಿಯ ಸಮೀಪದ ಕಕ್ಷೆಗಳಲ್ಲಿ ಕ್ಷುದ್ರಗ್ರಹ ಪತ್ತೆಯಾದಾಗ, ಅದೆಲ್ಲಿ ಭೂಮಿಗೆ ಅಪ್ಪಳಿಸಿಬಿಡುತ್ತದೋ ಎಂಬ ಆತಂಕ ಎದುರಾಗಿ, ಹಳೆಯ ಡಿಕ್ಕಿ ಪ್ರಸಂಗಗಳೆಲ್ಲ ನೆನಪಾಗುತ್ತವೆ. ಖಗೋಳ ವಿಜ್ಞಾನಿಗಳು, ಆಸಕ್ತರು ಅದರ ಗಾತ್ರ, ವೇಗ, ತೂಕ, ಆಕಾರ, ಅಪ್ಪಳಿಸಿದರೆ ಆಗಬಹುದಾದ ಸಂಭಾವ್ಯ ಅನಾಹುತಗಳ ಕುರಿತು ಲೆಕ್ಕ ಹಾಕಲು ಶುರುಮಾಡುತ್ತಾರೆ.

ಕ್ಷುದ್ರಗ್ರಹಗಳು ಭೂಮಿಗೆ ಡಿಕ್ಕಿ ಹೊಡೆಯುವುದು ಹಳೆಯ ಸುದ್ದಿ ಮತ್ತು ವಿದ್ಯಮಾನ. ಈಗ 'ನಾವೇ ಅದಕ್ಕೆ ಡಿಕ್ಕಿ ಹೊಡೆದರೆ ಹೇಗೆ' ಎಂಬ ಹೊಸ ಹುಳ 'ನಾಸಾ' ವಿಜ್ಞಾನಿಗಳ ತಲೆ ಹೊಕ್ಕಿದೆ. ಆಕಾಶನೌಕೆಯೊಂದನ್ನು ಅತಿ ವೇಗದಲ್ಲಿ ಹಾರಿಸಿ, ಭೂಮಿಯ ಬಳಿ ಸುಳಿದಾಡುತ್ತಿರುವ ಕ್ಷುದ್ರಗ್ರಹಕ್ಕೆ ನೇರ ಡಿಕ್ಕಿ ಹೊಡೆಸಿ ಅದರ ಪಥ ಬದಲಿಸಿದರೆ ಹೇಗೆ ಎಂಬ ಆಲೋಚನೆ ಮಾಡಿರುವ ನಾಸಾ ಅದಕ್ಕೆ ಬೇಕಾದ ತಯಾರಿಯನ್ನೂ ಮುಗಿಸಿದೆ. ಸೌರವ್ಯೂಹದ ಕುರಿತು ತಿಳಿವಳಿಕೆ ಬಂದಾಗಿನಿಂದ, ಕ್ಷುದ್ರಗ್ರಹಗಳು ಎಲ್ಲಿರುತ್ತವೆ, ಭೂಮಿಗೆ ಏಕೆ ಅಪ್ಪಳಿಸುತ್ತವೆ, ಉಲ್ಕೆಗಳಿಗೂ ಅವುಗಳಿಗೂ ಏನು ವ್ಯತ್ಯಾಸ, ಇವುಗಳಲ್ಲಿ ಯಾವುದು ಹೆಚ್ಚು ಅಪಾಯಕಾರಿ ಎಂಬೆಲ್ಲ ಪ್ರಶ್ನೆಗಳು ಸಹಜವಾಗಿಯೇ ಜನಸಾಮಾನ್ಯರ, ವಿದ್ಯಾರ್ಥಿ, ಸಂಶೋಧಕರ ಆಸಕ್ತಿ ಕೆರಳಿಸಿವೆ. ಡಿಕ್ಕಿಯ ಬಗ್ಗೆ ವಿಶ್ವದೆಲ್ಲೆಡೆ ಕುತೂಹಲ ಜಾಸ್ತಿಯಾಗುತ್ತಿದೆ.

ನಾಸಾದ ವಿಜ್ಞಾನಿಗಳು ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆಸುವ ಯೋಜನೆಗೆ ಡರ್ಟ್– DART (ಡಬಲ್ ಆಸ್ಟ್ರಾಯಿಡ್ ರಿಡೈರೆಕ್ಷನ್ ಟೆಸ್ಟ್) ಎಂದು ಹೆಸರಿಟ್ಟಿದ್ದು, ಇದೇ ತಿಂಗಳಲ್ಲಿ ಸ್ಪೇಸ್ ಎಕ್ಸ್‌ನ ಫಾಲ್ಕನ್ 9 ರಾಕೆಟ್ ಹಾರಿಸಿ ಭೂಮಿಯ ಹತ್ತಿರದ ಯಾವುದಾದರೊಂದು ಕ್ಷುದ್ರಗ್ರಹಕ್ಕೆ ಡಿಕ್ಕಿ ಹೊಡೆಸಿ ಅದರ ಪಥವನ್ನು ಬದಲಾಯಿಸಲು ಸಾಧ್ಯವೇ ಎಂದು ಪರೀಕ್ಷಿಸುವ ಪ್ರಯತ್ನವಿದು ಎಂದಿದ್ದಾರೆ.

ಕ್ಯಾಲಿಫೋರ್ನಿಯಾದ ವಾಂಡರ್‌ಬರ್ಗ್ ಬಾಹ್ಯಾಕಾಶ ನೆಲೆಯಿಂದ ಇದೇ 23ರಂದು ನಭಕ್ಕೆ ಚಿಮ್ಮಲಿರುವ ಫಾಲ್ಕನ್‌ನಲ್ಲಿ ಕೂತಿರುವ ಸೋಲಾರ್ ಪ್ಯಾನಲ್‌ಗಳುಳ್ಳ, ಗಾಲ್ಫ್ ಮೈದಾನದಲ್ಲಿ ಓಡಾಡುವ ವಾಹನದಷ್ಟಿರುವ ಗಗನನೌಕೆ, ನಾಸಾ ಆಯ್ಕೆ ಮಾಡಿರುವ ಡಿಡಿಮೋಸ್ ಸುತ್ತ ಸುತ್ತುತ್ತಿರುವ ಫುಟ್‌ಬಾಲ್ ಸ್ಟೇಡಿಯಂ ಗಾತ್ರದ ಡೈಮಾರ್ಫೋಸ್ ಎಂಬ ಕ್ಷುದ್ರಗ್ರಹಕ್ಕೆ ಗಂಟೆಗೆ ಸುಮಾರು 24,000 ಕಿ.ಮೀ. ವೇಗದಲ್ಲಿ ಡಿಕ್ಕಿ ಹೊಡೆಯಲಿದೆ. ಇದು ಕ್ಷುದ್ರಗ್ರಹವನ್ನು ಛಿದ್ರ ಮಾಡುವುದಿಲ್ಲ. ಬದಲಿಗೆ ಅದು ಸುತ್ತುವ ಕಕ್ಷೆಯನ್ನು ತುಸು ಬದಲಾಯಿಸುವುದಲ್ಲದೆ, ಅದರ ವೇಗವನ್ನೂ ಕಡಿಮೆಗೊಳಿಸುತ್ತದೆ. ಡಿಕ್ಕಿಗೆ ಒಳಗಾಗಲಿರುವ ಕ್ಷುದ್ರಗ್ರಹ ಭೂಮಿಯತ್ತ ಬರುತ್ತಿಲ್ಲ. ಆದರೆ ಇದಕ್ಕೆ ಯಶಸ್ವಿಯಾಗಿ ಡಿಕ್ಕಿ ಹೊಡೆಯಲು ಸಾಧ್ಯವಾದರೆ, ಮುಂದಿನ ದಿನಗಳಲ್ಲಿ ಭೂಮಿಯ ಹತ್ತಿರ ಸುಳಿಯುವ ಕ್ಷುದ್ರಗ್ರಹದ ದಾರಿ ತಪ್ಪಿಸಲು ಸಾಧ್ಯವಾಗುತ್ತದೆ ಎಂಬುದು ವಿಜ್ಞಾನಿಗಳ ಅಂಬೋಣ.

ನೌಕೆಯು ಕ್ಷುದ್ರಗ್ರಹದ ಹತ್ತಿರವಾದಾಗ ಸ್ವಯಂಚಾಲಿತ ನ್ಯಾವಿಗೇಶನ್ ಚಾಲೂ ಆಗಿ ಡಿಕ್ಕಿ ಹೊಡೆಯುವಂತೆ ಮಾಡುತ್ತದೆ. ಇದಕ್ಕೆ ಕೆಲವೇ ಕ್ಷಣಗಳ ಮುಂಚೆ ನೌಕೆ ಕೃತಕ ಉಪಗ್ರಹವೊಂದನ್ನು ಬಿಡುಗಡೆ ಮಾಡುತ್ತದೆ. ಇಟಾಲಿಯನ್ ಸ್ಪೇಸ್ ಏಜೆನ್ಸಿ ತಯಾರಿಸಿದ ಸ್ಯಾಟಲೈಟ್, ಡಿಕ್ಕಿಯ ತೀವ್ರತೆ ಮತ್ತು ಚಿತ್ರಗಳನ್ನು ತೆಗೆದು ಭೂಮಿಗೆ ರವಾನಿಸುತ್ತದೆ. ಡಿಕ್ಕಿಯಾದಾಗ ಪ್ರಖರ ಬೆಳಕಿನೊಂದಿಗೆ ಅಪಾರ ದೂಳು ಏಳುತ್ತದೆ. ದೂಳು ಕಡಿಮೆಯಾದ ಹಲವು ವರ್ಷಗಳ ನಂತರ ಅಲ್ಲಿಗೆ ತೆರಳುವ ಯುರೋಪಿಯನ್ ಏಜೆನ್ಸಿಯ ಹಠಾ ಗಗನನೌಕೆ ಆಘಾತದ ಪ್ರಮಾಣ ಮತ್ತು ಅಲ್ಲಿನ ಸ್ಪಷ್ಟ ಚಿತ್ರ ರವಾನಿಸುತ್ತದೆ.



ಕ್ಷುದ್ರಗ್ರಹಗಳು ಸಾಮಾನ್ಯವಾಗಿ ಮಂಗಳ ಮತ್ತು ಗುರು ಗ್ರಹಗಳ ನಡುವಿನ ಕಕ್ಷೆಯಲ್ಲಿದ್ದುಕೊಂಡು ಸೂರ್ಯನ ಸುತ್ತ ಸುತ್ತುತ್ತಿರುತ್ತವೆ. ಆಲೂಗಡ್ಡೆ ಅಥವಾ ದುಂಡನೆಯ ಆಕಾರದ ಇವು ಶಿಲೆ ಮತ್ತು ಲೋಹಗಳಿಂದ ಕೂಡಿದ್ದು ಬರಿಯ ಕಣ್ಣಿಗೆ ಅಪರೂಪಕ್ಕೆ ಕಾಣಿಸುತ್ತವೆ. ಸೂರ್ಯನಿಂದ 20ರಿಂದ 80 ಕೋಟಿ ಕಿಲೊ ಮೀಟರ್ ದೂರದಲ್ಲಿರುವ ಇವುಗಳ ಮೇಲ್ಮೈ ಒರಟಾಗಿದ್ದು ಯಾವುದೇ ವಾತಾವರಣ ಇಲ್ಲದ್ದರಿಂದ ಗುರುತ್ವಬಲ ತೀರಾ ಕಮ್ಮಿ ಇರುತ್ತದೆ. ನಮ್ಮ ಸೌರವ್ಯೂಹದಲ್ಲಿ ಮಂಗಳ– ಗುರುಗ್ರಹಗಳ ನಡುವೆ 20 ಲಕ್ಷ ಕ್ಷುದ್ರಗ್ರಹಗಳಿರಬಹುದೆಂಬ ಅಂದಾಜಿದೆ. ಕೆಲವು ಅಡಿಗಳಿಂದ ಹಿಡಿದು ಕಿಲೊ ಮೀಟರ್‌ಗಟ್ಟಲೆ ವ್ಯಾಸ ಹೊಂದಿರುವ ಇವು ದೊಡ್ಡ ಗ್ರಹಗಳ ಸೆಳೆತಕ್ಕೆ ಸಿಲುಕಿ ಉಪಗ್ರಹಗಳಾಗಿ ಬದಲಾದ ಉದಾಹರಣೆಗಳಿವೆ.

ಇಪ್ಪತ್ತೈದು ವರ್ಷಗಳ ಹಿಂದೆ ಭೂಮಿಗೆ ಅತೀ ಸಮೀಪ ಬಂದಿದ್ದ ಈರೋಸ್ ಎಂಬ ಕ್ಷುದ್ರಗ್ರಹದ ಮೇಲೆ ವ್ಯೋಮ ನೌಕೆಯನ್ನು ಯಶಸ್ವಿಯಾಗಿ ಇಳಿಸಲಾಗಿತ್ತು. ಆಲೂಗಡ್ಡೆಯಂತಿದ್ದ ಈರೋಸ್ 35 ಕಿ.ಮೀ. ಉದ್ದ ಮತ್ತು 13 ಕಿ.ಮೀ. ಅಗಲವಿತ್ತು. ಭೂಮಿಯಿಂದ ಹಾರಿಸಿದ್ದ ನಿಯರ್ (NEAR – Near Earth Asteroid Rendezvous) ಶೂಮಾಕರ್ ನೌಕೆ ಒಂದು ವರ್ಷ ಈರೋಸ್‌ನ ಸುತ್ತ ಪ್ರದಕ್ಷಿಣೆ ಹಾಕಿ, ಅದರ ಗುಣಲಕ್ಷಣಗಳನ್ನೆಲ್ಲಾ ವಿವರವಾಗಿ ಅಧ್ಯಯನ ಮಾಡಿ, ಮಾಹಿತಿಯನ್ನು ಭೂಮಿಗೆ ರವಾನಿಸಿ, ಇನ್ನೇನು ಕೆಲಸ ಪೂರ್ತಿಯಾಯಿತೆನ್ನುವಾಗ ಅತ್ಯಂತ ನಾಜೂಕಾಗಿ ಚಿಕ್ಕ ಆಕಾಶಕಾಯದ ಮೇಲೆ ಇಳಿದು, ಕೆಲ ಮಾಹಿತಿಯನ್ನು ಭೂಮಿಗೆ ಕಳಿಸಿ, ಎರಡು ವಾರಗಳ ನಂತರ ಸಂಪರ್ಕ ಕಳೆದುಕೊಂಡಿತ್ತು.

ಈಗ, ನೌಕೆ ಡಿಕ್ಕಿ ಹೊಡೆಯುವ ದೃಶ್ಯಕ್ಕಾಗಿ ಇಡೀ ವಿಶ್ವವೇ ಕಾಯುತ್ತಿದೆ.

ವಾಚಕರ ವಾಣಿ

ಬೆಲೆ ಏರಿಕೆ ತಡೆಗಿದೆ ಮಾರ್ಗ

ಆಟೊ ಪ್ರಯಾಣ ದರ ಹೆಚ್ಚಳಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಇದರ ಜೊತೆಗೇ ಹೋಟೆಲಿನಲ್ಲಿ ಕಾಫಿ ಸೇರಿದಂತೆ ಆಹಾರ ಪದಾರ್ಥಗಳ ಬೆಲೆ ಹೆಚ್ಚು ಮಾಡಲು ಹೋಟೆಲುಗಳ ಸಂಘ ಸಲಹೆ ನೀಡಿದೆ.

ಹೌದು, ಸಂಚಾರ ಮತ್ತು ಆಹಾರ ಎರಡೂ ದುಬಾರಿಯಾಗಿದ್ದು, ಜನರ ಜೀವನ ಜರ್ಜರಿತಗೊಂಡಿರುವುದು ನಿಜ. ಇವಿಷ್ಟೇ ಅಲ್ಲದೆ ಎಲ್ಲ ಪದಾರ್ಥಗಳೂ ವಿಪರೀತ ಎಂಬಂತೆ ಬೆಲೆ ಏರಿಕೆ ಕಂಡಿವೆ. ಇದಕ್ಕೆ ಇಂಧನದ ಬೆಲೆ ಏರಿಕೆಯೇ ಮುಖ್ಯ ಕಾರಣ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಮೂಲ ಕಾರಣವಾದ ಇಂಧನದ ಬೆಲೆ ಈ ಮೊದಲಿನಂತೆಯೇ ಸರ್ಕಾರದ ಅಡಿಯಲ್ಲೇ ಇರುವಂತೆ, ಅಂದರೆ ಸಬ್ಸಿಡಿ ಕೊಡುವ ಮೂಲಕ ನಿಯಂತ್ರಿಸಿದರೆ ಇಂತಹ ಅಕಾಲಿಕ ಬೆಲೆ ಏರಿಕೆಯನ್ನು ತಡೆಗಟ್ಟಬಹುದಾಗಿದೆ. ಆರು ತಿಂಗಳಿಗೊಮ್ಮೆ ದರ ಪರಿಷ್ಕರಿಸಬಹುದು. ಕೇಂದ್ರ ಸರ್ಕಾರ ಈ ಕುರಿತು ಶೀಘ್ರವೇ ಚಿಂತಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸಚಿವ ಸ್ಥಾನ ತ್ಯಜಿಸಿಲ್ಲವೇಕೆ?

ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ರೈಲ್ವೆ ಸಚಿವರಾಗಿದ್ದಾಗ ರೈಲೊಂದು ಅಪಘಾತಕ್ಕೀಡಾದ್ದರಿಂದ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಇತಿಹಾಸದ ಪುಟಗಳಲ್ಲಿ ಇಂದಿಗೂ ಜೀವಂತಿಕೆ ಉಳಿಸಿಕೊಂಡಿದೆ. ಅವರ ಆದರ್ಶ, ತ್ಯಾಗ ಅನುಕರಣೀಯ. ಆದರೆ ಅವರನ್ನು ಅನುಸರಿಸುವ ರಾಜಕಾರಣಿಗಳು ಯಾರಾದರೂ ಇದ್ದಾರೆಯೇ? ನೂರಕ್ಕೆ ನೂರು ಇಲ್ಲ ಎಂಬುದೇ ಉತ್ತರವಾಗಿದೆ.

ಸರ್ಕಾರ ನಡೆಸುವ ಯಾರೊಬ್ಬರಿಗೂ ನ್ಯಾಯ, ನೀತಿ, ಧರ್ಮ ಬೇಡವಾಗಿವೆ. ತಮ್ಮ ಪಕ್ಷದವರು ಅತ್ಯಾಚಾರ ಮಾಡಿದರೂ ಕೊಲೆಯನ್ನೇ ಮಾಡಿದರೂ ಅಂತಹವರ ಪರ ನಿಲ್ಲುವುದು ಅಲಿಖಿತ ಒಪ್ಪಂದವಾಗಿಬಿಟ್ಟಿದೆ. ಲಖಿಂಪುರ– ಖೇರಿ ಪ್ರಕರಣದಲ್ಲಿ ಈಗ ನಡೆಯುತ್ತಿರುವುದು ಇದಕ್ಕೆ ಜ್ವಲಂತ ಸಾಕ್ಷಿ. ಆರೋಪಿ ಸ್ಥಾನದಲ್ಲಿ ಇರುವ ಕೇಂದ್ರ ಸಚಿವರೊಬ್ಬರ ಮಗನನ್ನು ಉಳಿಸಲು, ನಡೆದ ಘಟನೆಯನ್ನೇ ಬುಡಮೇಲು ಮಾಡಹೊರಟಿರುವುದು ನಿಜಕ್ಕೂ ಪ್ರಜಾಪ್ರಭುತ್ವದ ಕಗ್ಗೊಲೆಯೇ ಸರಿ. ಮಗನ ಮೇಲೆ ಗಂಭೀರ ಆರೋಪವಿದ್ದರೂ ತಮ್ಮ ಸ್ಥಾನವನ್ನು ತ್ಯಜಿಸದೇ ಇರುವುದಕ್ಕೆ ಏನನ್ನಬೇಕು? ಅಂತಹ ಸಚಿವರನ್ನು ಪ್ರಧಾನಿ ತಮ್ಮ ಸಂಪುಟದಲ್ಲಿ ಇನ್ನೂ ಉಳಿಸಿಕೊಂಡಿರುವುದು ನಾಡಿನ ದುರ್ದೈವವೇ ಸರಿ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಉಜ್ವಲ ಯೋಜನೆಗೆ ಪೆಟ್ಟು ಬೀಳದಿರಲಿ

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಮಹಿಳೆಯರಿಗೆ ಎಲ್‌ಪಿಜಿ ಸಂಪರ್ಕ ಒದಗಿಸಲು 'ಪ್ರಧಾನಮಂತ್ರಿ ಉಜ್ವಲ ಯೋಜನೆ'ಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಈ ಯೋಜನೆಯು ವಂಚಿತ ಕುಟುಂಬಗಳು ಎಲ್‌ಪಿಜಿ ಸಂಪರ್ಕ ಪಡೆಯಲು ಮತ್ತು ಮಹಿಳೆಯರನ್ನು ಸಬಲಗೊಳಿಸಲು ನೆರವಾಯಿತು. ಆದರೆ ಇತ್ತೀಚೆಗೆ ದಿನದಿಂದ ದಿನಕ್ಕೆ ಏರುತ್ತಿರುವ ಎಲ್‌ಪಿಜಿ ದರ ಯೋಜನೆಗೆ ಪೆಟ್ಟು ನೀಡುವಂತಿದೆ. ಏಕೆಂದರೆ ಹೊತ್ತಿನ ಊಟಕ್ಕೂ ಕಷ್ಟಪಡುವ ಬಡಜನರಿಗೆ ದಿನದಿಂದ ದಿನಕ್ಕೆ ಬೆಲೆ ಏರಿಕೆಯಾಗುತ್ತಿರುವ ಸಿಲಿಂಡರ್ ಅನ್ನು ಕೊಳ್ಳುವುದು ಅಸಾಧ್ಯವಾಗುತ್ತಿದೆ.

ಈ ಯೋಜನೆಯ ಫಲಾನುಭವಿಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನೀಡುವ ಸೀಮೆಎಣ್ಣೆಯನ್ನು ಖರೀದಿಸಲು ಕೂಡ ಅನರ್ಹರಾಗಿರುತ್ತಾರೆ. ಬಡಜನರ ಏಳಿಗೆಗಾಗಿ ಜಾರಿಗೆ ತಂದಿರುವ ಯೋಜನೆಯು ಅವರನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳದಂತೆ ಇರಲಿ.

ನಿರ್ಮಲಾ ನಾಗೇಶ್, ಧಾರವಾಡ

ಭಾಷಾ ಮಾಧ್ಯಮ: ಆತ್ಮವಿಶ್ವಾಸ ಮುಖ್ಯ

ಶಾಲಾ ಕಾಲೇಜುಗಳಲ್ಲಿ ಕನ್ನಡ ಭಾಷಾ ಮಾಧ್ಯಮವಿರಬೇಕೆ ಅಥವಾ ಇಂಗ್ಲಿಷ್ ಮಾಧ್ಯಮವಿರಬೇಕೆ ಅಥವಾ ದ್ವಿಭಾಷಾ ಮಾಧ್ಯಮವಿರಬೇಕೆ ಎಂಬ ಬಗ್ಗೆ ವಿಸ್ತೃತ ಚರ್ಚೆ ನಡೆಯುತ್ತಿದೆ. ಭಿನ್ನ ಅಭಿಪ್ರಾಯಗಳು, ಭಿನ್ನ ನಿಲುವುಗಳು ವ್ಯಕ್ತವಾಗುತ್ತಿವೆ. ಇಲ್ಲೊಂದು ಸ್ಮರಣೀಯ ಸಂದರ್ಭವನ್ನು ದಾಖಲಿಸಲು ಇಚ್ಛಿಸುತ್ತೇನೆ. ಅದೆಂದರೆ- 1966ನೆಯ ಇಸವಿ ನವೆಂಬರ್ 1ರಂದು ಸಂಜೆ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವಿತ್ತು. ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದ ನಾನು ಆಸಕ್ತಿಯಿಂದ ಆ ಕಾರ್ಯಕ್ರಮದಲ್ಲಿ ವೀಕ್ಷಕನಾಗಿ ಭಾಗವಹಿಸಿದ್ದೆ. ಮುಖ್ಯ ಅತಿಥಿಯಾಗಿದ್ದವರು ಕುವೆಂಪು ಅವರ ಸಹಪಾಠಿ, ವಿದ್ವಾಂಸ ಹಾಗೂ ಪ್ರಕಾಂಡ ವಾಗ್ಮಿಗಳಾಗಿದ್ದ ವೆಂಕಟರಾಮಪ್ಪನವರು. ತಮ್ಮ ಎಂದಿನ ಹಾಸ್ಯಭರಿತ ಮಾತುಗಳ ನಡುವೆ ಅವರು ಅಂದಿನ ದಿನಗಳಲ್ಲೂ ವ್ಯಾಪಕವಾಗಿ ಚರ್ಚೆ ಆಗುತ್ತಿದ್ದ ಭಾಷಾ ಮಾಧ್ಯಮದ ಬಗ್ಗೆ ಹೇಳಿದ ಮಾತುಗಳೆಂದರೆ, 'ಅಣೆಕಟ್ಟಿನಲ್ಲಿ ನೀರು ತುಂಬಿದ್ರೆ ನಾವು ಕಾಲುವೆ ತೋಡಿ, ಹೊಲಕ್ಕೆ ನೀರು ಹಾಯಿಸಿಕೊಂಡು ನಮಗೆ ಬೇಕಾದ ಬೆಳೆ ಬೆಳಕೋಬಹುದು. ಅಣೆಕಟ್ಟೆಯಲ್ಲೇ ನೀರಿಲ್ದೆ ಹೋದ್ರೆ ಕಾಲುವೇಲಿ ನೀರೆಲ್ಲಿ ಬರುತ್ತೆ? ಹೊಲದಲ್ಲಿ ಏನು ಬೆಳೆಯೋಕ್ಕಾಗುತ್ತೆ?' ಎಂದು ತಿಳಿಸುತ್ತಾ, ಮೊದಲು ಅಧ್ಯಾಪಕರಾದವರು, ವಿದ್ವಾಂಸರಾದವರು 'ಜ್ಞಾನ ಸಮುದ್ರ'ದಿಂದ ತುಂಬಿಕೊಳ್ಳಬೇಕು. ಆನಂತರ ಕಾಲುವೆಗೆ ನೀರು ಹಾಯಿಸಿ ಬೇಕಾದ ಬೆಳೆ ಬೆಳೆದುಕೊಳ್ಳಬಹುದು ಎಂದು ಬಹು ಮಾರ್ಮಿಕವಾಗಿ ಮತ್ತು ಸಮಯೋಚಿತವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಅವರು ಆಡಿದ ಮಾತುಗಳು ಅಂದಿಗೆ ಸರಿ ಮಾತ್ರವಲ್ಲ, ಬದಲಾಗಿರುವ, ಬದಲಾಗುತ್ತಿರುವ ಇಂದಿನ ಜೀವನ ಪದ್ಧತಿಗೂ ಅನ್ವಯಿಸುವಂಥವೇ ಆಗಿವೆ. ಸಾರ್ವಕಾಲಿಕ ಸತ್ಯದ ಮಾತುಗಳು ಅವು. ಮುಖ್ಯವಾಗಿ ನಾವು ಗಟ್ಟಿಯಾಗಬೇಕು, ನಮ್ಮ ವ್ಯಕ್ತಿತ್ವದಲ್ಲಿ ನಂಬಿಕೆ ಇರಿಸಿಕೊಂಡು, ಇಲ್ಲದಿದ್ದರೆ ಭರಿಸಿಕೊಂಡು ಮುಂದೆ ಹೆಜ್ಜೆ ಹಾಕುವ ಆತ್ಮವಿಶ್ವಾಸ ನಮ್ಮದಾಗಿರಬೇಕು.

ಹೊರೆಯಾಲ ದೊರೆಸ್ವಾಮಿ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಗದು ಬಳಕೆ ಜಿಗಿತ

• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.

ಐದು ವರ್ಷಗಳ ಹಿಂದೆ, 2016ರ ನವೆಂಬರ್ 8ರ ರಾತ್ರಿ 8.15ಕ್ಕೆ ರಾಷ್ಟ್ರೀಯ ಸುದ್ದಿವಾಹಿನಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನುದ್ದೇಶಿಸಿ ಮಾಡಿದ ಭಾಷಣ ಸಂಚಲನ ಸೃಷ್ಟಿಸಿತ್ತು. ಆಗ ಚಲಾವಣೆಯಲ್ಲಿದ್ದ ₹500 ಹಾಗೂ ₹1000 ಮುಖಬೆಲೆಯ ನೋಟುಗಳನ್ನು ರದ್ದುಪಡಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಅವರು ತಮ್ಮ ಭಾಷಣದಲ್ಲಿ ಪ್ರಕಟಿಸಿದ್ದರು. ತಕ್ಷಣದಿಂದಲೇ ನೋಟು ರದ್ದತಿ ಆದೇಶ ಜಾರಿಗೆ ಬಂದಿದ್ದರಿಂದ, ಏನಾಗುತ್ತಿದೆ ಎಂಬುದು ಜನರ ಅರಿವಿಗೆ ಬರಲು ಸಾಕಷ್ಟು ಸಮಯ ಹಿಡಿದಿತ್ತು.


ನೋಟು ರದ್ದತಿಗೆ ಸರ್ಕಾರ ಹಲವು ಕಾರಣಗಳನ್ನು ನೀಡಿತ್ತು. ಮಾರುಕಟ್ಟೆಯಲ್ಲಿ ಕಪ್ಪು ಹಣದ ಚಲಾವಣೆ ತಡೆಯುವುದು, ಖೋಟಾ ನೋಟುಗಳ ಹಾವಳಿಗೆ ಇತಿಶ್ರೀ ಹಾಡುವುದು, ಮಾರುಕಟ್ಟೆಯಲ್ಲಿ ನಗದು ಚಲಾವಣೆಯನ್ನು ತಗ್ಗಿಸುವುದು, ಡಿಜಿಟಲ್ ವಹಿವಾಟು ಉತ್ತೇಜಿಸುವುದು ಮೊದಲಾದ ಕಾರಣಗಳನ್ನು ನೀಡಿತ್ತು. ಲೆಕ್ಕಕ್ಕೆ ಸಿಗದ ನಗದನ್ನು ಬ್ಯಾಂಕ್‌ಗಳಲ್ಲಿ ಠೇವಣಿ ಇಡುವಂತೆ ಮಾಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಈ ಕ್ರಮ ಭ್ರಷ್ಟಾಚಾರ ವಿರುದ್ಧದ ದೊಡ್ಡ ಸಮರ ಎಂದು ಸರ್ಕಾರ ಬಣ್ಣಿಸಿದರೂ, ಯಾವ ಸುಳಿವೂ ಇಲ್ಲದೆ ಕೈಗೊಂಡ ನಿರ್ಧಾರದಿಂದ ಜನರು ವಿಚಲಿತರಾಗಿದ್ದು ನಿಜ.

ಐದು ವರ್ಷಗಳ ಬಳಿಕ, ಮಾರುಕಟ್ಟೆಯಲ್ಲಿ ನಗದು ಚಲಾವಣೆ ಕಡಿಮೆಯಾಗುವ ಬದಲು ಶೇ 66.7ರಷ್ಟು ಹೆಚ್ಚಳವಾಗಿದೆ. 2016ರ ನವೆಂಬರ್ 4ರ ದತ್ತಾಂಶಗಳ ಪ್ರಕಾರ, ₹17.97 ಲಕ್ಷ ಕೋಟಿ ನಗದು ಚಲಾವಣೆಯಲ್ಲಿತ್ತು. 2021ರ ಅಕ್ಟೋಬರ್ 29ರ ಆರ್‌ಬಿಐ ಮಾಹಿತಿ ಪ್ರಕಾರ, ₹29.44 ಲಕ್ಷ ಕೋಟಿ ನಗದು ಚಲಾವಣೆಯಲ್ಲಿದೆ.

ನೋಟು ರದ್ದತಿ ಬಳಿಕ, ₹15.41 ಲಕ್ಷ ಕೋಟಿ ಪೈಕಿ ₹15.31 ಲಕ್ಷ ಕೋಟಿ ನಗದು ಬ್ಯಾಂಕ್‌ಗಳಲ್ಲಿ ಸಂಗ್ರಹವಾಯಿತು. ರದ್ದಾದ ನೋಟುಗಳ ಶೇ 99.3ರಷ್ಟು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದವು. 'ಸರ್ಕಾರ ಲೆಕ್ಕಾಚಾರ ಹಾಕಿದಂತೆ, ಲೆಕ್ಕಕ್ಕೆ ಸಿಗದ ನಗದು, ಭಾರಿ ಪ್ರಮಾಣದಲ್ಲಿ ಬ್ಯಾಂಕ್‌ಗೆ ಜಮೆಯಾಗಲಿಲ್ಲ' ಎಂದು 2017ರ ಫೆಬ್ರವರಿಯಲ್ಲಿ ಆಗಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಒಪ್ಪಿಕೊಂಡಿದ್ದರು.

ಪೂರ್ವಸಿದ್ಧತೆ ಇಲ್ಲದೇ ಕೈಗೊಂಡ ನೋಟು ರದ್ದತಿ ನಿರ್ಧಾರವನ್ನು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡಿದ್ದವು. 50 ದಿನಗಳಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಬರದಿದ್ದರೆ, ತನಗೆ ಶಿಕ್ಷೆ ನೀಡಿ ಎಂದು ಪ್ರಧಾನಿ ಹೇಳಿದ್ದರಾದರೂ, ಆ ಬಳಿಕ ಅವರು ಯಾವುದೇ ಜವಾಬ್ದಾರಿ ಹೊರಲಿಲ್ಲ ಎಂದು ದೂರಿದವು. ಕೇಂದ್ರದ ಅರ್ಥಹೀನ ನಿರ್ಧಾರದಿಂದ ದೇಶದ ಅನೇಕ ವ್ಯಾಪಾರ ವಹಿವಾಟುಗಳು ಕುಸಿದವು, ಜನರು ಉದ್ಯೋಗ ಕಳೆದುಕೊಂಡರು, ಕೈಗಾರಿಕೆಗಳು ಹಿನ್ನಡೆ ಅನುಭವಿಸಿದವು, ಹತ್ತಾರು ಜೀವಗಳು ಬಲಿಯಾದವು ಎಂದು ಆರೋಪಿಸಿದವು.


ಐದು ವರ್ಷಗಳಲ್ಲಿ ಶೇ 66.7ರಷ್ಟು ಏರಿಕೆ



ಪ್ರಜಾವಾಣಿ ಗ್ರಾಫಿಕ್ಸ್

ಡಿಜಿಟಲ್ ಪಾವತಿಯ ಮೊತ್ತ ಕುಸಿತ

ದೇಶದಲ್ಲಿ ಡಿಜಿಟಲ್ ಸ್ವರೂಪದ ಪಾವತಿಯ ಮೊತ್ತವು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ. 2017-18ನೇ ಸಾಲಿಗೆ ಹೋಲಿಸಿದರೆ, 2018-19ನೇ ಸಾಲಿನಲ್ಲಿ ಈ ಮೊತ್ತವು ಶೇ 14.6ರಷ್ಟು ಏರಿಕೆಯಾಗಿತ್ತು. ಆದರೆ ನಂತರದ ವರ್ಷಗಳಲ್ಲಿ ಅದು ಇಳಿಕೆಯಾಗುತ್ತಾ ಬಂದಿದೆ. 2019-20ನೇ ಸಾಲಿನಲ್ಲಿ ಶೇ 1ರಷ್ಟು ಇಳಿಕೆ ದಾಖಲಿಸಿದೆ. 2020-21ನೇ ಸಾಲಿನಲ್ಲಿ ಶೇ 12.87ರಷ್ಟು ಇಳಿಕೆಯಾಗಿದೆ. ಇದು ಡಿಜಿಟಲ್ ಪಾವತಿಯನ್ನು ಹೆಚ್ಚಿಸುವ ಸರ್ಕಾರದ ಗುರಿಯಲ್ಲಿ ಆದ ದೊಡ್ಡ ಹಿನ್ನಡೆ ಎಂದು ಆರ್‌ಬಿಐನ ವಾರ್ಷಿಕ ವರದಿಯಲ್ಲಿ ವಿಶ್ಲೇಷಿಸಲಾಗಿದೆ





ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 3

ಬಾಲಸುಬ್ರಹ್ಮಣ್ಯನ ಲೀಲೆಗಳು

ಸುಬ್ರಹ್ಮಣ್ಯ ಹುಟ್ಟಿದ ತಕ್ಷಣವೇ ಪಾರ್ವತಿಯ ಸ್ತನ್ಯಪಾನ ಮಾಡಿ, ಶಿವನ ಎದೆಯ ಅಪ್ಪುಗೆಯಲ್ಲಿ ಆಡಿದ ನಂತರ ಬಾಲಸುಬ್ರಹ್ಮಣ್ಯನಿಗೆ ಅಕಸ್ಮಾತ್ತಾಗಿ ವಿಶ್ವಾಮಿತ್ರಮುನಿ ಸಿಕ್ಕರು. ಮುಖದಲ್ಲಿ ತೇಜಸ್ವಿ ಕಳೆ ತುಂಬಿದ್ದ ಮಗುವನ್ನು ನೋಡಿ ವಿಶ್ವಾಮಿತ್ರರು ಆಕರ್ಷಿತರಾದರು. ಅವರಿಗೆ ಅರಿವೇ ಇಲ್ಲದಂತೆ ಆ ಮಗುವಿಗೆ ಭಕ್ತಿಯಿಂದ ನಮಸ್ಕರಿಸಿದರು. ಇದರಿಂದ ವಿಶ್ವಾಮಿತ್ರನ ಮನಸ್ಸಿಗೆ ತುಂಬಾ ಸಮಾಧಾನವಾಯಿತು. ಉತ್ತೇಜಿತರಾದ ವಿಶ್ವಾಮಿತ್ರ ಚಿಕ್ಕಮಗು ಎಂಬುದನ್ನು ಮರೆತು ಸ್ತುತಿಸತೊಡಗಿದರು. ಪ್ರಸನ್ನನಾದ ಶಿವಸುತ ತನ್ನ ತೇಜೋರೂಪ ತೋರಿಸಿದ. ತಾವೆಂದೂ ಕಂಡಿರದ ಅದ್ಭುತವಾದ ತೇಜೋರೂಪದ ಬಾಲಕನನ್ನು ಕಂಡು ಧನ್ಯಭಾವದಿಂದ ನಮಸ್ಕರಿಸಿದರು. ಹೀಗೆ ವಿಶ್ವಾಮಿತ್ರರು ಬಾಲಸುಬ್ರಹ್ಮಣ್ಯನನ್ನು ಕಂಡು ಮೋಡಿಗೊಳಗಾದವರಂತೆ ಇರಲು ಬ್ರಹ್ಮನ ವಿಧಿ ಪ್ರೇರಿತವಾಗಿತ್ತು. ಲೋಕಕಂಟಕನಾದ ತಾರಕಾಸುರನನ್ನು ಸಂಹರಿಸಲು ಬೇಕಾದ ಅಂಶಗಳನ್ನು ಬಾಲಸುಬ್ರಹ್ಮಣ್ಯನಲ್ಲಿ ತುಂಬಲು ಬ್ರಹ್ಮ ರೂಪಿಸಿದ ಸೂತ್ರಗಳಲ್ಲಿ ಇದೂ ಒಂದಾಗಿತ್ತು.

ಸೃಷ್ಟಿಕರ್ತನ ವಿಧಿಲಿಖಿತದಂತೆ ಬಾಲಸುಬ್ರಹ್ಮಣ್ಯ ತನಗೆ ಗೌಪ್ಯವಾಗಿ ವೇದೋಕ್ತ ಸಂಸ್ಕಾರವನ್ನು ಮಾಡುವಂತೆ ವಿಶ್ವಾಮಿತ್ರರನ್ನು ಕೋರಿದ. ವಿಶ್ವಾಮಿತ್ರರು 'ನಾನು ಬ್ರಾಹ್ಮಣನಲ್ಲ, ಗಾಧಿ ಎಂಬ ಕ್ಷತ್ರಿಯನ ಮಗ' ಎಂದು ಹಿಂಜರಿದರು. ಆಗ ಬಾಲಸುಬ್ರಹ್ಮಣ್ಯ ತನ್ನ ವೃತ್ತಾಂತವೆಲ್ಲವನ್ನೂ ಹೇಳಿ, 'ಬ್ರಹ್ಮರ್ಷಿಯಾಗಿರುವ ನಿಮ್ಮನ್ನು ವಶಿಷ್ಠ ಮೊದಲಾದ ಮುನಿಗಳೆಲ್ಲ ಹೊಗಳಿ, ಆದರಿಸುತ್ತಾರೆ. ಆದುದರಿಂದ ನೀವು ನನಗೆ ಜಾತಕರ್ಮಾದಿಗಳ ಸಂಸ್ಕಾರವನ್ನು ಮಾಡಬಹುದು. ಆದರೆ, ಈ ವಿಷಯಗಳೆಲ್ಲವೂ ಬಹಳ ರಹಸ್ಯವಾದುದರಿಂದ ಎಲ್ಲೂ ಹೇಳಕೂಡದು' ಎಂದನು.

ಬಾಲಸುಬ್ರಹ್ಮಣ್ಯನ ಕೋರಿಕೆಯಂತೆ ವಿಶ್ವಾಮಿತ್ರರು ವೇದೋಕ್ತ ರೀತಿಯಿಂದ ಮತ್ತು ಪ್ರೀತಿಪೂರ್ವಕವಾಗಿ ಎಲ್ಲ ಸಂಸ್ಕಾರಗಳನ್ನು ಮಾಡಿದರು. ಇದರಿಂದ ಸುಪ್ರೀತನಾದ ಬಾಲಸುಬ್ರಹ್ಮಣ್ಯ ದಿವ್ಯವಾದ ಜ್ಞಾನವನ್ನು ವಿಶ್ವಾಮಿತ್ರನಿಗೆ ಕರುಣಿಸಿದ. ಅಲ್ಲದೆ, ಅಂದಿನಿಂದ ವಿಶ್ವಾಮಿತ್ರನನ್ನು ಪುರೋಹಿತನನ್ನಾಗಿ ಮಾಡಿಕೊಂಡ. ಅದೇ ಸಮಯದಲ್ಲಿ ಅಗ್ನಿಯು ಅಲ್ಲಿಗೆ ಬಂದು ಪರಮಪವಿತ್ರನಾದ ಮಗುವನ್ನು ಎತ್ತಿಕೊಂಡು ಆಲಿಂಗಿಸಿ, ಚುಂಬಿಸಿದ. ನಂತರ ಬಾಲಸುಬ್ರಹ್ಮಣ್ಯನಿಗೆ ಒಂದು ಶಕ್ತಿಯುತವಾದ ಆಯುಧವನ್ನು ಕೊಟ್ಟು ಹರಸಿದ. ಅಗ್ನಿ ಕೊಟ್ಟ ಶಕ್ತ್ಯಾಯುಧವನ್ನು ಬಾಲಸುಬ್ರಹ್ಮಣ್ಯ ಪರ್ವತದ ಶಿಖರದ ಮೇಲೆ ಪ್ರಯೋಗಿಸಿದ. ಆ ಶಿಖರವು ಪರ್ವತದಿಂದ ಕಳಚಿ ಭೂಮಿಯ ಮೇಲೆ ಬಿದ್ದಿತು. ಇದನ್ನು ಕಂಡು ಸಹಸ್ರಾರು ರಾಕ್ಷಸರು ಬಾಲಸುಬ್ರಹ್ಮಣ್ಯನ ಮೇಲೆ ಯುದ್ಧಕ್ಕೆ ಬಂದರು. ಬಾಲಸುಬ್ರಹ್ಮಣ್ಯನ ಶಕ್ತ್ಯಾಯುಧದಿಂದ ಎಲ್ಲರೂ ನಾಶವಾದರು. ಆದರೆ, ಶಕ್ತ್ಯಾಯುಧ ಪ್ರಹಾರದಿಂದ ಭೂನೆಲ ಮತ್ತು ಪರ್ವತಗಳು ನಡುಗಿದವು. ಮೂರು ಲೋಕವೂ ತತ್ತರಿಸಿ, ಹಾಹಾಕಾರ ಎದ್ದಿತು.

ಕೋಪಗೊಂಡ ಇಂದ್ರ ವಜ್ರಾಯುಧದಿಂದ ಬಾಲಸುಬ್ರಹ್ಮಣ್ಯನ ಬಲಭಾಗಕ್ಕೆ ಹೊಡೆದ. ಅದರಿಂದ 'ಶಾಖ' ಎಂಬುವನು ಹುಟ್ಟಿದ. ಬಾಲಸುಬ್ರಹ್ಮಣ್ಯನ ಎಡಭಾಗಕ್ಕೆ ಹೊಡೆದಾಗ 'ವಿಶಾಖ' ಎಂಬುವನು ಹುಟ್ಟಿದ. ಬಾಲಸುಬ್ರಹ್ಮಣ್ಯನ ಹೃದಯಕ್ಕೆ ಹೊಡೆದಾಗ 'ನೈಗಮ' ಎಂಬ ಮಹಾಬಲಿಷ್ಠ ಸೃಷ್ಟಿಯಾದ. ಈ ಮೂವರು ಮಹಾಬಲಶಾಲಿಗಳೊಂದಿಗೆ ಬಾಲಸುಬ್ರಹ್ಮಣ್ಯ ಇಂದ್ರನ ಮೇಲೆ ಎರಗಿದ. ಭಯಭೀತನಾದ ಇಂದ್ರ ಬ್ರಹ್ಮನ ಮೊರೆಹೋದ. ಆಗ ಬ್ರಹ್ಮನು ಬಾಲಸುಬ್ರಹ್ಮಣ್ಯನನ್ನು ಸಮಾಧಾನಿಸಿದ. ಪಾರಾದ ಇಂದ್ರ ಆ ಬಾಲಕ ಯಾರೆಂಬುದನ್ನು ತಿಳಿಯುವ ಕುತೂಹಲವೂ ಇಲ್ಲದೆ, ತನ್ನ ಪ್ರಾಣ ಉಳಿದರೆ ಸಾಕೆಂದು ತನ್ನ ದೇವತೆಗಳೊಡನೆ ಹೊರಟುಹೋದ.

ಸ್ಕಂದನು ಮತ್ತೆ ಎಂದಿನಂತೆ ನಿರ್ಭಯನಾಗಿ ನಾನಾ ವಿಧವಾದ ಆಟಗಳನ್ನಾಡುತ್ತಿದ್ದಾಗ ಕೃತ್ತಿಕೆಯರೆಂಬ ಆರು ಸ್ತ್ರೀಯರು ಆ ನದಿಯಲ್ಲಿ ಸ್ನಾನ ಮಾಡಲು ಬಂದರು. ಆಟವಾಡುತ್ತಿರುವ ಸುಂದರವಾದ ಆ ಮಗುವನ್ನು ನೋಡಿ, ಎತ್ತಿಕೊಂಡು ಸಲಹಿದರು. ಆ ಮಗುವಿಗೆ 'ಕುಮಾರ'ನೆಂದು ನಾಮಕರಣ ಮಾಡಿ ಬೆಳೆಸಿದರು. ಕೃತ್ತಿಕೆಯರ ಬಳಿ ಬೆಳೆಯುತ್ತಿರುವ ಬಾಲಕಾರ್ತಿಕ ಯಾರೆಂಬುದು ವಿಷ್ಣು ಸಹಿತ ಯಾವ ದೇವತೆಗಳಿಗೂ ಗೊತ್ತಾಗದೆ ಗುಟ್ಟಾಗಿಯೇ ಉಳಿಯಿತು. •

ಜನರ ಬವಣೆ


ಸಂಗ್ರಹ ಚಿತ್ರ

ನೋಟು ರದ್ದತಿ ನಿರ್ಧಾರವು ತಕ್ಷಣಕ್ಕೆ ಜನರ ಕೈಕಟ್ಟಿಹಾಕಿತು. 'ರದ್ದುಗೊಂಡ ನೋಟುಗಳು ಕೇವಲ ಕಾಗದದ ಚೂರುಗಳು' ಎಂದು ಪ್ರಧಾನಿ ಘೋಷಿಸಿದ್ದರಿಂದ, ಜನರ ಬಳಿ ಹಣವಿದ್ದರೂ ಅದು ನಿರುಪಯುಕ್ತವಾಗಿತ್ತು. ತಮ್ಮಲ್ಲಿದ್ದ ₹500 ಹಾಗೂ ₹1000 ಮುಖಬೆಲೆಯ ನೋಟುಗಳನ್ನು ಬದಲಾಯಿಸಲು ಬ್ಯಾಂಕ್‌ಗಳಲ್ಲಿ ತಿಂಗಳುಗಟ್ಟಲೆ ಸಾಲಿನಲ್ಲಿ ನಿಲ್ಲಬೇಕಾಯಿತು. ಎಟಿಎಂನಿಂದ ಹಣ ಹಿಂಪಡೆಯಲು ಸಾಲುಗಟ್ಟಬೇಕಾದ ಅನಿವಾರ್ಯ ಸೃಷ್ಟಿಯಾಯಿತು. ರದ್ದುಗೊಂಡ ಕರೆನ್ಸಿ ಠೇವಣಿ ಇರಿಸಲು ಗಡುವು ನೀಡಲಾಗಿದ್ದ 2016ರ ಡಿಸೆಂಬರ್ 31ರಂದು ಸಹ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಬಿಸಿಲು ಚಳಿ ಲೆಕ್ಕಿಸದೆ ಸರದಿ ಸಾಲಿನಲ್ಲಿ ನಿಂತಿದ್ದ ಹಲವು ಜನರು ಮೃತಪಟ್ಟ ಘಟನೆಗಳೂ ದೇಶದಾದ್ಯಂತ ವರದಿಯಾದವು.

ಆಧಾರ: ಆರ್‌ಬಿಐನ ಪಾಕ್ಷಿಕ ವರದಿಗಳು, ವಾರ್ಷಿಕ ವರದಿಗಳು, ಪಿಟಿಐ, ಸಿಎಂಐಇ

ಸರ್ಕಾರದ ವಾದ

'ಕೋವಿಡ್-19 ಸಾಂಕ್ರಾಮಿಕವು ಸೃಷ್ಟಿಸಿದ ಅನಿಶ್ಚಿತ ಸ್ಥಿತಿಯು ನಗದು ಬೇಡಿಕೆ ಹೆಚ್ಚಳಕ್ಕೆ ಕಾರಣವಾಯಿತು. ಇದು ಕೇವಲ ಭಾರತದ ಸ್ಥಿತಿಯಲ್ಲ, ಜಾಗತಿಕವಾಗಿ ಇದೇ ಪರಿಸ್ಥಿತಿ ಇದೆ' ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ.

ನಗದು ವಹಿವಾಟು ತಗ್ಗಿಸುವ ಉದ್ದೇಶದ ನೋಟು ರದ್ದತಿ ನಿರ್ಧಾರ ವಿಫಲವಾಗಿದೆ ಎಂಬ ಆರೋಪಗಳಿಗೆ ಸರ್ಕಾರ ಈ ಪ್ರತಿಕ್ರಿಯೆ ನೀಡಿದೆ.

'ಆರ್ಥಿಕ ಅನಿಶ್ಚಿತತೆ ಇದ್ದ ಅವಧಿಯಲ್ಲಿ ಬೇಡಿಕೆ ಯಾವಾಗಲೂ ಹೆಚ್ಚಾಗುತ್ತದೆ. ಕೋವಿಡ್ ಸಮಯದಲ್ಲಿ ಜನರು ನಗದಿನ ಮೇಲೆ ಹೆಚ್ಚು ಅವಲಂಬಿಸಿದ್ದರು. ಸಾಂಕ್ರಾಮಿಕ ವರ್ಷದಲ್ಲಿ ಹೆಚ್ಚಿನ ಪ್ರಮಾಣದ ನಗದಿಗೆ ಬೇಡಿಕೆ ಸೃಷ್ಟಿಯಾಗಿ, ಚಲಾವಣೆಯೂ ಅಧಿಕವಾಯಿತು' ಎಂದು ತಿಳಿಸಿದೆ.

ನೋಟು ರದ್ದತಿ ನಂತರದ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿ ಆಗಿರುವ ಬೆಳವಣಿಗೆಯು ನಗದು ಮೇಲಿನ ಅವಲಂಬನೆಯನ್ನು ತಡೆಯುತ್ತದೆ ಎಂದು ಸರ್ಕಾರವು ಹೇಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಮೂರು ವರ್ಷಗಳಲ್ಲಿ ಡಿಜಿಟಲ್ ಪಾವತಿ ಮೂಲಕ ವರ್ಗಾಯಿಸಲಾಗುತ್ತಿರುವ ಹಣದ ಮೊತ್ತವು ಕುಸಿಯುತ್ತಿದೆ.

ನೋಟು ಮುದ್ರಣ ವೆಚ್ಚ

ನೋಟು ರದ್ದತಿ ಬಳಿಕ ಹೊಸದಾಗಿ ಪರಿಚಯಿಸಲಾದ ₹500 ಹಾಗೂ ₹2000 ಮುಖಬೆಲೆಯ ನೋಟುಗಳನ್ನು ಮುದ್ರಿಸಲು ತಗಲುವ ವೆಚ್ಚವನ್ನು ಸರ್ಕಾರ ಬಹಿರಂಗಪಡಿಸಿದೆ. ಸರ್ಕಾರವು ₹500 ಮತ್ತು ₹2000 ಮುಖಬೆಲೆಯ 2,061.1 ಕೋಟಿ ನೋಟುಗಳನ್ನು ಮುದ್ರಿಸಿದೆ. ಈ ನೋಟುಗಳ ಮುದ್ರಣಕ್ಕೆ ಒಟ್ಟು ₹6,262.44 ಕೋಟಿ ವೆಚ್ಚವಾಗಿದೆ.



₹2.94
₹500 ಮುಖಬೆಲೆಯ ಒಂದು ನೋಟಿನ ಮುದ್ರಣ ವೆಚ್ಚ

1,695.7 ಕೋಟಿ
ಸರ್ಕಾರವು ಮುದ್ರಿಸಿದ ₹500 ಮುಖಬೆಲೆಯ ನೋಟುಗಳ ಸಂಖ್ಯೆ

₹4,968.84 ಕೋಟಿ
₹500 ಮುಖಬೆಲೆಯ ನೋಟುಗಳ ಮುದ್ರಣಕ್ಕೆ ತಗುಲಿದ ವೆಚ್ಚ



₹3.54
₹2000 ಮುಖಬೆಲೆಯ ಒಂದು ನೋಟಿನ ಮುದ್ರಣ ವೆಚ್ಚ

365.4 ಕೋಟಿ
ಸರ್ಕಾರವು ಮುದ್ರಿಸಿದ ₹2000 ಮುಖಬೆಲೆಯ ನೋಟುಗಳ ಸಂಖ್ಯೆ

₹1,293.6 ಕೋಟಿ
₹2000 ಮುಖಬೆಲೆಯ ನೋಟುಗಳ ಮುದ್ರಣಕ್ಕೆ ತಗುಲಿದ ವೆಚ್ಚ

'ಸರ್ಕಾರಕ್ಕೆ ₹1.28 ಲಕ್ಷ ಕೋಟಿ ವೆಚ್ಚ'

ನೋಟು ರದ್ದತಿ ಪ್ರಕ್ರಿಯೆಗೆ ಸರ್ಕಾರವು ₹1.28 ಲಕ್ಷ ಕೋಟಿ ವೆಚ್ಚ ಮಾಡಿದೆ ಎಂದು ಕೆಲವು ಸಂಸ್ಥೆಗಳು ನಡೆಸಿದ ಅಧ್ಯಯನಗಳು ಅಂದಾಜಿಸಿವೆ. ನೋಟು ರದ್ದತಿ ನಂತರ ನೋಟು ಬದಲಾವಣೆಗೆ ನೀಡಲಾಗಿದ್ದ ಅವಧಿಯಲ್ಲಿ ದೇಶದ ಬ್ಯಾಂಕ್‌ಗಳು ಪ್ರತಿದಿನ ಅಂದಾಜು ₹2,800-₹3,000 ಕೋಟಿ ವೆಚ್ಚ ಮಾಡಿವೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ ವರದಿ ಮಾಡಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಉತ್ತರ ಪ್ರದೇಶದ** ಕುಶಿನಗರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇತ್ತೀಚೆಗೆ ಉದ್ಘಾಟನೆಯಾಯಿತು. ಶ್ರೀಲಂಕಾ ಏರ್‌ಲೈನ್ಸ್‌ನಲ್ಲಿ ಬಂದಿಳಿದ ಬೌದ್ಧ ಬಿಕ್ಕುಗಳ ನಿಯೋಗವನ್ನು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಬರಮಾಡಿಕೊಂಡರು. 'ಸೀತಾಮಾತೆಯು ಅಶೋಕವನದಲ್ಲಿ ಕುಳಿತಿದ್ದ ಬಂಡೆಯ ಭಾಗವನ್ನು ಬಿಕ್ಕುಗಳ ನಿಯೋಗವು ಕುಶಿನಗರಕ್ಕೆ ತಂದಿದೆ. ಅದನ್ನು ಗೌರವಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು' ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.



✓ **ಶ್ರೀಲಂಕಾದಿಂದ** ಬಂದ ನಿಯೋಗವು ಬುದ್ಧನಿಗೆ ಸಂಬಂಧಿಸಿದ ಪುರಾತನ ವಸ್ತುವೊಂದನ್ನು ತಂದಿದೆಯೇ ವಿನಾ, ಸೀತೆ ಕುಳಿತಿದ್ದ ಕಲ್ಲನ್ನಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. ನಿಯೋಗವನ್ನು ಬರಮಾಡಿಕೊಂಡ ಚಿತ್ರವನ್ನು ಕೇಂದ್ರ ಸಂಸ್ಕೃತಿ ಸಚಿವ ಕೃಷ್ಣಾರೆಡ್ಡಿ ಅವರು ಟ್ವಿಟರ್‌ನಲ್ಲಿ ಪ್ರಕಟಿಸಿದ್ದರು. 'ಈ ವಸ್ತುವನ್ನು ಶ್ರೀಲಂಕಾದ ವಾಸ್ಕಡುವ ಶ್ರೀ ಸುಬುದ್ಧಿ ರಾಜವಿಹಾರ ದೇವಸ್ಥಾನದಿಂದ ತರಲಾಗಿದ್ದು, ಕುಶಿನಗರದಲ್ಲಿ ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗುತ್ತದೆ' ಎಂದು ಪಿಐಬಿ ವರದಿ ಮಾಡಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ನಿಜಭಕ್ತಿ

ಹರಿಭಜಕರೊಳು ಭಯದಿನೊಗೆದುದೆನಿಬರ ಭಕುತಿ|
ವರದಮೇಲಣ ಭಕ್ತಿಯೆನಿಬರದು ನೋಡೆ ?||
ಬರಿಯ ಸಂತೋಷದನುರಾಗ ರಸ ನಿಜಭಕ್ತಿ -|
ಪರಮದಾಕರ್ಷೆಯದು – ಮಂಕುತಿಮ್ಮ ||494||

ಪದ-ಅರ್ಥ: ಭಯದಿನೊಗೆದುದೆನಿಬರ = ಭಯದಿಂ (ಭಯದಿಂದ) + ಒಗೆದುದು (ಹುಟ್ಟಿದುದು) + ಎನಿಬರ (ಎಷ್ಟು), ವರದಮೇಲಣ = ವರದ (ವರಗಳ, ಅಪೇಕ್ಷೆಗಳ) + ಮೇಲಣ, ಭಕ್ತಿಯೆನಿಬರದು = ಭಕ್ತಿ + ಎನಿಬರ್ + ಅದು, ಪರಮದಾಕರ್ಷೆಯದು = ಪರಮದ (ಭಗವಂತನ) + ಆಕರ್ಷೆಯದು (ಆಕರ್ಷಣೆಯದು).

ವಾಚ್ಯಾರ್ಥ: ಭಕ್ತರಲ್ಲಿ ಭಯದಿಂದ ಹುಟ್ಟಿದ ಭಕ್ತಿ ಎಷ್ಟು ಪ್ರಮಾಣದ್ದು? ಭಗವಂತನ ಕೃಪೆಯ ಆಸೆಗೆ ಹುಟ್ಟಿದ ಭಕ್ತಿಯ ಪ್ರಮಾಣವೆಷ್ಟು? ನಿಜವಾದ ಭಕ್ತಿ ಕೇವಲ ಸಂತೋಷದ, ಅನುರಾಗದ ರಸ. ಅದೇ ಭಗವಂತನ ಸೆಳೆತಕ್ಕೆ ಕಾರಣ.

ವಿವರಣೆ: ಹುಡುಗ ಕತ್ತಲೆಯಲ್ಲಿ ನಡೆದಿದ್ದ. ಯಾವ ಬೆಳಕೂ ಇಲ್ಲ. ದಾರಿ ಇನ್ನೂ ದೂರ ಮತ್ತು ಮುಂದೆ ದಾರಿಯ ಪಕ್ಕದಲ್ಲಿ ಸ್ಮಶಾನ. ಅಲ್ಲಿ ದೆವ್ವಗಳಿವೆಯೆಂಬ ಮಾತುಗಳನ್ನು ಕೇಳಿದ್ದ. ಅವನ ಎದೆ ಹೆದರಿಕೆಯಿಂದ ಹಾರುತ್ತಿತ್ತು. ಆದರೂ ಅವನು ಕೈಯ್ಯಲ್ಲಿ ಗಟ್ಟಿಯಾಗಿ ಹಿಡಿದಿದ್ದ ಹನುಮಂತನ ತಾಯಿತ ಧೈರ್ಯ ಕೊಡುತ್ತಿತ್ತು. ಮುಂದೆ ಎರಡು ದಿನಗಳ ನಂತರ ಆ ಹುಡುಗನ ತಾಯಿ ಹೇಳುತ್ತಿದ್ದಳು, 'ಏನೋ ನೀನು ಐದು ಶನಿವಾರ ತಪ್ಪದೆ ಆಂಜನೇಯನ ದೇವಸ್ಥಾನಕ್ಕೆ ಹೋಗುತ್ತೇನೆಂದು ಹರಕೆ ಹೊತ್ತಿದ್ದೆಯಲ್ಲ, ಹೋದ ಶನಿವಾರ ಹೋಗಲೇ ಇಲ್ಲ. ಇನ್ನು ನಿನಗೆ ಏನು ಕಾದಿದೆಯೋ ತಿಳಿಯದು'. ಹುಡುಗ ಗಾಬರಿಯಾದ. ಆಂಜನೇಯನ ಕೋಪಕ್ಕೆ ತುತ್ತಾದ ತನಗೆ ಯಾವ ತೊಂದರೆ ಬಂದೀತೋ ಎಂದು ಕೊರಗಿದ. ಪುರೋಹಿತರು ಹೇಳಿದರು, 'ಯಾವ ಭಯವೂ ಬೇಡ. ನಾನು ಅದಕ್ಕೊಂದು ಪ್ರಾಯಶ್ಚಿತ್ತ ಮಾಡಿಸುತ್ತೇನೆ. ಹನುಮಂತ ಕೃಪೆ ಮಾಡುತ್ತಾನೆ'. ಹುಡುಗ ನಂಬಿದ. ದೆವ್ವದ ಭಯ ನಿವಾರಣೆಗೆ ಹನುಮಂತನ ತಾಯಿತದ ಧೈರ್ಯ. ಹನುಮಂತನ ಕೋಪದ ಭಯಕ್ಕೆ ಪ್ರಾಯಶ್ಚಿತ್ತದ ಧೈರ್ಯ. ಹೀಗೆ ನಮ್ಮ ಬದುಕು ಭಯದಿಂದ ಭಯಕ್ಕೆ ಸಾಗುತ್ತಿದೆ. ಪೂಜೆ ಮಾಡದಿದ್ದರೆ, ಮಾಡಿದ ಪೂಜೆ ಸರಿಯಾಗದಿದ್ದರೆ, ಏನಾದರೂ ತಡೆಯಾದರೆ, ದೀಪ ಆರಿ ಹೋದರೆ, ಯಾವುದೋ ಅನಾಹುತವಾದೀತೆಂದು ಭಯ ಆವರಿಸಿಕೊಳ್ಳುತ್ತದೆ. ನಮ್ಮ ಭಕ್ತಿಗೆ ಬಹಳಷ್ಟು ಬಾರಿ ಭಯವೇ ಮೂಲ. ಭಕ್ತಿಯ ಮತ್ತೊಂದು ಮೂಲವೆಂದರೆ ಅನುಗ್ರಹಾಪೇಕ್ಷೆ. ನಮ್ಮ ಪೂಜೆಗಳೊಂದಿಗೆ ಚಾಚಿದ ಕೈ ಇದ್ದೇ ಇರುತ್ತದೆ. ನಾವು ಯಾವ ಪೂಜೆ, ಹೋಮ, ಧರ್ಮಕಾರ್ಯ ಮಾಡಿದರೂ ಅದರ ಹಿಂದೆ ಫಲಾಪೇಕ್ಷೆ ಇದ್ದೇ ಇರುತ್ತದೆ. ನಮ್ಮ ಸ್ತೋತ್ರಗಳು, ಮಹಾಕಾವ್ಯಗಳೂ ಕೂಡ ಮುಗಿಯುವುದು ಫಲಶೃತಿಯಿಂದಲೇ. ಕುಮಾರವ್ಯಾಸ, 'ವೇದಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನಫಲ, ಕೃಚ್ಛಾದಿ ತಪಸಿನ ಫಲವು. ಜ್ಯೋತಿಷ್ಟೋಮ ಯಾಗಫಲ, ಮುಂತಾದವುಗಳು ದೊರೆಯುವುದು ಈ ಮಹಾಭಾರತದ ಬಂದು ಅಕ್ಷರವನ್ನು ಹೇಳಿದವರಿಗೆ' ಎಂದರೆ, ಶ್ರೀಸೂಕ್ತ, 'ಪುತ್ರ, ಪೌತ್ರ, ಧನಂ, ಧಾನ್ಯಂ ಹಸ್ತ್ಯಾಶ್ವಾದಿಗವೇರಥಂ, ಪ್ರಜಾನಾಂ ಭವಸಿ ಮಾತಾ ಚ ಆಯುಷ್ಮಂತಂ ಕರೋತು ಮಾಂ||' ಎಂದರೆ ನನಗೆ ಮಕ್ಕಳು, ಮೊಮ್ಮಕ್ಕಳು, ಧನ, ಧಾನ್ಯ, ಕುದುರೆ, ಆನೆ, ಆಡು, ಕುರಿ, ರಥ, ಆಕಳುಗಳನ್ನು ಕೊಡುವುದರೊಂದಿಗೆ ದೀರ್ಘಾಯಸ್ಸು ಕೊಡು' ಎನ್ನುತ್ತದೆ. ಆದರೆ ನಿಜವಾದ ಭಕ್ತಿ ಇವೆರಡರಿಂದ ದೂರವಾಗಿ ಬರಿಯ ಸಂತೋಷ ಅನುರಾಗದ ರಸವಾಗಿ ಭಗವಂತನತ್ತ ಆಕರ್ಷಿಸುತ್ತದೆ. ❖

ದಿನ ಭವಿಷ್ಯ

ಬುಧವಾರ ನವೆಂಬರ್ 10, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ಷಷ್ಠೀ ಗಂ. 18-15 (ಹ. 1-40) ಬುಧವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 37-33 (ರಾ. 9-23) ಶೂಲ ನಾಮ ಯೋಗ ಗಂ. 22-20 ತೈತಲ ಕರಣ ಗಂ. 18-15 ವಿಷ ಶೇಷ ಗಂ. 3-16 ವಿಷ ಗಂ. 47-3 ಅಮೃತ ಗಂ 22-41 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-19 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 14

ಮೇಷ: ಸಾಮಾಜಿಕ ಕಾರ್ಯಗಳ ಬಗ್ಗೆ ಚಿಂತನೆ ನಡೆಸಲಿದ್ದೀರಿ. ಜಂಜಾಟ ಪರಿಸ್ಥಿತಿಯು ನಿವಾರಣೆಯಾಗಿ ಮನಸ್ಸಿಗೆ ನೆಮ್ಮದಿ ಸಿಗಲಿದೆ. ಧೃತಿಗೆಡಬೇಕಾದ ಅಗತ್ಯವಿಲ್ಲ.

ವೃಷಭ: ವೈಯಕ್ತಿಕ ಕೆಲಸಗಳು ಸಮರ್ಪಕವಾಗಿ ನಡೆಯಲಿವೆ. ಹಗಲುಗನಸು ಕಾಣುವುದು ಬೇಡ. ಆಲಸ್ಯದಿಂದ ದೂರವಿರಿ. ಉತ್ತಮ ಯೋಜನೆಯನ್ನು ರೂಪಿಸಿ.

ಮಿಥುನ: ಹಳೆಯ ಸ್ನೇಹಿತರಿಂದ ಮತ್ತು ಉದ್ಯಮಿಗಳಿಂದ ನೆರವು ದೊರೆಯಲಿದೆ. ಆಪ್ತ ಬಂಧುಗಳಿಂದ ಉಪಯುಕ್ತ ಸಲಹೆ ದೊರೆಯಲಿದೆ. ಆರ್ಥಿಕ ಸಮಸ್ಯೆಗಳು ನಿವಾರಣೆಯಾಗಲಿವೆ.

ಕರ್ಕಾಟಕ: ಅನಿವಾರ್ಯ ಕೆಲಸಗಳನ್ನು ಪೂರ್ಣಗೊಳಿಸಲು ಸಕಾಲ. ವಿದ್ಯಾರ್ಥಿಗಳಿಗೆ ಸಂತಸದ ದಿನವಾಗಲಿದೆ. ಆರ್ಥಿಕ ದೃಢೀಕರಣಕ್ಕಾಗಿ ಹೊಸ ರೂಪರೇಷೆಯನ್ನು ನೆರವೇರಿಸುತ್ತೀರಿ.

ಸಿಂಹ: ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಸು ಒಳಿತನ್ನು ಕೊಡಲಿದೆ. ಕೆಲಸದ ಒತ್ತಡದ ನಡುವೆಯೂ ಖುಷಿಯ ಅನುಭವ ನಿಮ್ಮ ಪಾಲಿಗೆ. ಕಿರಿಯರ ಮೇಲೆ ಜಾಗ್ರತೆ ಇರಲಿ. ಪ್ರಯಾಣದಲ್ಲಿ ಸುಖಾನುಭವ.

ಕನ್ಯಾ: ಎಷ್ಟೇ ಸಂಕಷ್ಟಗಳು ಬಂದರೂ ಜಾಣ್ಮೆಯಿಂದ ಬದಲಾಯಿಸುವಲ್ಲಿ ಸಫಲರಾಗುತ್ತೀರಿ. ರಕ್ತ ಸಂಬಂಧದ ಬಂಧುಗಳು ಸಹಕಾರ ನೀಡಲಿದ್ದಾರೆ. ವೈಯಕ್ತಿಕ ಕೆಲಸಗಳಲ್ಲಿ ಯಶ ಕಾಣುವಿರಿ.

ತುಲಾ: ಉದ್ಯೋಗದಲ್ಲಿ ಪ್ರಗತಿಯನ್ನು ಕಂಡುಕೊಳ್ಳುವಿರಿ. ಕ್ರೀಡಾಸ್ಪರ್ಧಿಗಳಿಗೆ ಉತ್ತಮ ಅವಕಾಶ. ಕಳೆದುಕೊಂಡ ಸಂಪತ್ತು ಪುನಃ ಸಿಗಲಿದೆ. ಸರ್ಕಾರಿ ನೌಕರರಿಗೆ ನೆಮ್ಮದಿ.

ವೃಶ್ಚಿಕ: ಬಹುದಿನಗಳ ವೃತ್ತಿಯಲ್ಲಿನ ಉದ್ವಿಗ್ನತೆ ದೂರವಾಗಲಿದೆ. ಸಂಗಾತಿಯೊಂದಿಗೆ ವಿಶ್ರಾಂತ ಸ್ಥಳಕ್ಕೆ ತೆರಳಲಿದ್ದೀರಿ. ನಿವೃತ್ತರಿಗೆ ಪುಣ್ಯಕ್ಷೇತ್ರ ದರ್ಶನ ಸಾಧ್ಯತೆ. ಉನ್ನತ ಸ್ಥಾನ ಲಭ್ಯವಾಗುವ ಸಾಧ್ಯತೆ.

ಧನು: ನಿಮ್ಮ ಸಮಸ್ಯೆಗಳನ್ನು ಸಮಾಧಾನವಾಗಿ ತೆಗೆದುಕೊಳ್ಳಿ. ಆರ್ಥಿಕ ಸ್ಥಿರತೆಯನ್ನು ಸಾಧಿಸಲಿದ್ದೀರಿ. ಸಾಮಾಜಿಕ ಕಾರ್ಯಕರ್ತರಿಗೆ ಮನ್ನಣೆ. ಸರ್ಕಾರದಿಂದ ಸಹಾಯ ದೊರಯಲಿದೆ.

ಮಕರ: ಹತ್ತಿರದ ಬಂಧುಗಳಿಂದ ಸಹಕಾರ ನೀಡಲಿದ್ದಾರೆ. ವೈಯಕ್ತಿಕ ಕೆಲಸಗಳಲ್ಲಿ ಯಶ ಕಾಣುವಿರಿ. ಉದ್ಯೋಗ ಬದಲಾವಣೆಯ ಬಗ್ಗೆ ಆಲೋಚನೆ ಬೇಡ. ಆತುರದ ನಿರ್ಧಾರ ಸಲ್ಲದು. ಆಂಜನೇಯನ ದರ್ಶನ ಮಾಡಿ.

ಕುಂಭ: ಸಮಾಜದ ಒಳಿತಿಗಾಗಿ ತೆಗೆದುಕೊಂಡ ನಿರ್ಧಾರಗಳು ಫಲ ಕೊಡಲಿವೆ. ಹೃದಯಸ್ಪರ್ಶಿ ಕ್ಷಣಗಳು ನಿಮಗಾಗಿ ಕಾದಿವೆ. ಮಾಡುವ ಕೆಲಸದ ಬಗ್ಗೆ ಅವಲೋಕನ ಅಗತ್ಯ.

ಮೀನ: ನಿಮ್ಮ ವೃತ್ತಿ ಅನುಭವ ಮತ್ತು ಸಾಮರ್ಥ್ಯದ ಫಲದಿಂದಾಗಿ ಸಾಮಾಜಿಕ ಮನ್ನಣೆ ದೊರೆಯಲಿದೆ. ಖಾಸಗಿ ಉದ್ಯೋಗಿಗಳಿಗೆ ಯಶಸ್ಸು. ರಾಜಕೀಯದಲ್ಲಿ ಅತಂತ್ರ ಸ್ಥಿತಿಯನ್ನು ಅನುಭವಿಸಬೇಕಾದೀತು.


ನಿಮ್ಮ ಜನ್ಮದಿನ 10-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ಈ ದಿನದ ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಉತ್ತಮ ಭರವಸೆಯ ದಿನಗಳು ಎದುರಾಗುತ್ತಿವೆ. ನವವಿವಾಹಿತರಿಗೆ ಸಂತಾನ ಭಾಗ್ಯ ಕಂಡುಬರುವುದು. ಮಹಿಳೆಯರಿಗೆ ತವರು ಮನೆಯ ಉಡುಗೊರೆ.

ಪದಬಂಧ 4773

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೆರೆ ಹೀಗೆ ಬಂದಿದೆ (3)
3.ಮಾಣಿಕ್ಯ ಇಲ್ಲಿದೆ (4)
5.ಕ್ಷಾಮ ಹೀಗೆ ಬಂದಿದೆ (2)
6.ಕಗ್ಗೊಲೆಯ ಘಟನೆ (4)
7. ಕನ್ನಡಿಗ ನೀಡಿದ ಇನ್‌ಕಮ್‌ಟ್ಯಾಕ್ಸ್ (7)
10.ಮರೀಚಿಕೆ ಇಲ್ಲಿದೆ (4)
11.ಅಂಗಿ ಎಳೆದ ಮಂಗ! (2)
13.ಹೀಗೆ ದುರುಗುಟ್ಟಿಕೊಂಡು ನೋಡು (4)
14.ಹೊಳಪಿನ ಲೇಪನ (3)

ಮೇಲಿಂದ ಕೆಳಕ್ಕೆ
1.ಪ್ರಗತಿಯಲ್ಲಿರುವ ನಕಲು (2)
2.ಭಾರವಲ್ಲದ್ದು ಇದು (3)
4.ವಿಷ್ಣುವಿನ ವಾಹನ (3)
5.ಈತ ಹಣವಿಲ್ಲದವನು (3)
6.ಹಣ ಕೊಟ್ಟು ಖರೀದಿಸಿದ ಸೊಡರು (3)
8.ಮಾತು ಕೇಳಿಸಿಕೊಂಡು ಬಂದ ಸೋದರ ಮಾವ (3)
9.ಈಕೆ ಸ್ನೇಹಿತೆ (3)
10.ಮಣ್ಣು ಇಲ್ಲಿದೆ (3)
11.ಇಸಿದು ಕೊಂಡವ ಈರಬದ್ರನಾದರೆ ಕೊಟ್ಟವ? (3)
12.ತೀಕ್ಷ್ಣವಾದ ವಾಸನೆ (2)



4772ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಶರಣಾಗತ 3.ಪ್ರಸಂಗ 5.ತಲೆಬರಹ 7.ಲಬಾ 9.ಕನಲು 11.ಜಂಬ 13.ವಿಮಾನಯಾನ 15.ಬಣವೆ 16.ವರದಿಗಾರ

ಮೇಲಿಂದ ಕೆಳಕ್ಕೆ: 1.ಶರತ್ಕಾಲ 2.ಗಣಿತ 4.ಸಂದೇಹ 6.ಬಯಲು 8.ಬಾಯಿ 9.ಕವನ 10.ಗುಜಂ 12.ಬಡಿವಾರ 13.ವಿಪ್ಲವ 14.ನಗರ

ಸುಡೊಕು 5159

	2			3		4		6
4		1	5		2		8	
				4			5	1
	9				4	6		
6		2		8				5
		4	2			3		
				2				9
	1	3	8		5			
9	4		6		3	8		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5158 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಮಹೀಂದ್ರ ಲಾಜಿಸ್ಟಿಕ್ಸ್ ತೆಕ್ಕೆಗೆ ಮೆರು ಕ್ಯಾಬ್ಸ್

ನವದೆಹಲಿ (ಪಿಟಿಐ): ಮೆರು ಕ್ಯಾಬ್ಸ್‌ಅನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಮಹೀಂದ್ರ ಲಾಜಿಸ್ಟಿಕ್ಸ್ ಲಿಮಿಟೆಡ್ (ಎಂಎಲ್‌ಎಲ್) ಮಂಗಳವಾರ ಹೇಳಿದೆ. ಈ ಸ್ವಾಧೀನದಿಂದಾಗಿ ತನ್ನ ಎಂಟರ್‌ಪ್ರೈಸಸ್ ಮೊಬಿಲಿಟಿ ವಹಿವಾಟು ಇನ್ನಷ್ಟು ವಿಸ್ತರಣೆ ಆಗಲಿದೆ ಎಂದು ಅದು ತಿಳಿಸಿದೆ.

ಮೆರು ಟ್ರಾವೆಲ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್‌ನ (ಎಂಟಿಎಸ್‌ಪಿಎಲ್) ಮೆರು ಮೊಬಿಲಿಟಿ ಟೆಕ್ ಪ್ರೈವೇಟ್ ಲಿಮಿಟೆಡ್, ವಿ-ಲಿಂಕ್ ಫ್ಲೀಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ವಿ-ಲಿಂಕ್ ಆಟೊಮೋಟಿವ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಅನ್ನು ಪೂರ್ತಿಯಾಗಿ ಸ್ವಾಧೀನಕ್ಕೆ ಪಡೆದಿರುವುದಾಗಿ ಮಹೀಂದ್ರ ಲಾಜಿಸ್ಟಿಕ್ಸ್ ತಿಳಿಸಿದೆ.

2006ರಲ್ಲಿ ಆರಂಭ ಆದ ಮೆರು ಕ್ಯಾಬ್ಸ್, ಕೇವಲ ಒಂದು ಕರೆಗೆ ಮನೆ ಬಾಗಿಲಿಗೆ ಎ.ಸಿ. ಸೌಲಭ್ಯದ ಕ್ಯಾಬ್ ಸೇವೆ ಒದಗಿಸಲು ಶುರು ಮಾಡಿತು. ಸದ್ಯ, ಏರ್‌ಪೋರ್ಟ್ ಪ್ರಯಾಣ ಮತ್ತು ಕಾರ್ಪೊರೇಟ್ ವಲಯದಲ್ಲಿ ಮೆರು ಕ್ಯಾಬ್ ಸೇವೆ ಒದಗಿಸುತ್ತಿದೆ.

ಕಂಪನಿಯು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯುತ್ ಚಾಲಿತ ವಾಹನಗಳನ್ನೂ ಹೊಂದಿದೆ.

ಮುಂಬೈ ಧಾರಣೆ

ಶೇಂಗಾ

9-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1400 (1405)
ಒಂದು ವಾರದ ಡೆಲಿವರಿ	1395 (1400)
ಸೋಯಾ ಕಚ್ಚಾ	1181 (1185)
ಪಾಮ್ ವಾರದ ಡೆಲಿವರಿ	1183 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1210)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,000 (47,850)
ಬೆಳ್ಳಿ ಕೆ.ಜಿ 64,750 (64,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,068
ಇಂದಿನ ಅಂತ್ಯ	18,044
▼	25
ದಿನದ ಗರಿಷ್ಠ	17,983

ವಿನಿಮಯ ದರ

$ ಡಾಲರ್	74.02
£ ಪೌಂಡ್	100.65
€ ಯುರೊ	85.82
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1390 (1395)
ಸೋಯಾ (ರಿಫೈನ್ಡ್)	₹1245 (1255)
ಸೂರ್ಯಕಾಂತಿ (ರಿಫೈನ್ಡ್)	₹1300 (1310)
ಪಾಮೋಲಿನ್	₹1185 (1190)

‘ದೇಶಿ ಕಂಪನಿಯ ಮೊದಲ 5ಜಿ ಸ್ಮಾರ್ಟ್‌ಫೋನ್’

ನವದೆಹಲಿ (ಪಿಟಿಐ): ದೇಶದ ಗ್ರಾಹಕರಿಗೆ 5ಜಿ ಸ್ಮಾರ್ಟ್‌ಫೋನ್ ಬಿಡುಗಡೆ ಮಾಡಿರುವ ಭಾರತದ ಮೊದಲ ಕಂಪನಿಯಾಗಿ ಲಾವಾ ಇಂಟರ್‌ನ್ಯಾಷನಲ್ ಹೊರಹೊಮ್ಮಿದೆ.

‘ಅಗ್ನಿ’ ಬ್ರ್ಯಾಂಡ್ ಹೆಸರಿನಲ್ಲಿ ಬಿಡುಗಡೆ ಮಾಡಿರುವ ಸ್ಮಾರ್ಟ್‌ಫೋನ್ ಅನ್ನು ಕಂಪನಿಯು ಭಾರತದಲ್ಲಿಯೇ ಅಭಿವೃದ್ಧಿಪಡಿಸಿದ್ದು, ಉತ್ತರ ಪ್ರದೇಶದ ನೊಯಿಡಾದಲ್ಲಿ ಇರುವ ಘಟಕದಲ್ಲಿ ತಯಾರಿಸಲಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ, ಮೀಡಿಯಾಟೆಕ್ ಡೈಮೆನ್ಸಿಟಿ 810 ಚಿಪ್‌ಸೆಟ್ ಹೊಂದಿರುವ 5ಜಿ ಸ್ಮಾರ್ಟ್‌ಫೋನ್ ಬಿಡುಗಡೆ ಮಾಡುತ್ತಿರುವ ಎರಡನೇ ಕಂಪನಿ ಲಾವಾ ಆಗಿದೆ ಎಂದು ಕಂಪನಿಯ ಅಧ್ಯಕ್ಷ ಸುನಿಲ್ ರೈನಾ ಹೇಳಿದ್ದಾರೆ.

ಅಗ್ನಿ ಸ್ಮಾರ್ಟ್‌ಫೋನ್ ಬೆಲೆ ₹ 19,999. ಸದ್ಯ ಭಾರತದ ಮಾರುಕಟ್ಟೆಯಲ್ಲಿ ಇರುವ ಚೀನಾ ಬ್ರ್ಯಾಂಡ್‌ಗಳಿಗೆ ಹೋಲಿಸಿದರೆ ಈ ಬೆಲೆಯು ಸ್ಪರ್ಧಾತ್ಮಕವಾಗಿ ಇದೆ ಎಂದು ಅವರು ಹೇಳಿದ್ದಾರೆ.

ಲಾವಾ ಅಗ್ನಿ 5ಜಿ ಸ್ಮಾರ್ಟ್‌ಫೋನ್ ರಿಟೇಲ್ ಮಳಿಗೆಗಳಲ್ಲಿ ಮತ್ತು ಅಮೆಜಾನ್, ಫ್ಲಿಪ್‌ಕಾರ್ಟ್‌ನಲ್ಲಿ ನವೆಂಬರ್ 18ರಿಂದ ಖರೀದಿಗೆ ಲಭ್ಯವಿರಲಿದೆ. ಅಮೆಜಾನ್, ಲಾವಾ ಇ-ಸ್ಟೋರ್‌ನಲ್ಲಿ ನವೆಂಬರ್ 17ರವರೆಗೆ ಮುಂಗಡ ಬುಕಿಂಗ್‌ಗೆ ಅವಕಾಶ ನೀಡಲಾಗಿದೆ. ₹ 500 ಪಾವತಿಸಿ ಬುಕ್ ಮಾಡಬಹುದು ಎಂದು ಕಂಪನಿಯು ತಿಳಿಸಿದೆ.

‘ಇ.ವಿ’ ಬಳಕೆ ಉತ್ತೇಜಿಸಲು ತೈಲ ಕಂಪನಿಗಳ ಕ್ರಮ

5 ವರ್ಷಗಳಲ್ಲಿ 22 ಸಾವಿರ ಚಾರ್ಜಿಂಗ್ ಕೇಂದ್ರ

ನವದೆಹಲಿ (ಪಿಟಿಐ): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಕಂಪನಿಯು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗೆ ಮುಂದಿನ ಐದು ವರ್ಷಗಳಲ್ಲಿ ಒಟ್ಟು ಏಳು ಸಾವಿರ ಕೇಂದ್ರಗಳನ್ನು ಆರಂಭಿಸಲಿದೆ. ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಕಂಪನಿಯು ಒಟ್ಟು ಐದು ಸಾವಿರ ಚಾರ್ಜಿಂಗ್ ಕೇಂದ್ರ ಆರಂಭಿಸುವ ಚಿಂತನೆ ಹೊಂದಿದೆ.

ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಮುಂದಿನ ಮೂರು ವರ್ಷಗಳಲ್ಲಿ ಒಟ್ಟು ಹತ್ತು ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸುವುದಾಗಿ ಈಗಾಗಲೇ ಹೇಳಿದೆ. ಇದರಿಂದಾಗಿ, ತೈಲ ಮಾರಾಟ ಕಂಪನಿಗಳು ಮುಂದಿನ ಐದು ವರ್ಷಗಳಲ್ಲಿ ಒಟ್ಟು 22 ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲಿವೆ.

ಮುಂದಿನ ವರ್ಷದಲ್ಲಿ ಐಒಸಿ ಎರಡು ಸಾವಿರ ಕೇಂದ್ರಗಳನ್ನು, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ತಲಾ ಒಂದು ಸಾವಿರ ಕೇಂದ್ರಗಳನ್ನು ಆರಂಭಿಸುವ ಯೋಜನೆ ಹೊಂದಿವೆ ಎಂದು ಕೇಂದ್ರ ಇಂಧನ ಸಚಿವ ಹರದೀಪ್ ಸಿಂಗ್ ಪುರಿ ಅವರು ಮಂಗಳವಾರ ತಿಳಿಸಿದ್ದಾರೆ.



ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಬಿಪಿ ಜೊತೆ ಪಾಲುದಾರಿಕೆಯಲ್ಲಿ ಮಹಾರಾಷ್ಟ್ರದಲ್ಲಿ ತೈಲೋತ್ಪನ್ನ ಮಾರಾಟ ಕೇಂದ್ರ ಆರಂಭಿಸಿದ್ದು, ಅದು ಕೂಡ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಕೇಂದ್ರ ಹಾಗೂ ಬ್ಯಾಟರಿ ಸ್ವಾಪಿಂಗ್ ಕೇಂದ್ರ ಆರಂಭಿಸಲಿದೆ. ಬಿಪಿಸಿಎಲ್ ಸ್ಥಾಪಿಸಲಿರುವ ಚಾರ್ಜಿಂಗ್ ಕೇಂದ್ರಗಳಿಗೆ ‘ಎನರ್ಜಿ ಸ್ಟೇಷನ್’ ಎಂಬ ಹೆಸರು ಇಡಲಾಗಿದೆ.

ಹಸಿರುಮನೆ ಅನಿಲ ಹೊರಸೂಸುವಿಕೆ ಪ್ರಮಾಣ ಹಾಗೂ ಈ ಅನಿಲಗಳನ್ನು ವಾತಾವರಣದಿಂದ ತೆಗೆಯುವ ಪ್ರಮಾಣವನ್ನು ಭಾರತವು 2070ರ ವೇಳೆಗೆ ಸಮತೋಲನಕ್ಕೆ ತರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ನಡೆದ ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ ಪ್ರಕಟಿಸಿದ್ದಾರೆ.

ದೇಶದ ಆರ್ಥಿಕ ಚಟುವಟಿಕೆಗಳಿಂದ ಇಂಗಾಲದ ಹೊರಸೂಸುವಿಕೆಯನ್ನು 2030ರ ವೇಳೆಗೆ ಶೇಕಡ 45ರಷ್ಟು ತಗ್ಗಿಸುವ ಉದ್ದೇಶವನ್ನು ಕೂಡ ಕೇಂದ್ರ ಹೊಂದಿವೆ.

‘ಪ್ರಧಾನಿಯವರ ಘೋಷಣೆಗೆ ಅನುಸಾರವಾಗಿ, ದೇಶದ ತೈಲ ಮಾರಾಟ ಕಂಪನಿಗಳು 22 ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಪ್ರಮುಖ ನಗರಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಭಿಯಾನದೋಪಾದಿಯಲ್ಲಿ ಆರಂಭಿಸಲಿವೆ’ ಎಂದು ಪುರಿ ಅವರು ಟ್ವೀಟ್ ಮಾಡಿದ್ದಾರೆ.

ಮುಖ್ಯಾಂಶಗಳು

- ಎಚ್‌ಪಿಸಿಎಲ್, ಬಿಪಿಸಿಎಲ್‌ನಿಂದ 12 ಸಾವಿರ ಕೇಂದ್ರ
- ರಿಲಯನ್ಸ್‌ನಿಂದಲೂ ಚಾರ್ಜಿಂಗ್ ಸೌಲಭ್ಯ
- ಪ್ರಮುಖ ನಗರಗಳು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ಸೌಲಭ್ಯ

ಚಿರಸ್ಮರಣೆ - 25 ವರ್ಷಗಳು



ಸ್ವಾಮಿ ಎಚ್.ಎಂ
ಡಿ.ಸಿ.ಐ.ಇ - ಐ ಬಿ
ಸದಾ ನಿಮ್ಮನ್ನು ಸ್ಮರಿಸುವ - ಅನುಪಮಾ ಸ್ವಾಮಿ ಮತ್ತು ಕುಟುಂಬ

ಸಂಕ್ಷಿಪ್ತ ಸುದ್ದಿ

ಮಹೀಂದ್ರ ಲಾಭ 8 ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ತೆರಿಗೆ ನಂತರದ ಲಾಭವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 1,432 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 162 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಎಂಟು ಪಟ್ಟಿಗಿಂತ ತುಸು ಹೆಚ್ಚಾಗಿದೆ ಎಂದು ಕಂಪನಿಯು ತಿಳಿಸಿದೆ. ಕಂಪನಿಯ ವರಮಾನವು ₹ 11,590 ಕೋಟಿಯಿಂದ ₹ 13,305 ಕೋಟಿಗೆ, ಅಂದರೆ ಶೇಕಡ 15ರಷ್ಟು, ಏರಿಕೆ ಕಂಡಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಪೇಟಿಎಂ ಐಪಿಒ: ಶೇ 48ರಷ್ಟು ಷೇರುಗಳಿಗೆ ಬಿಡ್

ನವದೆಹಲಿ (ಪಿಟಿಐ): ಪೇಟಿಎಂ ಕಂಪನಿಯ ₹ 18,300 ಕೋಟಿ ಮೊತ್ತದ ಐಪಿಒಗೆ ಎರಡನೇ ದಿನದ ಅಂತ್ಯಕ್ಕೆ ಒಟ್ಟು ಶೇಕಡ 48ರಷ್ಟು ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.

ಷೇರು ವಿನಿಮಯ ಕೇಂದ್ರದಲ್ಲಿ ಇರುವ ಮಾಹಿತಿಯ ಪ್ರಕಾರ, ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್ ಲಿಮಿಟೆಡ್‌ನ 4.83 ಕೋಟಿ ಷೇರುಗಳಲ್ಲಿ 2.34 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದೆ.

ಸಣ್ಣ ಹೂಡಿಕೆದಾರರಿಗೆ 87.98 ಲಕ್ಷ ಷೇರುಗಳನ್ನು ಮೀಸಲಿಡಲಾಗಿದ್ದು, 1.08 ಷೇರುಗಳಿಗೆ ಅರ್ಜಿ ಸಲ್ಲಿಕೆ ಆಗಿದೆ.


ಡೈರಿ ಉದ್ಯಮ ಶೇ 11 ಬೆಳವಣಿಗೆ: ಐಸಿಆರ್‌ಎ

ಮುಂಬೈ (ಪಿಟಿಐ): ದೇಶದ ಡೈರಿ ಉದ್ಯಮವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡ 9ರಿಂದ ಶೇ 11ರಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ ಎಂದು ದೇಶಿ ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಆರ್ಥಿಕ ಚಟುವಟಿಕೆಗಳು ಚುರುಕು ಪಡೆಯುತ್ತಿರುವುದು, ಹಾಲು ಮತ್ತು ಹಾಲಿನ ಉತ್ಪನ್ನಗಳ ಬಳಕೆ ಹೆಚ್ಚುತ್ತಿರುವುದು, ನಗರೀಕರಣದ ಪರಿಣಾಮವಾಗಿ ಆಹಾರ ಬಳಕೆಯಲ್ಲಿ ಬದಲಾವಣೆಗಳು ಆಗುತ್ತಿರುವುದು ಈ ಬೆಳವಣಿಗೆಗೆ ಕಾರಣ ಎಂದು ಹೇಳಿದೆ.

ಹಾಲಿ ಹಣಕಾಸು ವರ್ಷದಲ್ಲಿ ದೇಶದಲ್ಲಿ ಹಾಲಿನ ಉತ್ಪಾದನೆಯು ಶೇಕಡ 5ರಿಂದ ಶೇ 6ರಷ್ಟು ಹೆಚ್ಚಳ ಆಗಲಿದೆ ಎಂದು ಅಂದಾಜು ಮಾಡಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಚನ್ನಬಸಪ್ಪ, ಹಾನಗಲ್

● **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ನೌಕರ. ವಯಸ್ಸು 66 ವರ್ಷ. ತಿಂಗಳ ಪಿಂಚಣಿ ₹ 42 ಸಾವಿರ. ಬ್ಯಾಂಕ್ ಠೇವಣಿಯಿಂದ ವಾರ್ಷಿಕ ₹ 2.32 ಲಕ್ಷ ಬಡ್ಡಿ ಬರುತ್ತದೆ. ಸ್ವಂತ ಮನೆ ಇದೆ. ಮಕ್ಕಳಿಗೆ ಮದುವೆ ಆಗಿ ಬೇರೆ ಇದ್ದಾರೆ. ನನ್ನೊಡನೆ 30X40 ಅಳತೆಯ ಎರಡು ನಿವೇಶನಗಳು ಇವೆ. ಮಾರಾಟ ಮಾಡಿದರೆ ₹ 40 ಲಕ್ಷ ಬರಬಹುದು. ನಿವೇಶನಗಳನ್ನು ನಾನು 1996ರಲ್ಲಿ ₹ 2.5 ಲಕ್ಷಕ್ಕೆ ಕೊಂಡಿದ್ದೆ. ಬಂಡವಾಳ ವೃದ್ಧಿ ತೆರಿಗೆ ವಿಚಾರದಲ್ಲಿ ವಿವರವಾಗಿ ತಿಳಿಸಿ. ಸರ್ಕಾರಿ ಬಾಂಡ್‌ಗಳಲ್ಲಿ ತೊಡಗಿಸಿದರೆ ವಾಪಾಸು ಪಡೆಯುವಾಗ ಬರುವ ತೆರಿಗೆ ಬಗ್ಗೆಯೂ ತಿಳಿಸಿ.

ಉತ್ತರ: ನಿಮ್ಮ ಪಿಂಚಣಿ ಹಾಗೂ ಠೇವಣಿ ಮೇಲಿನ ಬಡ್ಡಿ ಪರಿಗಣಿಸಿದಾಗ ನೀವು ಆದಾಯ ತೆರಿಗೆಗೆ ಒಳಪಡುತ್ತೀರಿ. ಪ್ರತೀ ವರ್ಷ ಐ.ಟಿ. ವಿವರ ಸಲ್ಲಿಸುತ್ತಿದ್ದೀರಿ ಎಂದು ಭಾವಿಸುವೆ. ಇನ್ನು ಬಂಡವಾಳ ವೃದ್ಧಿ ತೆರಿಗೆ ವಿಚಾರ. ನೀವು 1996ರಲ್ಲಿ ಕೊಂಡ ನಿವೇಶನದ ಬೆಲೆ 2001ರ ಏಪ್ರಿಲ್ 1ರಲ್ಲಿ ಸರ್ಕಾರ ನಿರ್ಧರಿಸಿದ ಬೆಲೆ (ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕೇಳಿ ತಿಳಿಯಿರಿ) ಹಾಗೂ ಅಂದಿನಿಂದ ಇಂದಿನವರೆಗಿನ ಹಣದುಬ್ಬರದ ಮೌಲ್ಯ ಕಂಡುಹಿಡಿದು, ಈಗ ಮಾರಾಟ ಮಾಡುವ ಮೊತ್ತದಿಂದ ಕಳೆದು ಎನ್‌ಎಚ್‌ಎಐ/ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸಬಹುದು ಅಥವಾ ಈ ಮೊತ್ತಕ್ಕೆ ತೆರಿಗೆ ಕೊಡಬಹುದು. 2001ರ ಏಪ್ರಿಲ್ 1ರ ಬೆಲೆ ಹಾಗೂ ಹಣದುಬ್ಬರದಿಂದಾಗಿ ಏರಿರುವ ಬೆಲೆ ಲೆಕ್ಕಾ ಹಾಕಿದಾಗ ಈ ಮೊತ್ತಕ್ಕೆ ತೆರಿಗೆ ಇರುವುದಿಲ್ಲ. ನೀವು ಸರ್ಕಾರಿ ಬಾಂಡ್‌ಗಳಲ್ಲಿ ಹಣ ತೊಡಗಿಸಿದರೆ ಅದರ ಅವಧಿ 5 ವರ್ಷ. ವಾಪಾಸು ಪಡೆಯುವಾಗ ತೆರಿಗೆ ಇರುವುದಿಲ್ಲ. ಆದರೆ ಈ ಹೂಡಿಕೆಯಿಂದ ಬರುವ ಬಡ್ಡಿಯು ತೆರಿಗೆ ರಹಿತವಾಗಿಲ್ಲ. ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕರೆ ಮಾಡಿ.

ನಾಗಲಕ್ಷ್ಮಿ, ಮೈಸೂರು

● **ಪ್ರಶ್ನೆ:** ಎಸ್‌ಐಪಿ-ಡೀಮ್ಯಾಟ್, ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆ ವಿಚಾರದಲ್ಲಿ ನನಗೆ ಅನುಭವ ಇಲ್ಲ. ನಾನು ಆನ್‌ಲೈನ್ ಟ್ರೇಡಿಂಗ್ ಮಾಡಬಹುದೇ? ಮಾರ್ಗದರ್ಶನ ಮಾಡಿ. ನಾನು ಗೃಹಿಣಿ. ವಯಸ್ಸು 42 ವರ್ಷ. ಸುಮಾರು ₹ 1 ಲಕ್ಷದಿಂದ ₹ 2 ಲಕ್ಷದವರೆಗೆ ಇಂತಹ ಹೂಡಿಕೆಗಳಲ್ಲಿ ತೊಡಗಿಸಬೇಕೆಂದಿದ್ದೇನೆ. ನಾನು ಬಹಳ ವರ್ಷಗಳಿಂದ ನಿಮ್ಮ ಅಂಕಣ ಓದುತ್ತಿದ್ದೇನೆ.

ಉತ್ತರ: ಎಸ್‌ಐಪಿ ಎಂದರೆ ಸಿಸ್ಟಮ್ಯಾಟಿಕ್ ಇನ್‌ವೆಸ್ಟ್‌ಮೆಂಟ್ ಪ್ಲಾನ್. ಈ ಹೂಡಿಕೆ ಮ್ಯೂಚುವಲ್ ಫಂಡ್ ಕಂಪನಿಗಳ ಮೂಲಕ ಮಾಡಬಹುದು. ಆರ್.ಡಿ. ರೀತಿಯಲ್ಲಿ ನಿರ್ದಿಷ್ಟ ಮೊತ್ತವನ್ನು ಪ್ರತಿ ತಿಂಗಳೂ ಹೂಡಿಕೆ ಮಾಡಬಹುದು. ನೀವು ಎಸ್‌ಐಪಿನಲ್ಲಿ ತಿಂಗಳಿಗೆ ₹ 3 ಸಾವಿರ ಹೂಡಿಕೆ ಮಾಡಿ. ಮ್ಯೂಚುವಲ್ ಫಂಡ್, ಷೇರುಮಾರುಕಟ್ಟೆಯ ಇನ್ನೊಂದು ಮುಖ. ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸಲಾಗದ ವ್ಯಕ್ತಿಗಳು ಮ್ಯೂಚುವಲ್ ಫಂಡ್ ಮೂಲಕ ತೊಡಗಿಸಬಹುದು. ಷೇರುಮಾರುಕಟ್ಟೆ ಪ್ರವೇಶಿಸುವ ಮುನ್ನ ಡೀಮ್ಯಾಟ್ ಖಾತೆ ತೆರೆಯಬೇಕು. ಇದಕ್ಕೆ ಷೇರು ಬ್ರೋಕರ್ ನಿಮಗೆ ಸಹಾಯ ಮಾಡುತ್ತಾರೆ. ಒಂದೇ ಒಂದು ಷೇರನ್ನೂ ಕೊಳ್ಳಬಹುದು ಹಾಗೂ ಮಾರಾಟ ಮಾಡಬಹುದು. ಬಿಎಸ್‌ಇ ಹಾಗೂ ಎನ್‌ಎಸ್‌ಇ ಮಾರುಕಟ್ಟೆಗಳಲ್ಲಿ ವ್ಯವಹರಿಸಬೇಕು. ನೀವು ಬ್ಲೂಚಿಪ್ ಕಂಪನಿ ಷೇರುಗಳನ್ನು ಸೆನ್ಸೆಕ್ಸ್ ಬಹಳ ಕೆಳಗೆ ಬಂದಾಗ ಕೊಳ್ಳಿರಿ. ಇಂತಹ ಹೂಡಿಕೆಗಳಲ್ಲಿ ಏರುಪೇರು ಸಹಜ. ಆದರೆ ಸಹನೆಯಿಂದ ಕಾದು ವ್ಯವಹರಿಸಿದರೆ ಲಾಭ ಗಳಿಸುವ ಸಾಧ್ಯತೆ ಇದೆ. ಟ್ರೇಡಿಂಗ್ ಮಾಡುವುದಾದರೆ ಸರಿಯಾದ ಬ್ರೋಕರಿಂಗ್ ಕಚೇರಿಯಲ್ಲಿ ತರಬೇತಿ ಪಡೆಯಿರಿ.

ಮಾಧವಿ, ಚೆನ್ನೈ

● **ಪ್ರಶ್ನೆ:** ನಾನು ಮೂಲತಃ ಶಿವಮೊಗ್ಗದವಳು. ಐ.ಟಿ. ಕಂಪನಿಯಲ್ಲಿ ಕೆಲಸ. ತಿಂಗಳ ಸಂಬಳ ₹ 1.27 ಲಕ್ಷ. ಕಡಿತ; ವಿಮೆ ₹ 5 ಸಾವಿರ. ಪಿ.ಟಿ. ₹ 200. ಖರ್ಚು ₹ 15,000. ಅವಿವಾಹಿತೆ. ವಯಸ್ಸು 24. ತೆರಿಗೆ ಒಟ್ಟಿನಲ್ಲಿ ಮುರಿಯುತ್ತಾರೆ. ಕಂಪನಿ ಸೇರಿ ಎರಡು ವರ್ಷ ಆಗಿದೆ. ತಿಂಗಳಿಗೆ ₹ 1 ಲಕ್ಷ ಉಳಿಸಬಹುದು. ಆದರೆ ಹಣ ಕೈಯಲ್ಲಿ ನಿಲ್ಲುತ್ತಿಲ್ಲ. ನಾನು ಸುಮಾರು ₹ 10 ಲಕ್ಷ ಎಚ್‌ಡಿಎಫ್‌ಸಿ ಎಸ್.ಬಿ. ಖಾತೆಯಲ್ಲಿ ಇಟ್ಟಿದ್ದೇನೆ. ತಮ್ಮನ್ನು ಭೇಟಿ ಆಗಬಹುದೇ ತಿಳಿಸಿ. ಉತ್ತಮ ಹೂಡಿಕೆ, ತೆರಿಗೆ ವಿನಾಯಿತಿ ಪಡೆಯುವ ವಿಧಾನ ತಿಳಿಸಿ.

ಉತ್ತರ: ನೀವು ತೆರಿಗೆ ಉಳಿಸಲು ಸೆಕ್ಷನ್ 80ಸಿ ಆಧಾರದ ಮೇಲೆ ಪಿಪಿಎಫ್‌ನಲ್ಲಿ ವಾರ್ಷಿಕ ₹ 90 ಸಾವಿರ ತುಂಬಿರಿ. ವಿಮೆ ಹಾಗೂ ಪಿಪಿಎಫ್‌ನಿಂದ ₹ 1.50 ಲಕ್ಷ ಒಟ್ಟು ಆದಾಯದಿಂದ ಕಳೆದು ತೆರಿಗೆ ಉಳಿಸಬಹುದು. ಅದೇ ರೀತಿ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ವಾರ್ಷಿಕ ₹ 50 ಸಾವಿರ ಹೂಡಿಕೆ ಮಾಡಿ, 80ಸಿ ಹೊರತುಪಡಿಸಿ ವಿನಾಯಿತಿ ಪಡೆಯಬಹುದು. ಮದುವೆ ತನಕ ವಾರ್ಷಿಕ ₹ 1 ಲಕ್ಷ ಬೆಲೆಯ ಬಂಗಾರ ಪ್ರತೀ ವರ್ಷ ಕೊಳ್ಳಿರಿ. ತೆರಿಗೆಗೋಸ್ಕರ ₹ 15 ಸಾವಿರ ಆರ್.ಡಿಯನ್ನು ಒಂದು ವರ್ಷಕ್ಕೆ ಮಾಡಿ. ಡೆಟ್ ಆಧಾರಿತ ಎಸ್‌ಐಪಿನಲ್ಲಿ ಪ್ರತೀ ತಿಂಗಳು ₹ 15 ಸಾವಿರ ಹೂಡಿಕೆ ಮಾಡಿ. ನಿಮ್ಮ ತಂದೆ ತಾಯಿ ಬಳಿ ವಿಚಾರಿಸಿ ಉತ್ತಮ ನಿವೇಶನ ಸಿಗುವಲ್ಲಿ ಶಿವಮೊಗ್ಗದಲ್ಲಿ ಖರೀದಿಸಿ. ಹೀಗೆ ಮಾಡುವಾಗ ನೀವು ಕನಿಷ್ಠ ₹ 30 ಲಕ್ಷ ಸಾಲ ಮಾಡಬೇಕಾದೀತು, ಹಾಗೂ ಇಎಂಐ ₹ 40 ಸಾವಿರ ತಿಂಗಳಿಗೆ ತುಂಬಬೇಕಾದೀತು. ಆದರೆ ಸ್ಥಿರ ಆಸ್ತಿಗಿಂತ ಮಿಗಿಲಾದ ಹೂಡಿಕೆ ಮತ್ತೊಂದಿಲ್ಲ. ಉಳಿಯುವ ಹಣದಲ್ಲಿ ಅತೀ ಅವಶ್ಯಕ್ಕೆಂದು ಸ್ವಲ್ಪ ತೆಗೆದಿಟ್ಟು ಉಳಿದ ಹಣ ಮೂರು ವರ್ಷಗಳ ಅವಧಿಗೆ ಆರ್.ಡಿ. ಮಾಡಿ. ಅವಶ್ಯಕತೆ ಇದ್ದರೆ ಕರೆ ಮಾಡಿ, ಭೇಟಿ ಮಾಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ವೇತನರಹಿತ ರಜೆ: ಯುನೈಟೆಡ್ ಏರ್‌ಲೈನ್ಸ್ ಪರ ತೀರ್ಪು

ವಾಷಿಂಗ್ಟನ್ (ಪಿಟಿಐ): ವೈದ್ಯಕೀಯ ಅಥವಾ ಧರ್ಮದ ಕಾರಣ ನೀಡಿ ಕೋವಿಡ್ ಲಸಿಕೆ ಪಡೆಯಲು ನಿರಾಕರಿಸುವ ನೌಕರರಿಗೆ ವೇತನ ರಹಿತ ರಜೆ ನೀಡುವ ಯುನೈಟೆಡ್ ಏರ್‌ಲೈನ್ಸ್ ಕಂಪನಿಯ ನಿರ್ಧಾರವನ್ನು ನ್ಯಾಯಾಲಯ ಎತ್ತಿ ಹಿಡಿದಿದೆ. ಲಸಿಕೆ ಪಡೆಯುವುದನ್ನು ಕಡ್ಡಾಯಗೊಳಿಸಿದ್ದ ಜೋ ಬೈಡನ್ ಸರ್ಕಾರದ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು ಈ ತೀರ್ಪು ನೀಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕುಂದಾಪುರ	
ಹಳೆಚಾಲಿ	46000-49500
ಹೊಸಚಾಲಿ	30000-37000
ಸಿದ್ದಾಪುರ	
ಬಿಳಿಗೋಟು	33899-40208
ಚಾಲಿ	43499-47309
ಕೋಕ	27689-38269
ಕೆಂಪುಗೋಟು	27089-34689
ರಾಶಿ	44599-46959
ತಟ್ಟಿಬೆಟ್ಟೆ	33199-42699
ಶಿರಸಿ	
ಬೆಟ್ಟೆ	39199-46099
ಬಿಳಿಗೋಟು	18019-42976
ಚಾಲಿ	38609-47501
ರಾಶಿ	45599-48309
ಯಲ್ಲಾಪುರ	
ಬಿಳಿಗೋಟು	32362-40744
ಚಾಲಿ	41001-47599
ಕೋಕ	32362-40744
ಕೆಂಪುಗೋಟು	28799-33125
ರಾಶಿ	45894-51930
ತಟ್ಟಿಬೆಟ್ಟೆ	36650-44069
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	45166-50490
ಗೊರಬಲು	17109-39859
ರಾಶಿ	44699-46999
ಸರಕು	50019-72066
ಸಾಗರ	
ಬಿಳಿಗೋಟು	36909-36909
ಚಾಲಿ	37199-42889
ಕೋಕ	36899-36899
ಕೆಂಪುಗೋಟು	30299-30299
ರಾಶಿ	42009-45899
ಸಿಪ್ಪೆಗೋಟು	19250-25233
ರಾಮನಗರ ರೇಷ್ಮೆ	
ಮಿಶ್ರತಳಿ	321-489
ದ್ವಿತಳಿ	356-588
ಮುದ್ರೆಮನೆ ಕಾಫಿ (50 ಕೆ.ಜಿಗೆ)	
ಎಪಿ	13100
ಎಸಿ	5790
ಆರ್‌ಪಿ	6075
ಆರ್‌ಸಿ	3535

ಪಾಕಿಸ್ತಾನಕ್ಕೆ ಅತ್ಯಾಧುನಿಕ ಯುದ್ಧನೌಕೆ ನೀಡಿದ ಚೀನಾ

ಬೀಜಿಂಗ್ (ಪಿಟಿಐ): ಚೀನಾ ಅತಿದೊಡ್ಡ ಮತ್ತು ಅತ್ಯಾಧುನಿಕ ಯುದ್ಧನೌಕೆಯನ್ನು ಪಾಕಿಸ್ತಾನಕ್ಕೆ ನೀಡಿದ್ದು ಇದರಿಂದಾಗಿ ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ಕಣ್ಣಿಡಲು ನೌಕಾಪಡೆಗೆ ಹೆಚ್ಚಿನ ಅನುಕೂಲವಾಗಲಿದೆ.

ಚೀನಾ ಸ್ಟೇಟ್ ಶಿಪ್ ಬಿಲ್ಡಿಂಗ್ ಕಾರ್ಪೊರೇಷನ್ ಲಿಮಿಟೆಡ್ ಈ ಯುದ್ಧನೌಕೆಯನ್ನು ವಿನ್ಯಾಸಗೊಳಿಸಿದೆ. ಇದನ್ನು ಶಾಂಘೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪಾಕಿಸ್ತಾನದ ನೌಕಾಪಡೆಗೆ ಹಸ್ತಾಂತರಿಸಲಾಯಿತು ಎಂದು ಹೇಳಿಕೆಯೊಂದರಲ್ಲಿ ತಿಳಿಸಲಾಗಿದೆ.

ಈ ಯುದ್ಧನೌಕೆಗೆ ಪಿಎನ್‌ಎಸ್ ತುಘ್ರಿಲ್ ಎಂದು ಹೆಸರಿಡಲಾಗಿದೆ ಎಂದು ‘ಗ್ಲೋಬಲ್ ಟೈಮ್ಸ್’ ಮಂಗಳವಾರ ವರದಿ ಮಾಡಿದೆ.

ಸಮುದ್ರ ಪ್ರದೇಶದಲ್ಲಿ ಭದ್ರತೆಯನ್ನು ಖಚಿತಪಡಿಸಲು, ಸಮುದ್ರದಲ್ಲಿನ ಸವಾಲುಗಳನ್ನು ಎದುರಿಸಲು ತುಘ್ರಿಲ್ ಸಹಾಯಕವಾಗಿದ್ದು ಪಾಕಿಸ್ತಾನದ ನೌಕಾಪಡೆಯ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹಿಂದೂ ಮಹಾಸಾಗರ ಪ್ರದೇಶದಲ್ಲಿ ಶಾಂತಿ ಸೌಹಾರ್ದ ಕಾಪಾಡಲು ಸಹಕಾರಿಯಾಗಲಿದೆ ಎಂದು ಚೀನಾದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಮೊಯಿನ್ ಉಲ್ ಹಕ್ ಹೇಳಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ



ಟಿ20 ವಿಶ್ವಕಪ್ ಸೆಮಿಫೈನಲ್ ಇಂದು: ನ್ಯೂಜಿಲೆಂಡ್–ಇಂಗ್ಲೆಂಡ್ ಹಣಾಹಣಿ

ಕೇನ್–ಮಾರ್ಗನ್ ಮುಖಾಮುಖಿ

ಅಬುಧಾಬಿ (ಪಿಟಿಐ): ಶಾಂತಚಿತ್ತದ ನಾಯಕ ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡಕ್ಕೆ 'ಗಾಯದ ಸಮಸ್ಯೆ'ಯಿಂದ ಬಳಲಿರುವ ಇಂಗ್ಲೆಂಡ್ ತಂಡವು ಬುಧವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಸವಾಲೊಡ್ಡಲಿದೆ.

ಟೂರ್ನಿಯ ಆರಂಭಕ್ಕೂ ಮುನ್ನವೇ ಪ್ರಶಸ್ತಿ ಜಯಿಸುವ ನೆಚ್ಚಿನ ತಂಡವಾಗಿ ಬಿಂಬಿತವಾಗಿರುವ ಇಂಗ್ಲೆಂಡ್ ತಂಡದ ಆಟಗಾರರಿಗೆ ಗಾಯದ ಸಮಸ್ಯೆ ಬೆನ್ನು ಹತ್ತಿದೆ. ಆದರೂ ಸೂಪರ್ 12 ರ ಹಂತದ ಮೊದಲ ಗುಂಪಿನಲ್ಲಿ ನಾಲ್ಕು ಪಂದ್ಯಗಳಲ್ಲಿ ಗೆದ್ದು ಸೆಮಿಫೈನಲ್ ಪ್ರವೇಶಿಸಿದೆ. ಗುಂಪಿನ ಐದನೇ ಪಂದ್ಯದಲ್ಲಿ ಇಂಗ್ಲೆಂಡ್ ದಕ್ಷಿಣ ಆಫ್ರಿಕಾ ಎದುರು ಸೋತಿತ್ತು. ಉತ್ತಮ ಲಯದಲ್ಲಿದ್ದ ಬ್ಯಾಟ್ಸ್‌ಮನ್ ಜೇಸನ್ ರಾಯ್ ಮೀನಖಂಡದ ಗಾಯದಿಂದಾಗಿ ಟೂರ್ನಿಯಿಂದ ಹೊರನಡೆದಿದ್ದಾರೆ. ಇದರಿಂದಾಗಿ ಜಾಸ್ ಬಟ್ಲರ್ ಅವರೊಂದಿಗೆ ಇನಿಂಗ್ಸ್ ಆರಂಭಿಸಲು ಜಾನಿ ಬೆಸ್ಟೊಗೆ ಅವಕಾಶ ಸಿಗಬಹುದು.

ಬೌಲರ್ ಟೈಮಲ್ ಮಿಲ್ಸ್ ಕೂಡ ಗಾಯಗೊಂಡು ಹೊರನಡೆದಿದ್ದಾರೆ. ಆದ್ದರಿಂದ ಬೌಲಿಂಗ್ ವಿಭಾಗದಲ್ಲಿ ಚಿಂತೆ ಕಾಡುತ್ತಿದೆ. ಮಾರ್ಕ್ ವುಡ್ ವೇಗದ ಎಸೆತಗಳನ್ನು ಹಾಕಬಲ್ಲರು. ಆದರೆ, ಮಿಲ್ಸ್ ಅವರಂತೆ ವೈವಿಧ್ಯತೆ ಇಲ್ಲ. ದಕ್ಷಿಣ ಆಫ್ರಿಕಾ ಎದುರು ವುಡ್ಸ್ ದುಬಾರಿಯಾಗಿದ್ದರು. ಆದ್ದರಿಂದ ಸ್ಪಿನ್ನರ್ ಮೋಯಿನ್ ಅಲಿ ಮತ್ತು ಆದಿಲ್ ರಶೀದ್ ಅವರ ಮೇಲೆ ಹೆಚ್ಚಿನ ಹೊರೆ ಬೀಳಲಿದೆ. 2019ರ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ನ್ಯೂಜಿಲೆಂಡ್ ಮತ್ತು ಇಂಗ್ಲೆಂಡ್ ಮುಖಾಮುಖಿಯಾಗಿದ್ದವು.

ರೋಚಕ ಹಣಾಹಣಿಯಲ್ಲಿ ಏಯಾನ್ ಮಾರ್ಗನ್ ನಾಯಕತ್ವದ ಇಂಗ್ಲೆಂಡ್ ಗೆದ್ದಿತ್ತು.

ಆ ದಿನದ ಮುಯ್ಯಿ ತೀರಿಸಿಕೊಳ್ಳಲು ಕೇನ್ ವಿಲಿಯಮ್ಸನ್ ಬಳಗ ಸಿದ್ಧವಾಗಿದೆ. ಗುಂಪು ಹಂತದ ಮೊದಲ ಪಂದ್ಯದಲ್ಲಿ ಪಾಕ್ ವಿರುದ್ಧ ಸೋತಿದ್ದ ತಂಡವು ನಂತರ ನಿರಂತರವಾಗಿ ಗೆಲುವಿನ ಹಾದಿಯಲ್ಲಿದೆ. ಸ್ಥಿರವಾದ ಪ್ರದರ್ಶನದ ಮೂಲಕ ಆಟಗಾರರು ತಂಡವನ್ನು ಸೆಮಿಫೈನಲ್ ಹಂತಕ್ಕೆ ತಂದಿದ್ದಾರೆ.

ವೇಗಿಗಳಾದ ಟ್ರೆಂಟ್ ಬೌಲ್ಟ್, ಟಿಮ್ ಸೌಥಿ, ಸ್ಪಿನ್ನರ್ ಈಶ್ ಸೋಧಿ, ಮಿಚೆಲ್ ಸ್ಯಾಂಟನರ್ ಪಂದ್ಯ ಗೆಲ್ಲಿಸಿಕೊಡಬಲ್ಲ ಸಮರ್ಥರು. ಅನುಭವಿ ಆಟಗಾರ ಮಾರ್ಟಿನ್ ಗಪ್ಟಿಲ್ ಮತ್ತು ಡೆರಿಲ್ ಮಿಚೆಲ್ ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ಕೇನ್, ಡೆವೊನ್ ಕಾನ್ವೆ ಕೂಡ ಉತ್ತಮ ಲಯದಲ್ಲಿದ್ದಾರೆ. ಈ ಬಳಗವು ಇಂಗ್ಲೆಂಡ್‌ಗೆ ಕಠಿಣ ಪೈಪೋಟಿಯೊಡ್ಡುವ ಸಾಧ್ಯತೆಗಳು ಹೆಚ್ಚಿವೆ.

ಪಿಚ್ ಹೇಗಿದೆ?: ಅಬುಧಾಬಿಯ ಶೇಖ್ ಝಯೇದ್ ಕ್ರೀಡಾಂಗಣದ ಪಿಚ್ ಮೊದಲಿನಿಂದಲೂ ಬ್ಯಾಟ್ಸ್‌ಮನ್ ಸ್ನೇಹಿಯಾಗಿದೆ. ಅದರಿಂದಾಗಿ ಇಲ್ಲಿ ರನ್‌ಗಳ ಹೊಳೆ ಹರಿಯುವ ನಿರೀಕ್ಷೆ ಇದೆ.



ಏಯಾನ್ ಮಾರ್ಗನ್ / ಕೇನ್ ವಿಲಿಯಮ್ಸನ್

ತಂಡಗಳು

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಮೋಯಿನ್ ಅಲಿ, ಜಾನಿ ಬೆಸ್ಟೊ, ಸ್ಯಾಮ್ ಬಿಲಿಂಗ್ಸ್, ಜಾಸ್ ಬಟ್ಲರ್, ಕ್ರಿಸ್ ಜೋರ್ಡಾನ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಆದಿಲ್ ರಶೀದ್, ಜೇಮ್ಸ್ ವಿನ್ಸಿ, ಡೇವಿಡ್ ವಿಲಿ, ಕ್ರಿಸ್ ವೋಕ್ಸ್, ಮಾರ್ಕ್ ವುಡ್, ಟಾಮ್ ಕರನ್, ರೀಸ್ ಟಾಪ್ಲೆ.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಟಾಡ್ ಆಸ್ಲೆ, ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪಮನ್, ಡೇವನ್ ಕಾನ್ವೆ, ಮಾರ್ಟಿನ್ ಗಪ್ಟಿಲ್, ಕೈಲ್ ಜೆಮಿಸನ್, ಡೆರಿಲ್ ಮಿಚೆಲ್, ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಟಿಮ್ ಸೀಫರ್ಟ್, ಈಶ್ ಸೋಧಿ, ಟಿಮ್ ಸೌಥಿ, ಆ್ಯಡಂ ಮಿಲ್ನೆ.

ಪಂದ್ಯ ಆರಂಭ: ರಾತ್ರಿ *7.30*

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ

ಪಂದ್ಯ **20** | ರದ್ದು **1**

ಇಂಗ್ಲೆಂಡ್ ಜಯ	13
ನ್ಯೂಜಿಲೆಂಡ್ ಜಯ	7

ಭಾರತ–ಪಾಕ್ ಪಂದ್ಯ ವೀಕ್ಷಿಸಿದ 16.7 ಕೋಟಿ ಮಂದಿ: ದಾಖಲೆ

ಮುಂಬೈ(ಪಿಟಿಐ): ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯುತ್ತಿರುವ ಟ್ವೆಂಟಿ–20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯವನ್ನು ಜಗತ್ತಿನಾದ್ಯಂತ 16.7 ಕೋಟಿ ಜನರು ವೀಕ್ಷಿಸಿದ್ದಾರೆ.

ಇದು ನೂತನ ದಾಖಲೆ ಎಂದು ಅಧಿಕೃತ ಪ್ರಸಾರಕರಾದ ಸ್ಟಾರ್ ಸ್ಪೋರ್ಟ್ಸ್ ತಿಳಿಸಿದೆ.

2016ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ನಡೆದಿದ್ದ ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಸೆಮಿಫೈನಲ್ ಪಂದ್ಯವನ್ನು 13.6 ಕೋಟಿ ಜನ ವೀಕ್ಷಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.



ಬಾಬರ್ ಆಜಂ ಮತ್ತು ವಿರಾಟ್ ಕೊಹ್ಲಿ

'ಅಕ್ಟೋಬರ್ 24ರಂದು ನಡೆದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯವನ್ನು ನಮ್ಮ ನಿರೀಕ್ಷೆಯಂತೆ ಅಪಾರ ಸಂಖ್ಯೆಯಲ್ಲಿ ಪ್ರೇಕ್ಷಕರು ನೋಡಿದ್ದಾರೆ. ಇದು ಟಿ20 ಕ್ರಿಕೆಟ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಜನರು ನೋಡಿದ ಪಂದ್ಯವಾಗಿದೆ' ಎಂದು ಸ್ಟಾರ್ ಸ್ಪೋರ್ಟ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಆ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಗೆದ್ದಿತ್ತು.

ಟೂರ್ನಿಯ ಪಂದ್ಯಗಳನ್ನು ಹೋದ ವಾರದವರೆಗೆ ವೀಕ್ಷಿಸಿದವರ ಸಂಖ್ಯೆಯು ಅಂದಾಜು 23 ಕೋಟಿಗೂ ಹೆಚ್ಚಿದೆ.

'ಭಾರತ ತಂಡವು ಸೆಮಿಫೈನಲ್ ಪ್ರವೇಶಿಸದೇ ಟೂರ್ನಿಯಿಂದ ನಿರ್ಗಮಿಸಿದೆ. ಪಾಕ್ ಪಂದ್ಯದ ಎದುರಿನ ಸೋಲಿನಿಂದ ಅಭಿಮಾನಿಗಳಿಗೆ ಬೇಸರವಾಗಿರುವುದು ನಿಜ. ಆದರೆ, ಟೂರ್ನಿಯ ಪಂದ್ಯಗಳನ್ನು ವೀಕ್ಷಿಸುತ್ತಿರುವ ಜನರ ಸಂಖ್ಯೆಯನ್ನು ನೋಡಿದರೆ, ಕ್ರಿಕೆಟ್‌ನ ಆಕರ್ಷಣೆ ಮತ್ತು ಶಕ್ತಿಯ ಅರಿವಾಗುತ್ತದೆ' ಎಂದು ಸ್ಟಾರ್ ಸ್ಪೋರ್ಟ್ಸ್ ವಕ್ತಾರರು ತಿಳಿಸಿದ್ದಾರೆ.

ಭಾರತ ಡ್ರೆಸ್ಸಿಂಗ್ ರೂಮ್‌ನಲ್ಲಿ ಎಲ್ಲವೂ ಸರಿಯಿಲ್ಲ: ಮುಷ್ತಾಕ್

ಕರಾಚಿ (ಪಿಟಿಐ): ವಿರಾಟ್ ಕೊಹ್ಲಿ ಅವರು ಟಿ20 ಕ್ರಿಕೆಟ್ ತಂಡದ ನಾಯಕತ್ವ ಬಿಟ್ಟುಕೊಟ್ಟಿರುವುದನ್ನು ನೋಡಿದರೆ ಭಾರತ ತಂಡದ ಡ್ರೆಸ್ಸಿಂಗ್ ರೂಮ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಅನುಮಾನ ಮೂಡುತ್ತಿದೆ ಎಂದು ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಮುಷ್ತಾಕ್ ಅಹಮದ್ ಹೇಳಿದ್ದಾರೆ.

'ಒಬ್ಬ ಯಶಸ್ವಿ ನಾಯಕನು ತನ್ನ ಸ್ಥಾನವನ್ನು ಬಿಟ್ಟುಕೊಡುವುದಾಗಿ ಇದ್ದಕ್ಕಿದ್ದಂತೆ ನಿರ್ಧರಿಸಿರುವುದನ್ನು ನೋಡಿದರೆ ಇಂತಹ ಅನುಮಾನ ಕಾಡುತ್ತದೆ. ಭಾರತ ಕ್ರಿಕೆಟ್ ತಂಡದ ಡ್ರೆಸ್ಸಿಂಗ್ ಕೋಣೆಯಲ್ಲಿ ಎರಡು ಗುಂಪುಗಳಿರುವುದು ನನಗೆ ಕಾಣುತ್ತಿದೆ. ಅವು ಮುಂಬೈ ಮತ್ತು ದೆಹಲಿ ಗುಂಪುಗಳಾಗಿವೆ' ಎಂದು ಮುಷ್ತಾಕ್ ಹೇಳಿದ್ದಾರೆ.









ಪದ್ಮ ಪ್ರಶಸ್ತಿ ಪ್ರದಾನ....

ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಪದ್ಮಶ್ರೀ ಪುರಸ್ಕೃತ ಕ್ರೀಡಾಪಟುಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು. (ಎಡದಿಂದ) ಅಥ್ಲೀಟ್ ಸುಧಾ ಸಿಂಗ್, ಭಾರತ ಬ್ಯಾಸ್ಕೆಟ್‌ಬಾಲ್ ತಂಡದ ಮಾಜಿ ನಾಯಕಿ ಪಿ.ಅನಿತಾ, ಭಾರತ ಹಾಕಿ ತಂಡದ ಮಾಜಿ ನಾಯಕ, ಕರ್ನಾಟಕದ ಎಂ.ಪಿ.ಗಣೇಶ್ ಹಾಗೂ ಪ್ಯಾರಾ ಅಥ್ಲೀಟ್, ಕರ್ನಾಟಕದ ಕೆ.ವೈ. ವೆಂಕಟೇಶ್ ಪ್ರಶಸ್ತಿ ಸ್ವೀಕರಿಸಿದರು. ಪಿಟಿಐ ಚಿತ್ರಗಳು

ಆರ್‌ಸಿಬಿ ತಂಡಕ್ಕೆ ಸಂಜಯ್ ಮುಖ್ಯ ಕೋಚ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡಕ್ಕೆ ಸಂಜಯ್ ಬಾಂಗರ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

14ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಎರಡನೇ ಹಂತದಲ್ಲಿ ತಂಡದ ನಿರ್ದೇಶಕ ಮೈಕ್ ಹೇಸನ್ ಹಂಗಾಮಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಇದೀಗ ಹೇಸನ್ ಅವರು ನಿರ್ದೇಶಕರಾಗಿ ಮುಂದುವರಿಯುವರು.



ಸಂಜಯ್ ಬಾಂಗರ್

'ನವಪ್ರತಿಭೆಗಳನ್ನು ಪ್ರೋತ್ಸಾಹಿಸಿ ಬೆಳೆಸಲು ನಮ್ಮ ಫ್ರ್ಯಾಂಚೈಸಿಯು ಸದಾ ಬದ್ಧವಾಗಿದೆ. ಸಂಜಯ್ ಅವರು ಅನುಭವಿ ಮತ್ತು ಚಾಣಾಕ್ಷ ಕೋಚ್ ಆಗಿದ್ದಾರೆ. ಅವರು ಭಾರತ ತಂಡದ ಬ್ಯಾಟಿಂಗ್ ಕೋಚ್ ಆಗಿ ಉಪಯುಕ್ತ ಕಾಣಿಕೆ ನೀಡಿದವರು. ಹೋದ ಋತುವಿನಲ್ಲಿ ನಮ್ಮ ತಂಡಕ್ಕೂ ಅವರು ಬ್ಯಾಟಿಂಗ್ ಸಲಹೆಗಾರರಾಗಿದ್ದರು. ಅವರ ನೇಮಕದಿಂದ ತಂಡವು ಮತ್ತಷ್ಟು ಬಲಿಷ್ಠವಾಗಿ ಬೆಳೆಯಲಿದೆ' ಎಂದು ಫ್ರ್ಯಾಂಚೈಸಿಯ ಮುಖ್ಯಸ್ಥ ಪ್ರಥಮೇಶ್ ಮಿಶ್ರಾ ಹೇಳಿದ್ದಾರೆ.

ಆರ್‌ಸಿಬಿ ತಂಡವು 2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದಲೂ ಇದೆ. ತಾರಾವರ್ಚಸ್ಸಿನ ಹಲವು ಆಟಗಾರರು ಈ ತಂಡದಲ್ಲಿ ಆಡಿದ್ದಾರೆ. ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಈ ತಂಡವನ್ನು ಕಳೆದ ಎಂಟು ವರ್ಷಗಳಿಂದ ಮುನ್ನಡೆಸಿದ್ದಾರೆ. ಮುಂದಿನ ಋತುವಿನಿಂದ ನಾಯಕರಾಗಿರುವುದಿಲ್ಲ ಆದರೆ ಆಟಗಾರನಾಗಿ ಮುಂದುವರಿಯುವುದಾಗಿ ಕೊಹ್ಲಿ ಈಚೆಗೆ ಘೋಷಿಸಿದ್ದರು.

'ಈ ಸ್ಥಾನ ಲಭಿಸಿರುವ ದೊಡ್ಡ ಗೌರವ ಮತ್ತು ಉತ್ತಮ ಅವಕಾಶವಾಗಿದೆ. ಅಮೋಘ ಪ್ರತಿಭಾನ್ವಿತ ಆಟಗಾರರು ಈ ತಂಡದಲ್ಲಿದ್ದಾರೆ. ಈ ತಂಡವನ್ನು ಇನ್ನಷ್ಟು ಉನ್ನತ ಸಾಧನೆಯತ್ತ ಕೊಂಡೊಯ್ಯಲು ಉತ್ಸುಕನಾಗಿದ್ದೇನೆ' ಎಂದು ಸಂಜಯ್ ಹೇಳಿದ್ದಾರೆ.

ಶೂಟಿಂಗ್: ರಾಹಿಗೆ ಬೆಳ್ಳಿ

ರೋಕ್ಲಾ, ಪೋಲೆಂಡ್ (ಪಿಟಿಐ): ಪಿಸ್ತೂಲ್‌ನ ಅಸಮರ್ಪಕ ಕಾರ್ಯನಿರ್ವಹಣೆಯ ನಡುವೆಯೂ ಮಿನುಗಿದ ಭಾರತದ ರಾಹಿ ಸರ್ನೋಬತ್ ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್ ಟೂರ್ನಿಯಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು.

ಮಂಗಳವಾರ ಮಹಿಳೆಯರ 25 ಮೀಟರ್ಸ್ ಪಿಸ್ತೂಲು ವಿಭಾಗದಲ್ಲಿ ಅವರಿಗೆ ಪದಕ ಒಲಿಯಿತು. ಫೈನಲ್‌ನಲ್ಲಿ ಅವರು 31 ಸ್ಕೋರ್ ದಾಖಲಿಸಿದರು.

ಪಿಸ್ತೂಲ್‌ನಲ್ಲಿ ಸಮಸ್ಯೆ ಕಂಡುಬರುವ ಮುನ್ನ ಅವರು ಫೈನಲ್ ತಲುಪುವ ಹಾದಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದರು.



ರಾಹಿ ಸರ್ನೋಬತ್

ಸ್ಪರ್ಧೆಯಲ್ಲಿ ಫೈನಲ್ ತಲುಪಿದ್ದ ಭಾರತದ ಇನ್ನೋರ್ವ ಶೂಟರ್ ಮನು ಭಾಕರ್ ಆರನೇ ಸ್ಥಾನ ಗಳಿಸಿದರು. ಜರ್ಮನಿಯ ವೆನ್ನೆಕ್ಯಾಂಪ್ 33 ಸ್ಕೋರ್‌ನೊಂದಿಗೆ ಚಿನ್ನದ ಪದಕ ಗೆದ್ದರೆ, ಫ್ರಾನ್ಸ್‌ನ ಮತಿಲ್ದೆ ಲ್ಯಾಮೊಲ್ಲೆ ಕಂಚು ತಮ್ಮದಾಗಿಸಿಕೊಂಡರು.

ಪಿಂಕ್ ಬಾಲ್ ಟೆಸ್ಟ್ ಪ್ರತಿಪಾದಕ ಕೀತ್ ಬ್ರಾಡ್‌ಶಾ ಇನ್ನಿಲ್ಲ

ಅಡಿಲೇಡ್(ಎಪಿ): ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್‌ನ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಪಿಂಕ್‌ಬಾಲ್ ಟೆಸ್ಟ್ ಪ್ರತಿಪಾದಕ ಕೀತ್ ಬ್ರಾಡ್‌ಶಾ (58) ನಿಧನರಾದರು.



ಬ್ರಾಡ್ ಶಾ

'ಕ್ರಿಕೆಟ್ ವಲಯದಲ್ಲಿ ಪ್ರೀತಿಪಾತ್ರರಾಗಿದ್ದ ಕೀತ್ ಬ್ರಾಡ್ ಶಾ ಇನ್ನಿಲ್ಲ' ಎಂದು ಮಂಗಳವಾರ ಕ್ರಿಕೆಟ್ ಆಸ್ಟ್ರೇಲಿಯಾ ಪ್ರಕಟಣೆಯಲ್ಲಿ ತಿಳಿಸಿದೆ. 1980ರಲ್ಲಿ ಅವರು ಆಸ್ಟ್ರೇಲಿಯಾದ ಟಾಸ್ಮೇನಿಯಾ ತಂಡದಲ್ಲಿ ಪ್ರಥಮ ದರ್ಜೆ ಕ್ರಿಕೆಟ್ ಆಡಿದ್ದರು. ನಂತರ ಇಂಗ್ಲೆಂಡ್‌ಗೆ ತೆರಳಿದ್ದರು. 2006ರಲ್ಲಿ ಎಂಸಿಸಿಗೆ ಪ್ರಥಮ ಬ್ರಿಟಿಷೇತರ ಸಿಇಒ ಆಗಿ ನೇಮಕವಾದರು. 2008ರಲ್ಲಿ ಅವರಿಗೆ ಮಲ್ಟಿಪಲ್ ಮೈಲೊಮಾ ಕಾಯಿಲೆ ಇರುವುದು ಪತ್ತೆಯಾಗಿತ್ತು.

ಸಿಬಿಎಸ್‌ಇ: ಅತ್ಯಾಧುನಿಕ ದತ್ತಾಂಶ ವಿಶ್ಲೇಷಣೆ ಬಳಕೆ

ನವದೆಹಲಿ (ಪಿಟಿಐ): ಯಾವುದೇ ಗೊಂದಲ, ಅಕ್ರಮಗಳಿಲ್ಲದೇ ನ್ಯಾಯಸಮ್ಮತವಾಗಿ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಅತ್ಯಾಧುನಿಕ ದತ್ತಾಂಶ ವಿಶ್ಲೇಷಣೆ ವಿಧಾನವನ್ನು ಅಳವಡಿಸಿಕೊಳ್ಳಲು ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮುಂದಾಗಿದೆ.

ಗೊಂದಲ, ಪರೀಕ್ಷಾ ಅಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಸಾಧ್ಯತೆ ಇರುವ ಪರೀಕ್ಷಾ ಕೇಂದ್ರಗಳಲ್ಲಿ ಈ ನೂತನ ವಿಶ್ಲೇಷಣಾ ವಿಧಾನ ಬಳಸಲು ಮಂಡಳಿ ನಿರ್ಧರಿಸಿದೆ.

'ಪರೀಕ್ಷೆಗಳನ್ನು ಪ್ರಮಾಣೀಕೃತ ಪದ್ಧತಿಯಂತೆ ಹಾಗೂ ನ್ಯಾಯಸಮ್ಮತವಾಗಿ ನಡೆಯಬೇಕು. ಅಕ್ರಮಗಳನ್ನು ತಡೆಯಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಾಗುವುದು. ಇದಕ್ಕಾಗಿ ಬಾಹ್ಯ ವೀಕ್ಷಕರು, ಫ್ಲೈಯಿಂಗ್ ಸ್ಕ್ವಾಡ್ಸ್ ನೇಮಕ ಮಾಡಲಾಗುವುದು. ಸಿ.ಸಿ.ಟಿವಿ ಗಳನ್ನು ಬಳಸಲಾಗುವುದು' ಎಂದು ಸಿಬಿಎಸ್‌ಇ ಐಟಿ ವಿಭಾಗದ ನಿರ್ದೇಶಕ ಅಂತರಿಕ್ಷ್ ಜೊಹ್ರಿ ಹೇಳಿದ್ದಾರೆ.

'ಕಳೆದ ಜನವರಿಯಲ್ಲಿ ನಡೆದ ಕೇಂದ್ರೀಯ ಶಿಕ್ಷಕರ ಅರ್ಹತಾ ಪರೀಕ್ಷೆಯ (ಸಿಟಿಇಟಿ) ದತ್ತಾಂಶಗಳನ್ನು ಬಳಸಿ ಪ್ರಾಯೋಗಿಕವಾಗಿ ವಿಶ್ಲೇಷಣೆ ನಡೆಸಲಾಗಿತ್ತು. ಸೆಂಟ್ರಲ್ ಸ್ಕ್ವೇರ್ ಫೌಂಡೇಷನ್ ಹಾಗೂ ಪ್ಲೇಪವರ್ ಲ್ಯಾಬ್ಸ್ ಈ ವಿಶ್ಲೇಷಣೆಗೆ ಬೇಕಾದ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದವು' ಎಂದು ತಿಳಿಸಿದರು.

ಹಡಗಿನಲ್ಲಿ ಡ್ರಗ್ಸ್ ಪ್ರಕರಣ: ಮಹಾರಾಷ್ಟ್ರ ರಾಜಕಾರಣಿಗಳ ಕೆಸರೆರಚಾಟ

'ಸಚಿವ ಮಲಿಕ್‌ಗೆ ಭೂಗತ ಲೋಕದ ನಂಟು'

ಪ್ರಜಾವಾಣಿ ವಾರ್ತೆ

ಮುಂಬೈ: 'ಮಹಾರಾಷ್ಟ್ರದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಅವರ ಕುಟುಂಬಕ್ಕೆ ಭೂಗತ ಲೋಕದ ನಂಟಿದೆ' ಎಂದು ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಮಂಗಳವಾರ ಗಂಭೀರ ಆರೋಪ ಮಾಡಿದ್ದಾರೆ.

ಮಲಿಕ್ ಕುಟುಂಬದವರು, ಭೂಗತ ಪಾತಕಿ ದಾವೂದ್ ಇಬ್ರಾಹಿಂ ನಂಟು ಇರುವ ಜನರಿಂದ ಮುಂಬೈನ ಕುರ್ಲಾದಲ್ಲಿ ಭೂಮಿ ಖರೀದಿಸಿದ್ದಾಗಿ ಅವರು ಆರೋಪಿಸಿದ್ದು, ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ.

ಸರ್ದಾರ್ ಶಾ ವಲಿ ಖಾನ್, ದಾವೂದ್ ಇಬ್ರಾಹಿಂನ ಸಹಚರ ಟೈಗರ್ ಮೆಮನ್ ಜೊತೆಗೆ ಸಂಪರ್ಕದಲ್ಲಿದ್ದವನು. ಸಲೀಂ ಇಷ್ಕ್ ಪಟೇಲ್ ಅಲಿಯಾಸ್ ಸಲೀಂ ಪಟೇಲ್, ದಾವೂದ್ ಇಬ್ರಾಹಿಂನ ಪರವಾಗಿ ಭೂಮಿಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ. ಇಂಥವರೊಂದಿಗೆ ಮಲಿಕ್ ಕುಟುಂಬದವರು ಭೂ ವ್ಯವಹಾರ ನಡೆಸಿದ್ದಾರೆ ಎಂದು ಫಡಣವೀಸ್ ಆರೋಪಿಸಿದ್ದಾರೆ.

'ಸಾಲಿಡಸ್ ಇನ್‌ವೆಸ್ಟ್‌ಮೆಂಟ್ ಪ್ರೈವೆಟ್ ಲಿಮಿಟೆಡ್ ಎಂಬುದು ನವಾಬ್ ಮಲಿಕ್ ಅವರ ಕಂಪನಿ. ಈ ಕಂಪನಿಯು ಅಪರಾಧಿಗಳಿಂದ ಭೂಮಿ ಖರೀದಿಸಿದೆ. ಕುರ್ಲಾದ ಎಲ್‌ಬಿಎಸ್ ರಸ್ತೆಯಲ್ಲಿ ಸುಮಾರು ₹3 ಕೋಟಿ ಮೌಲ್ಯದ ಸುಮಾರು 3 ಎಕರೆ ಭೂಮಿಯನ್ನು ಕೇವಲ ₹20 ಲಕ್ಷಕ್ಕೆ ಖರೀದಿಸಲಾಗಿದೆ' ಎಂದು ಫಡಣವೀಸ್ ಹೇಳಿದ್ದಾರೆ.

ಈ ದಾಖಲೆಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದಾಗಿ ಹೇಳಿರುವ ಅವರು, ಈ ಬಗ್ಗೆ ತನಿಖೆಗೆ ಆಗ್ರಹಿಸಿದ್ದಾರೆ.

ವಿಚಕ್ಷಣಾ ತಂಡದ ಎದುರು ಹಾಜರಾದ ಸೈಲ್: ಹಡಗಿನಲ್ಲಿ ಮಾದಕದ್ರವ್ಯ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾದಕ ವಸ್ತು ನಿಯಂತ್ರಣ ಸಂಸ್ಥೆಯ (ಎನ್‌ಸಿಬಿ) ದೆಹಲಿ ವಲಯದ ವಿಚಕ್ಷಣ ತಂಡದ ಎದುರು ಸಾಕ್ಷಿ ಪ್ರಭಾಕರ್ ಸೈಲ್ ಮಂಗಳವಾರವೂ ಹಾಜರಾದರು.

ಎನ್‌ಸಿಬಿ (ಉತ್ತರ ವಲಯ) ಉಪ ಮಹಾನಿರ್ದೇಶಕ ಗ್ಯಾನೇಶ್ವರ್ ಸಿಂಗ್ ನೇತೃತ್ವದ ದೆಹಲಿಯ ಎನ್‌ಸಿಬಿ ವಿಚಕ್ಷಣಾ ತಂಡ, ಪ್ರಭಾಕರ್ ಅವರನ್ನು ಸೋಮವಾರ ಹತ್ತು ಗಂಟೆಗಳ ಕಾಲ ವಿಚಾರಣೆಗೆ ಒಳಪಡಿಸಿತ್ತು. ಮಂಗಳವಾರ ಮತ್ತೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿತ್ತು.

ಮಲಿಕ್ ವಿರುದ್ಧ ದೂರು: ಸಚಿವ ನವಾಬ್ ಮಲಿಕ್ ಅವರು ತಮ್ಮ ಹಾಗೂ ಕುಟುಂಬದವರ ಬಗ್ಗೆ ಜಾತಿ ಹೆಸರಲ್ಲಿ ಸುಳ್ಳು ಮತ್ತು ಅವಹೇಳನಕಾರಿಯಾದ ಹೇಳಿಕೆ ನೀಡುತ್ತಿದ್ದಾರೆ ಎಂದು ಆರೋಪಿಸಿ, ಎನ್‌ಸಿಬಿಯ ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಅವರ ತಂದೆ ಧ್ಯಾನದೇವ್ ವಾಂಖೆಡೆ ಅವರು ಮಂಗಳವಾರ ದೂರು ನೀಡಿದ್ದಾರೆ.

'ನಾವು ಪರಿಶಿಷ್ಟ ಜಾತಿಯಡಿ ಬರುವ ಮಹಾರ್ ಸಮುದಾಯಕ್ಕೆ ಸೇರಿದವರು. ಸಚಿವ ಮಲಿಕ್, ನಮ್ಮ ಜಾತಿಯನ್ನು ನಿಂದಿಸಿದ್ದಾರೆ. ಹೀಗಾಗಿ, ಅವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಯ್ದೆ (ದೌರ್ಜನ್ಯ ತಡೆ) ಅಡಿ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿ ಧ್ಯಾನದೇವ್ ಅವರು ಸಹಾಯಕ ಪೊಲೀಸ್ ಆಯುಕ್ತರಿಗೆ ಲಿಖಿತ ದೂರು ನೀಡಿದ್ದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೋಸಾವಿಗೆ ನ್ಯಾಯಾಂಗ ಬಂಧನ

ಪುಣೆ: ವಂಚನೆ ಪ್ರಕರಣವೊಂದರಲ್ಲಿ ಬಂಧಿತನಾಗಿರುವ ಕಿರಣ್ ಗೋಸಾವಿಯನ್ನು, ಪುಣೆಯ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮಂಗಳವಾರ ಆದೇಶಿಸಿದೆ.

ಗೋಸಾವಿ, ಐಷಾರಾಮಿ ಹಡಗಿನಲ್ಲಿ ಮಾದಕ ವಸ್ತು ಪತ್ತೆ ಪ್ರಕರಣದಲ್ಲಿ ಎನ್‌ಸಿಬಿ ಸಾಕ್ಷಿ. ವಿದೇಶದಲ್ಲಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿ ವಂಚಿಸಿದ 2018ರ ಪ್ರಕರಣವೊಂದರಲ್ಲಿ ಈತನನ್ನು ಬಂಧಿಸಲಾಗಿದೆ. ನಗರದ ಕಂಟೋನ್ಮೆಂಟ್ ಹಾಗೂ ವನವಾಡಿ ಪೊಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ಇನ್ನೂ ಎರಡು ವಂಚನೆ ಪ್ರಕರಣಗಳು ದಾಖಲಾಗಿವೆ.

'ಹೈಡ್ರೋಜನ್ ಬಾಂಬ್' ಸಿಡಿಸುವೆ'

ಫಡಣವೀಸ್ ಆರೋಪವನ್ನು ತಳ್ಳಿಹಾಕಿರುವ ಸಚಿವ ಮಲಿಕ್, ಭೂ ವ್ಯವಹಾರಗಳೆಲ್ಲ ಪಾರದರ್ಶಕವಾಗಿಯೇ ನಡೆದಿರುವುದಾಗಿ ಹೇಳಿದ್ದಾರೆ. ಅಲ್ಲದೇ, ಭೂಗತ ಜಗತ್ತಿನೊಂದಿಗೆ ಫಡಣವೀಸ್ ನಂಟಿನ ಬಗ್ಗೆ ಬುಧವಾರ 'ಹೈಡ್ರೋಜನ್ ಬಾಂಬ್' ಸಿಡಿಸುವುದಾಗಿ ಹೇಳಿದ್ದಾರೆ.

'ಸರ್ದಾರ್ ಶಾ ವಲಿ ಖಾನ್, 1993ರ ಮುಂಬೈ ಸರಣಿ ಸ್ಫೋಟ ಪ್ರಕರಣದಲ್ಲಿ ಶಿಕ್ಷೆಗೀಡಾದವನು. ಅವನೊಂದಿಗೆ ನಮ್ಮ ಯಾವುದೇ ವ್ಯವಹಾರ ಇಲ್ಲ. ಇನ್ನು ಸಲೀಂ ಪಟೇಲ್ ವಿಚಾರವಾಗಿ ಬಂದರೆ, ಆತನೇ ಭೂಮಾಲೀಕರಿಂದ ಅಧಿಕೃತ ಪವರ್ ಆಫ್ ಅಟಾರ್ನಿ ಪಡೆದ ವ್ಯಕ್ತಿಯಾಗಿದ್ದ. ಹೀಗಾಗಿ, ಭೂಗತಲೋಕದವರಿಂದ ಜಮೀನು ಖರೀದಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದರು.

ಕ್ಷಮೆಯಾಚಿಸಿದ ಸಂಜಯ್ ನಿಶಾದ್

ಫತೇಹಪುರ/ಪ್ರಯಾಗರಾಜ್ (ಪಿಟಿಐ): ರಾಮನ ಕುರಿತು ತಾವು ನೀಡಿದ್ದ ಹೇಳಿಕೆ ವಿವಾದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ನಿಶಾದ್ ಪಾರ್ಟಿ ಮುಖ್ಯಸ್ಥ ಸಂಜಯ್ ನಿಶಾದ್ ಅವರು ಮಂಗಳವಾರ ಕ್ಷಮೆ ಯಾಚಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ನಿಶಾದ್ ಪಾರ್ಟಿಯು ಬಿಜೆಪಿಯ ಮಿತ್ರ ಪಕ್ಷವಾಗಿದೆ. ಹೀಗಾಗಿ ಸಂಜಯ್ ಅವರ ಹೇಳಿಕೆ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ಈ ಬಗ್ಗೆ ಬಿಜೆಪಿ ಪ್ರತಿಕ್ರಿಯೆ ನೀಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿದ್ದವು.

ಪ್ರಯಾಗರಾಜ್‌ನಲ್ಲಿ ಭಾನುವಾರ ಮಾತನಾಡಿದ್ದ ಅವರು, 'ರಾಜ ದಶರಥ ರಾಮನ ತಂದೆ ಅಲ್ಲ. ಶೃಂಗಿ ಋಷಿ ನಿಶಾದ್ ಅವರು ರಾಮನ ತಂದೆ' ಎಂದು ಹೇಳಿದ್ದರು. ಇದು ವಿವಾದಕ್ಕೆ ಕಾರಣವಾಗಿತ್ತು.

ಫತೇಹಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಜಯ್, 'ರಾಮ ದೇವರ ಬಗ್ಗೆ ಏನಾದರೂ ತಪ್ಪು ಮಾತನಾಡಿದ್ದರೆ, ನಾನು ಕ್ಷಮೆ ಯಾಚಿಸುತ್ತೇನೆ. ನಿಶಾದ್ ಸಮುದಾಯ ಶ್ರೀರಾಮನನ್ನು ಅತ್ಯಂತ ಪೂಜ್ಯಭಾವದಿಂದ ಆರಾಧಿಸುತ್ತದೆ' ಎಂದರು.



ಜಲಾಂತರ್ಗಾಮಿ ವೇಲಾ

ನೌಕಾಪಡೆಗೆ ಜಲಾಂತರ್ಗಾಮಿ 'ಐಎನ್‌ಎಸ್ ವೇಲಾ' ಹಸ್ತಾಂತರ

ಮುಂಬೈ: ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್ (ಎಂಡಿಎಲ್) ನಿರ್ಮಿತ 'ಸ್ಕಾರ್ಪಿಯಾನ್' ಸರಣಿಯ ನಾಲ್ಕನೇ ಜಲಾಂತರ್ಗಾಮಿ 'ಐಎನ್‌ಎಸ್ ವೇಲಾ'ವನ್ನು ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಗಿದೆ.

'ಪ್ರಾಜೆಕ್ಟ್ ಪಿ–75'ಅಡಿ ನಿರ್ಮಿಸಲಾಗಿರುವ ಈ ಜಲಾಂತರ್ಗಾಮಿ ಕಾರ್ಯಾಚರಣೆಗೆ ಶೀಘ್ರವೇ ಚಾಲನೆ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಮಹತ್ವಾಕಾಂಕ್ಷೆಯ 'ಆತ್ಮನಿರ್ಭರ ಭಾರತ' ಹಾಗೂ 'ಮೇಕ್ ಇನ್ ಇಂಡಿಯಾ' ಯೋಜನೆಗಳಡಿ ಈ ಜಲಾಂತರ್ಗಾಮಿಗಳನ್ನು ನಿರ್ಮಿಸಲಾಗುತ್ತಿದೆ.

'ವೇಲಾ' ಹಸ್ತಾಂತರದ ಮೂಲಕ ನೌಕಾಪಡೆಯ ಅಗತ್ಯಗಳಿಗೆ ತಕ್ಕಂತೆ ಹಡಗುಕಟ್ಟೆಗಳ ನಿರ್ಮಾಣ ಹಾಗೂ ಜಲಾಂತರ್ಗಾಮಿಗಳ ಅಭಿವೃದ್ಧಿಯಲ್ಲಿ ಎಂಡಿಎಲ್ ತನ್ನ ಸಾಮರ್ಥ್ಯ– ವೃತ್ತಿಪರತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈಗಾಗಲೇ ಐಎನ್‌ಎಸ್ ಕಲ್ವರಿ, ಐಎನ್‌ಎಸ್ ಖಂಡೇರಿ ಹಾಗೂ ಐಎನ್‌ಎಸ್ ಕಾರಂಜ್ ಜಲಾಂತರ್ಗಾಮಿಗಳನ್ನು ನೌಕಾಪಡೆಗೆ ಹಸ್ತಾಂತರಿಸಲಾಗಿದೆ. ಇದರೊಂದಿಗೆ ಅತ್ಯಾಧುನಿಕ ಜಲಾಂತರ್ಗಾಮಿಗಳನ್ನು ನಿರ್ಮಿಸುವ ದೇಶಗಳ ಸಾಲಿಗೆ ಭಾರತವೂ ಸೇರಿದಂತಾಗಿದೆ.

ಐದನೇ ಜಲಾಂತರ್ಗಾಮಿ ಐಎನ್‌ಎಸ್ ವಾಗಿರ್ ಇದೇ ಡಿಸೆಂಬರ್‌ಗೆ ಕಾರ್ಯಾಚರಣೆ ಆರಂಭಿಸುವ ನಿರೀಕ್ಷೆ ಇದೆ. ಆರನೇ ಜಲಾಂತರ್ಗಾಮಿ 'ಐಎನ್‌ಎಸ್ ವಾಗ್ಶೀರ್' ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿದೆ ಎಂದು ಮೂಲಗಳು ತಿಳಿಸಿವೆ.

'ಲಸಿಕೆ ಪಡೆಯದಿದ್ದರೆ ವೇತನ ಇಲ್ಲ'

ಠಾಣೆ (ಪಿಟಿಐ): ಒಂದು ಡೋಸ್ ಲಸಿಕೆಯನ್ನೂ ಪಡೆಯದ ನೌಕರರಿಗೆ ವೇತನ ನೀಡುವುದಿಲ್ಲ ಎಂದು ಮಹಾರಾಷ್ಟ್ರದ ಠಾಣೆ ಮಹಾನಗರ ಪಾಲಿಕೆ (ಟಿಎಂಸಿ) ತಿಳಿಸಿದೆ.

ಪಾಲಿಕೆ ಆಯುಕ್ತ ಡಾ.ವಿಪಿನ್ ಶರ್ಮಾ ಮತ್ತು ಮೇಯರ್ ನರೇಶ್ ಮಹಾಸ್ಕೆ ಸೇರಿದಂತೆ ಸೋಮವಾರ ನಡೆದ ಪಾಲಿಕೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಕೋವಿಡ್ ಲಸಿಕೆಯ ಮೊದಲನೇ ಡೋಸ್ ಪಡೆಯದ ಪಾಲಿಕೆಯ ಉದ್ಯೋಗಿಗಳಿಗೆ ವೇತನ ನೀಡುವುದಿಲ್ಲ ಎಂದು ಸೋಮವಾರ ತಡರಾತ್ರಿ ಹೊರಡಿಸಿದ ಅಧಿಕೃತ ಹೇಳಿಕೆಯೊಂದು ತಿಳಿಸಿದೆ.

ನಿಗದಿಪಡಿಸಿದ ಸಮಯದಲ್ಲಿ ಲಸಿಕೆಯ ಎರಡನೇ ಡೋಸ್ ಪಡೆಯದವರಿಗೂ ಸಂಬಳ ಸಿಗುವುದಿಲ್ಲ. ಲಸಿಕೆ ಪಡೆದಾಗ ನೀಡಿರುವ ಪ್ರಮಾಣಪತ್ರಗಳನ್ನು ಅವರ ಕಚೇರಿಗೆ ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

'ಅನರ್ಹತೆ ನಿರ್ಧಾರವನ್ನು ರಾಜ್ಯಪಾಲರು ಬಾಕಿ ಇಡುವಂತಿಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಲಾಭದಾಯಕ ಹುದ್ದೆ ಹೊಂದಿದ ಆರೋಪದಲ್ಲಿ ಮಣಿಪುರದ 12 ಬಿಜೆಪಿ ಶಾಸಕರ ಅನರ್ಹತೆ ಬಗ್ಗೆ ರಾಜ್ಯಪಾಲರು ವಿಳಂಬ ಮಾಡದೇ ತಮ್ಮ ನಿರ್ಧಾರವನ್ನು ಪ್ರಕಟಿಸಬೇಕು ಎಂಬ ವಾದವನ್ನು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿದೆ.

ಸಂಸದೀಯ ಕಾರ್ಯದರ್ಶಿ ಹುದ್ದೆಯಲ್ಲಿರುವ ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಕೋರಿ ಮಣಿಪುರದ ಕಾಂಗ್ರೆಸ್ ಶಾಸಕ ಡಿ.ಡಿ. ಥಾಯ್ಸಿ ಅವರು ಸಲ್ಲಿಸಿರುವ ಅರ್ಜಿಯನ್ನು ಕೋರ್ಟ್ ವಿಚಾರಣೆ ನಡೆಸಿತು. ನ್ಯಾಯಮೂರ್ತಿ ಎಲ್. ನಾಗೇಶ್ವರ ರಾವ್ ನೇತೃತ್ವದ ಪೀಠದ ಎದುರು ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ರಾಜ್ಯಪಾಲರು ತಮ್ಮ ನಿರ್ಧಾರವನ್ನು ಬಾಕಿ ಉಳಿಸುವಂತಿಲ್ಲ ಎಂದರು. ಅವಧಿ ಮುಗಿಯಲು ಕೇವಲ ಒಂದು ತಿಂಗಳು ಉಳಿದಿದ್ದು, ಅಷ್ಟರೊಳಗೆ ಎಲ್ಲವೂ ಮುಗಿಯಲಿದೆ ಎಂದು ತಿಳಿಸಿದರು.

'ರಾಜ್ಯಪಾಲರು ನಿರ್ಧಾರ ತೆಗೆದುಕೊಳ್ಳದೇ ಇರುವಂತಿಲ್ಲ' ಎಂಬ ವಾದವನ್ನು ಪೀಠ ಒಪ್ಪಿತು. ರಾಜೀವ್ ಗಾಂಧಿ ಹಂತಕರ ಪ್ರಕರಣವನ್ನು ಉಲ್ಲೇಖಿಸಿದ ನ್ಯಾಯಾಲಯ, ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ರಾಜ್ಯಪಾಲರ ಮೇಲೆ ಒತ್ತಡ ಹೇರಿದ ಉದಾಹರಣೆಗಳಿವೆ ಎಂದಿತು.

ಶಾಸಕರ ಅನರ್ಹತೆ ಕುರಿತು ಚುನಾವಣಾ ಆಯೋಗ ಮಾಡಿರುವ ಶಿಫಾರಸುಗಳನ್ನು ರಾಜ್ಯಪಾಲರು ಅನುಸರಿಸಬೇಕು ಎಂದು ಹಿರಿಯ ವಕೀಲ ರಾಜೀವ್ ಧವನ್ ಹೇಳಿದರು. ಪ್ರಕರಣ ಕುರಿತಂತೆ ರಾಜ್ಯಪಾಲರ ಕಾರ್ಯದರ್ಶಿಗೆ ಕೋರ್ಟ್ ನೋಟಿಸ್ ನೀಡಿ, ಮುಂದಿನ ವಿಚಾರಣೆಯನ್ನು ನವೆಂಬರ್ 11ಕ್ಕೆ ನಿಗದಿಪಡಿಸಿತು.

ಟ್ವಿಟರ್: ಪ್ರಭಾವಿ ವ್ಯಕ್ತಿಗಳಲ್ಲಿ ಮೋದಿ, ತೆಂಡೂಲ್ಕರ್



ಮೋದಿ

ಮುಂಬೈ (ಪಿಟಿಐ): ಟ್ವಿಟರ್‌ನಲ್ಲಿ ಈ ವರ್ಷದ 50 ಅತ್ಯಂತ ಪ್ರಭಾವಿ ವ್ಯಕ್ತಿಗಳ ಸಾಲಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಎರಡನೇ ಸ್ಥಾನದಲ್ಲಿದ್ದಾರೆ ಎಂದು ಬ್ರಾಂಡ್‌ವಾಚ್ ಕಂಪನಿ ತಿಳಿಸಿದೆ. ಮಾಜಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ಅವರು 35ನೇ ಸ್ಥಾನ ಪಡೆದಿದ್ದಾರೆ.

ಅಮೆರಿಕದ ಗಾಯಕಿ ಟೇಲರ್ ಸ್ವಿಫ್ಟ್ ಅವರು ಮೊದಲ ಸ್ಥಾನದಲ್ಲಿದ್ದಾರೆ. ಸಿನಿಮಾ ನಟರಾದ ಡ್ವೇನ್ ಜಾನ್ಸನ್ ಹಾಗೂ ಲಿಯೊನಾರ್ಡೊ ಡಿಕ್ಯಾಪ್ರಿಯೊ ಮತ್ತು ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರ ಪತ್ನಿ ಮಿಶೆಲ್ ಒಬಾಮ ಅವರೂ ಸಹ ಪ್ರಭಾವಿ ವ್ಯಕ್ತಿಗಳ ಸಾಲಿನಲ್ಲಿದ್ದಾರೆ.

ಬೆಳಗಾವಿ: ಅತ್ಯಾಚಾರ, ಕೊಲೆ ಪ್ರಕರಣ – ಗಲ್ಲು ರದ್ದು

ಸಂತ್ರಸ್ತೆಯ ವಯಸ್ಸು ಕಡಿಮೆ ಎಂಬುದು ಸಮರ್ಪಕ ಆಧಾರವಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಲ್ಲಿ ಅಪರಾಧಿಗೆ ಮರಣ ದಂಡನೆ ವಿಧಿಸಲು ಸಂತ್ರಸ್ತೆಯ ವಯಸ್ಸು ಮಾತ್ರವೇ ಅಥವಾ ಅದೇ ತೃಪ್ತಿಕರ ಅಂಶ ಎಂದು ಸೆಷನ್ಸ್ ನ್ಯಾಯಾಲಯ ಪರಿಗಣಿಸಿಲ್ಲ' ಎಂದು ಸುಪ್ರೀಂಕೋರ್ಟ್ ಹೇಳಿದೆ.

ಬಾಲಕಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಕರ್ನಾಟಕದ ಬೆಳಗಾವಿ ಜಿಲ್ಲೆ ಖಾನಾಪುರದ ಈರಪ್ಪ ಸಿದ್ದಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿತು.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್, ಸಂಜೀವ್ ಖನ್ನಾ ಹಾಗೂ ಬಿ.ಆರ್.ಗವಾಯಿ ಅವರಿರುವ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.



ಸುಪ್ರೀಂಕೋರ್ಟ್

ಈರಪ್ಪ ಸಿದ್ದಪ್ಪಗೆ ವಿಧಿಸಿದ್ದ ಮರಣ ದಂಡನೆಯನ್ನು ರದ್ದು ಮಾಡಿದ ನ್ಯಾಯಪೀಠ, 30 ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿತು. ಅಪರಾಧಿಗೆ ವಿಧಿಸಿರುವ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಲು ಸಾಕಷ್ಟು ಅಂಶಗಳಿವೆ ಎಂದು ಹೇಳಿದ ನ್ಯಾಯಪೀಠ, ಯಾವುದೇ ಕಾರಣಕ್ಕೂ ಅಪರಾಧಿಯನ್ನು ಅವಧಿಗೆ ಮುನ್ನವೇ ಬಿಡುಗಡೆ ಮಾಡಬಾರದು ಎಂದು ಸೂಚಿಸಿತು.

2010ರಲ್ಲಿ ಈರಪ್ಪ ಸಿದ್ದಪ್ಪ 5 ವರ್ಷದ ಬಾಲಕಿಯನ್ನು ಅಪಹರಣ ಮಾಡಿ, ಅತ್ಯಾಚಾರ ಎಸಗಿದ್ದಲ್ಲದೇ, ಬಾಲಕಿಯನ್ನು ಕೊಲೆ ಮಾಡಿದ್ದ. ನಂತರ, ಶವವನ್ನು ಚೀಲವೊಂದರಲ್ಲಿ ಕಟ್ಟಿ, ನದಿಗೆ ಎಸೆದಿದ್ದ.

ಪ್ರಕರಣದ ವಿಚಾರಣೆ ನಡೆಸಿದ್ದ ಸೆಷನ್ಸ್ ಕೋರ್ಟ್ ಈರಪ್ಪಗೆ ಮರಣ ದಂಡನೆ ವಿಧಿಸಿತ್ತು. ಸೆಷನ್ಸ್ ಕೋರ್ಟ್ ವಿಧಿಸಿದ್ದ ಶಿಕ್ಷೆಯನ್ನು ಕಾಯಂಗೊಳಿಸಿ ಕರ್ನಾಟಕ ಹೈಕೋರ್ಟ್ 2017ರ ಮಾರ್ಚ್ 6ರಂದು ತೀರ್ಪು ನೀಡಿತ್ತು.

ಮೆಟ್ಟೂರು ಜಲಾಶಯ: ನೀರು ಹೊರಕ್ಕೆ


ಚೆನ್ನೈ: ಕಾವೇರಿ ಜಲಾಯನ ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ, ತಮಿಳುನಾಡಿನ ಮೆಟ್ಟೂರು ಜಲಾಶಯವು ಬಹುತೇಕ ಭರ್ತಿಯಾಗಿದೆ. ಹೀಗಾಗಿ ಜಲಾಶಯದಿಂದ ಈಗ ನೀರನ್ನು ಹೊರಬಿಡಲಾಗಿದೆ. ತಮಿಳುನಾಡಿನಲ್ಲಿ ಕಾವೇರಿ ನದಿ ಹರಿದುಹೋಗುವ 11 ಜಿಲ್ಲೆಗಳ ನದಿ ದಡದ ಗ್ರಾಮಗಳಲ್ಲಿ ಪ್ರವಾಹದ ಎಚ್ಚರಿಕೆ ನೀಡಲಾಗಿದೆ.

ಮೆಟ್ಟೂರು ಜಲಾಶಯವು 120 ಅಡಿ ಎತ್ತರವಿದೆ. ಮಂಗಳವಾರ ಜಲಾಶಯದಲ್ಲಿ 119 ಅಡಿಯಷ್ಟು ನೀರು ಸಂಗ್ರಹವಾಗಿತ್ತು. ಈಗ ಜಲಾಶಯದಲ್ಲಿ ಒಟ್ಟು 91.883 ಟಿಎಂಸಿ ನೀರು ಸಂಗ್ರಹವಾಗಿದೆ. ಇಷ್ಟೇ ಪ್ರಮಾಣದ ನೀರನ್ನು ಕಾಯ್ದುಕೊಳ್ಳಲಾಗುತ್ತದೆ. ಜಲಾಶಯಕ್ಕೆ 19,290 ಕ್ಯುಸೆಕ್ ಹರಿದುಬರುತ್ತಿದ್ದು, 20,150 ಕ್ಯುಸೆಕ್ ನೀರನ್ನು ಹೊರಬಿಡಲಾಗುತ್ತಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಬುಧವಾರ ಮತ್ತು ಗುರುವಾರವೂ ಭಾರಿ ಮಳೆಯಾಗುವ ನಿರೀಕ್ಷೆ ಇದೆ.

ನ್ಯೂಜಿಲೆಂಡ್ ಎದುರಿನ ಟಿ20 ಸರಣಿಗೆ ಕೆ.ಎಲ್. ರಾಹುಲ್ ಉಪನಾಯಕ

ರೋಹಿತ್ ನಾಯಕತ್ವದ ಇನಿಂಗ್ಸ್


ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

ನವದೆಹಲಿ (ಪಿಟಿಐ): ನಿರೀಕ್ಷೆಯಂತೆಯೇ ಭಾರತ ಟಿ20 ಕ್ರಿಕೆಟ್ ತಂಡದ ನಾಯಕರಾಗಿ 'ಹಿಟ್‌ಮ್ಯಾನ್' ಖ್ಯಾತಿಯ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅವರನ್ನು ನೇಮಕ ಮಾಡಲಾಗಿದೆ.

ಇದೇ 17 ರಿಂದ ಭಾರತದಲ್ಲಿ ನಡೆಯಲಿರುವ ನ್ಯೂಜಿಲೆಂಡ್ ವಿರುದ್ಧದ ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಅವರು ತಂಡವನ್ನು ಮುನ್ನಡೆಸಲಿದ್ದಾರೆ. ಕನ್ನಡಿಗ ಕೆ.ಎಲ್. ರಾಹುಲ್ ಅವರನ್ನು ಉಪನಾಯಕರನ್ನಾಗಿ ಮಾಡಲಾಗಿದೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಂತರ ವಿರಾಟ್ ಕೊಹ್ಲಿ ಭಾರತ ಟಿ20 ತಂಡದ ನಾಯಕತ್ವವನ್ನು ಬಿಟ್ಟುಕೊಟ್ಟಿದ್ದಾರೆ. ಈ ಕುರಿತು ಅವರು ಟೂರ್ನಿಗೂ ಮುನ್ನವೇ ಘೋಷಿಸಿದ್ದರು. ಕಿವೀಸ್ ಎದುರಿನ ಟಿ20 ಸರಣಿಯಿಂದ ವಿರಾಟ್ ವಿಶ್ರಾಂತಿ ಪಡೆದಿದ್ದಾರೆ.

ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಸ್ಪಿನ್ನರ್ ರವೀಂದ್ರ ಜಡೇಜ ಅವರಿಗೂ ವಿಶ್ರಾಂತಿ ನೀಡಲಾಗಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಕೈಬಿಡಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಈಚೆಗೆ ಐಪಿಎಲ್‌ನಲ್ಲಿ ಮಿಂಚಿದ್ದ ಯುವ ಆಟಗಾರರಾದ ಋತುರಾಜ್ ಗಾಯಕವಾಡ್, ಹರ್ಷಲ್ ಪಟೇಲ್, ವೆಂಕಟೇಶ್ ಅಯ್ಯರ್ ಅವರನ್ನು 16 ಆಟಗಾರರ ತಂಡಕ್ಕೆ ಆಯ್ಕೆ ಮಾಡಲಾಗಿದೆ. ಅನುಭವಿ ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ ತಂಡಕ್ಕೆ ಮರಳಿದ್ದಾರೆ. ಮುಂಬೈ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಕೂಡ ಅವಕಾಶ ಗಿಟ್ಟಿಸಿದ್ದಾರೆ.

'ರೋಹಿತ್ ವಿಶ್ರಾಂತಿ ಪಡೆದರೆ ರಾಹುಲ್ ತಂಡವನ್ನು ಹಂಗಾಮಿ ನಾಯಕನಾಗಿ ಮುನ್ನಡೆಸುವರು.


ಕೆ.ಎಲ್. ರಾಹುಲ್

ವಿರಾಟ್ ಕೊಹ್ಲಿಯವರನ್ನು ಏಕದಿನ ಕ್ರಿಕೆಟ್ ತಂಡದ ನಾಯಕರನ್ನಾಗಿ ಉಳಿಸಿಕೊಳ್ಳುವುದು ಅನುಮಾನವಾಗಿದೆ. ಮಂಡಳಿಯು ಈ ಕುರಿತು ಗಂಭೀರವಾಗಿ ಚಿಂತನೆ ನಡೆಸುತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತ ಟಿ20 ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್ (ಉಪನಾಯಕ), ಋತುರಾಜ್ ಗಾಯಕವಾಡ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಅಕ್ಷರ್ ಪಟೇಲ್, ಆವೇಶ್ ಖಾನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್.

ಪ್ರೀಕ್ವಾರ್ಟರ್‌ಫೈನಲ್‌ಗೆ ಕರ್ನಾಟಕ

ಗುವಾಹಟಿ: ಮನೀಷ್ ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಪ್ರೀಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿತು.

ಮಂಗಳವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಕರ್ನಾಟಕದ ವಿರುದ್ಧ 7 ವಿಕೆಟ್‌ಗಳಿಂದ ಜಯಿಸಿದ ಬಂಗಾಳ ತಂಡವು ನೇರ ಕ್ವಾರ್ಟರ್‌ಫೈನಲ್ ಪ್ರವೇಶಿಸಿತು. ಗುಂಪಿನಲ್ಲಿ ಮೊದಲ 4 ಪಂದ್ಯಗಳನ್ನು ಜಯಿಸಿದ್ದ ಕರ್ನಾಟಕ ತಂಡವು ಕೊನೆಯ ಹಣಾ ಹಣಿಯಲ್ಲಿ ಮುಗ್ಗರಿಸಿತು. ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಸೌರಾಷ್ಟ್ರವನ್ನು ಎದುರಿಸಲಿದೆ.

ಗುವಾಹಟಿಯ ನೆಹರು ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಬಂಗಾಳ ತಂಡದ ಮುಕೇಶ್ ಕುಮಾರ್ (33ಕ್ಕೆ3) ಮತ್ತು ಪ್ರದಿಪ್ತ ಪ್ರಾಮಾಣಿಕ್ (33ಕ್ಕೆ2) ಅವರ ಶಿಸ್ತಿನ ಬೌಲಿಂಗ್ ಮುಂದೆ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 134 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಅದಕ್ಕುತ್ತರವಾಗಿ ಬಂಗಾಳ 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 138 ರನ್ ಗಳಿಸಿತು.

ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್ ವಿಕೆಟ್‌ಗಳನ್ನು ಮೊದಲ ಓವರ್‌ನಲ್ಲಿಯೇ ಗಳಿಸಿದ ಮುಕೇಶ್, ದೊಡ್ಡ ಹೊಡೆತ ಕೊಟ್ಟರು. ನಾಯಕ ಮನೀಷ್ ಪಾಂಡೆ (32; 27ಎಸೆತ, 3ಬೌಂಡರಿ, 1ಸಿಕ್ಸರ್) ಮತ್ತು ಕರುಣ್ ನಾಯರ್ (44; 44ಎ, 5ಬೌಂಡರಿ) ಮೂರನೇ ವಿಕೆಟ್ ಜೊತೆಯಾಟದಲ್ಲಿ 61 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡ ತುಸು ಚೇತರಿಸಿಕೊಂಡಿತು.

ಆದರೆ, 10ನೇ ಓವರ್‌ನಲ್ಲಿ ಮನೀಷ್ ವಿಕೆಟ್ ಗಳಿಸಿದ ಶಹಬಾಜ್ ಅಹಮದ್ ಜೊತೆಯಾಟ ಮುರಿದರು. ಕರುಣ್ ಜೊತೆಗೂಡಿದ ಅನಿರುದ್ಧ ಜೋಶಿ (12 ರನ್) ತಂಡದ ಮೊತ್ತವು 100ರ ಗಡಿ ದಾಟುವಂತೆ ನೋಡಿಕೊಂಡರು. ಆದರೆ 16ನೇ ಓವರ್‌ನಲ್ಲಿ ಕರುಣ್ ನಾಯರ್ ಮತ್ತು ಜೋಶಿಯ ವಿಕೆಟ್‌ಗಳನ್ನು ಗಳಿಸಿ ಪ್ರದೀಪ್ತ ಪ್ರಾಮಾಣಿಕ್ ಕರ್ನಾಟಕದ ದೊಡ್ಡ ಮೊತ್ತದ ಆಸೆಗೆ ಅಡ್ಡಗಾಲು ಹಾಕಿದರು. ಗುರಿ ಬೆನ್ನಟ್ಟಿದ ಬಂಗಾಳ ತಂಡದ ನಾಯಕ ಅಭಿಮನ್ಯು ಈಶ್ವರನ್ (ಅಜೇಯ 51; 49ಎ, 4ಬೌಂಡರಿ, 1ಸಿಕ್ಸರ್) ಸುಂದರ ಬ್ಯಾಟಿಂಗ್ ಮಾಡಿದರು. ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 134 (ಮನೀಷ್ ಪಾಂಡೆ 32, ಕರುಣ್ ನಾಯರ್ 44, ಅನಿರುದ್ಧ ಜೋಶಿ 12,, ಮುಖೇಶ ಕುಮಾರ್ 33ಕ್ಕೆ3, ಪ್ರದೀಪ್ತ ಪ್ರಾಮಾಣಿಕ್ 33ಕ್ಕೆ2, ಶಹಬಾಜ್ ಅಹಮದ್ 15ಕ್ಕೆ1, ಆಕಾಶ್ ದೀಪ್ 19ಕ್ಕೆ1) ಬಂಗಾಳ: 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 138 (ಅಭಿಮನ್ಯು ಈಶ್ವರನ್ ಔಟಾಗದೆ 51, ರಿತಿಕ್ ಚಟರ್ಜಿ 18, ವೃದ್ಧಿಮಾನ್ ಸಹಾ 27, ಕೈಫ್ ಅಹಮದ್ ಔಟಾಗದೆ 34, ಪ್ರಸಿದ್ಧ ಕೃಷ್ಣ 36ಕ್ಕೆ1, ಜೆ. ಸುಚಿತ್ 34ಕ್ಕೆ1, ಫಲಿತಾಂಶ: ಬಂಗಾಳಕ್ಕೆ 7 ವಿಕೆಟ್ ಜಯ.

ಎಲೀಟ್ 'ಬಿ' ಗುಂಪಿನ ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಪಾಯಿಂಟ್ಸ್
ಬಂಗಾಳ	5	4	1	16
ಕರ್ನಾಟಕ	5	4	1	16
ಮುಂಬೈ	5	3	2	12
ಛತ್ತೀಸಗಡ	5	2	3	8
ಬರೋಡಾ	5	1	4	4
ಸರ್ವಿಸಸ್	5	1	4	4

*ಮಂಗಳವಾರದ ಪಂದ್ಯಗಳ ಅಂತ್ಯಕ್ಕೆ


ಕರುಣ್ ನಾಯರ್

ನ. 16ರಂದು ಪ್ರೀಕ್ವಾರ್ಟರ್‌ಫೈನಲ್

ಪಂದ್ಯ	ಸ್ಥಳ	ಸಮಯ
ಮಹಾರಾಷ್ಟ್ರ–ವಿದರ್ಭ	ಅರುಣ ಜೇಟ್ಲಿ ಕ್ರೀಡಾಂಗಣ ದೆಹಲಿ	ಬೆಳಿಗ್ಗೆ 8
ಹಿಮಾಚಲಪ್ರದೇಶ–ಕೇರಳ	ಪಾಲಂ ಎ ಕ್ರೀಡಾಂಗಣ, ದೆಹಲಿ	ಮಧ್ಯಾಹ್ನ 12
ಕರ್ನಾಟಕ–ಸೌರಾಷ್ಟ್ರ	ಅರುಣ ಜೇಟ್ಲಿ ಕ್ರೀಡಾಂಗಣ ದೆಹಲಿ	ಮಧ್ಯಾಹ್ನ 1

- ನ 18ರಂದು ಕ್ವಾರ್ಟರ್‌ಫೈನಲ್ ಪಂದ್ಯಗಳು ನಡೆಯಲಿವೆ
- ತಮಿಳುನಾಡು, ರಾಜಸ್ಥಾನ, ಬಂಗಾಳ, ಗುಜರಾತ್ ಮತ್ತು ಹೈದರಾಬಾದ್ ತಂಡಗಳು ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ.
- ಪ್ರೀಕ್ವಾರ್ಟರ್‌ನಲ್ಲಿ ಗೆದ್ದ ಮೂರು ತಂಡಗಳು ಎಂಟರ ಘಟ್ಟಕ್ಕೆ ಪ್ರವೇಶಿಸಲಿವೆ.


ನವದೆಹಲಿಯಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಎಕ್ಸಾನ್ ಮೊಬಿಲ್ ಕಂಪನಿಯು ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತರಾದ ಅಥ್ಲೀಟ್ ನೀರಜ್ ಚೋಪ್ರಾ, ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಮತ್ತು ಕುಸ್ತಿಪಟು ಬಜರಂಗ್ ಪೂನಿಯಾ ಅವರೊಂದಿಗಿನ ಪ್ರಚಾರ ರಾಯಭಾರಿ ಒಪ್ಪಂದವನ್ನು ನವೀಕರಿಸಿತು. ಈ ವೇಳೆ ಕಂಪನಿಯ ಎಕ್ಸಾನ್‌ಮೊಬಿಲ್ ಲೂಬ್ರಿಕೆಂಟ್ಸ್‌ನ ಕಾರ್ಯನಿರ್ವಹಣಾಧಿಕಾರಿ ದೀಪಂಕರ್ ಬ್ಯಾನರ್ಜಿ ಮತ್ತು ಮಾರ್ಕೆಟಿಂಗ್ ವಿಭಾಗದ ಪ್ರಧಾನ ವ್ಯವಸ್ಥಾಪಕ ಇಮ್ತಿಯಾಜ್ ಅಹ್ಮದ್ ಇದ್ದರು.

ಮಿತ್ರಾಭ ಭಾರತದ ಗ್ರ್ಯಾಂಡ್‌ಮಾಸ್ಟರ್

ಚೆನ್ನೈ (ಪಿಟಿಐ): ಕೋಲ್ಕತ್ತದ ಮಿತ್ರಾಭ ಗುಹಾ ಅವರು ಭಾರತದ 72ನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ. ಸರ್ಬಿಯಾದಲ್ಲಿ ನಡೆದ ಚೆಸ್ ಟೂರ್ನಿಯಲ್ಲಿ ಅಗತ್ಯವಿದ್ದ ಮೂರನೇ ಮತ್ತು ಅಂತಿಮ ನಾರ್ಮ್‌ಅನ್ನು ಅವರು ಪೂರ್ಣಗೊಳಿಸಿದರು.


ಮಿತ್ರಾಭ

ಟೂರ್ನಿಯ ಒಂಬತ್ತನೇ ಸುತ್ತಿನಲ್ಲಿ ಸೋಮವಾರ ಅವರು ಸರ್ಬಿಯಾದ ಗ್ರ್ಯಾಂಡ್ ಮಾಸ್ಟರ್ ನಿಕೋಲಾ ಸೆಡ್ಲಾಕ್ ಅವರನ್ನು ಭಾರತದ ಆಟಗಾರ ಸೋಲಿಸಿದರು. ಸದ್ಯ ಅವರು ಆರು ಗೆಲುವು, ಎರಡು ಡ್ರಾ ಮತ್ತು ಏಳನೇ ಸುತ್ತಿನಲ್ಲಿ ಸೋತಿದ್ದರು.

ಮೈಸೂರು ರೇಸ್

ಗೋಲ್ಡ್ ಫೀಲ್ಡ್ ಗೆಲ್ಲುವ ನಿರೀಕ್ಷೆ

ಫೇಮ್ ಆ್ಯಂಡ್ ಗ್ಲೋರಿ ಪ್ಲೇಟ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೋಲ್ಡ್ ಫೀಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಇನ್‌ಫಿನಿಟಪಾಸಿಬಿಲಿಟಿ 4, ಟ್ರೇಸರ್ ಬುಲೆಟ್ 8, ರೈನ್ ಕ್ಲೌಡ್ 3
2ನೇ ರೇಸ್: ಲಕಿ ಲೂಸಿ 2, ವುಡ್ ಕಟರ್ 12, ಮಾಂಟೆ ಗ್ರೆಕೊ 4
3ನೇ ರೇಸ್: ಸ್ಯಾನ್ ವಿಟೊ 6, ಫ್ರಾಸ್ಟೆಡ್ 5, ರಾಯಲ್ ಡಿಸೈನ್ 2
4ನೇ ರೇಸ್: ಡೀಮಸ್ 2, ಸೂಪರ್‌ಬ್ರೈಟ್ 4, ಗುಡ್ ಒಪಿನಿಯನ್ 1
5ನೇ ರೇಸ್: ವಿಂಡ್ ವಿಸ್ಲರ್ 8, ಸ್ಪೋರ್ಟೋರ್ 2, ಆಕ್ಟೇವಿಯಸ್ 4
6ನೇ ರೇಸ್: ಗೋಲ್‌ಡ್‌ಫೀಲ್ಡ್ 1, ಲಾರ್ಡ್ ಕಮಾಂಡರ್ 5, ಸೀ ಲಾಗೂನ್ 8
7ನೇ ರೇಸ್: ವಾಲ್‌ಕೈರಿ 6, ಕಂಟ್ರೇಸ್ ಫೇಮ್ 8, ಡಿ ನಕ್ಷತ್ರ 4

ಉತ್ತಮ ಬೆಟ್: ಡೀಮಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಫುಟ್‌ಬಾಲ್: ಬ್ರೆಜಿಲ್ ಎದುರು ಭಾರತ ಮಹಿಳಾ ತಂಡ ಕಣಕ್ಕೆ

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಯ ಪೂರ್ವಸಿದ್ಧತೆಯ ಭಾಗವಾಗಿ ಈ ತಿಂಗಳಾಂತ್ಯದಲ್ಲಿ ನಡೆಯುವ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಭಾರತ ಮಹಿಳಾ ಫುಟ್‌ಬಾಲ್ ತಂಡವು ಮೊದಲ ಬಾರಿಗೆ ವಿಶ್ವಕಪ್ ಮಾಜಿ ರನ್ನರ್ ಅಪ್ ಬ್ರೆಜಿಲ್ ವಿರುದ್ಧ ಸೆಣಸಲಿದೆ.

ಈ ಟೂರ್ನಿಯಲ್ಲಿ ಫಿಫಾ ರ‍್ಯಾಂಕಿಂಗ್‌ನಲ್ಲಿ 57ನೇ ಸ್ಥಾನದಲ್ಲಿರುವ ಭಾರತ ತಂಡವು, 37ನೇ ಸ್ಥಾನದಲ್ಲಿರುವ ಚಿಲಿ ಮತ್ತು ವೆನೆಜುವೆಲಾ (56ನೇ) ತಂಡಗಳನ್ನೂ ಎದುರಿಸಲಿದೆ. ನವೆಂಬರ್ 25ರಿಂದ ಡಿಸೆಂಬರ್ 1 ರವರೆಗೆ ಬ್ರೆಜಿಲ್‌ನ ಮನೌಸ್‌ನಲ್ಲಿ ಟೂರ್ನಿಯು ನಿಗದಿಯಾಗಿದೆ.

ಬ್ರೆಜಿಲ್ ಮಹಿಳಾ ತಂಡವು 2007ರ ವಿಶ್ವಕಪ್ ರನ್ನರ್-ಅಪ್ ಮತ್ತು 2004 ಮತ್ತು 2008ರಲ್ಲಿ ಒಲಿಂಪಿಕ್ಸ್ ಬೆಳ್ಳಿ ಪದಕ ಗೆದ್ದುಕೊಂಡಿತ್ತು. ವಿಶ್ವ ಕ್ರಮಾಂಕದಲ್ಲಿ ಬ್ರೆಜಿಲ್ ಏಳನೇ ಸ್ಥಾನದಲ್ಲಿದೆ.


ಜವಾಹರ್ ಯೂನಿಯನ್ ಎಫ್‌ಸಿಯ ಯಶವಂತ್ ಎಚ್‌.ಓ ಹಾಗೂ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡದ ನೋಯಲ್ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ/ಬಿ.ಎಚ್‌.ಶಿವಕುಮಾರ್

ಫುಟ್‌ಬಾಲ್: ಮಿತೆಯ್ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲಂಗಬಮ್ ಟಂಡನ್ ಮಿತೆಯ್ ಅವರು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವು ಬಿಡಿಎಫ್‌ಎ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಎಎಸ್‌ಸಿ ಸೆಂಟರ್ 6–0 ಗೋಲುಗಳಿಂದ ಎಡಿಇ ಎಫ್‌ಸಿ ತಂಡವನ್ನು ಸೋಲಿಸಿತು. ವಿಜೇತ ತಂಡದ ಮಿತೆಯ್ 39, 41 ಮತ್ತು 53ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಲಾಯಿಶ್ರಾಮ್ ಪ್ರೇಮ್‌ಕುಮಾರ್ (58ನೇ ಮತ್ತು 65ನೇ ನಿ.) ಎರಡು ಗೋಲು ಗಳಿಸಿದರೆ, ಸರೋಜ್ ರಾಯ್ ಒಂದು ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) ತಂಡವು 4–0ಯಿಂದ ಬೆಂಗಳೂರು ಈಗಲ್ಸ್ ಎಫ್‌ಸಿ ಎದುರು ಜಯಿಸಿತು. ಎಫ್‌ಸಿಬಿಯು ಪರ ಲೂಕಾ ಮಾಜೆನ್ (2ನೇ ಮತ್ತು 3ನೇ ನಿಮಿಷ), ರೊನಾಲ್ಡೊ ಅಗಸ್ಟೊ ಅಂಟೊನಿಯೊ (16ನೇ ನಿ.) ಮತ್ತು ಬತ್ಸ್‌ಖೆಮ್ಲಾಂಗ್ ತಂಗ್‌ಖೆವ್ (81ನೇ ನಿ.) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಜವಾಹರ್ ಯೂನಿಯನ್ ಎಫ್‌ಸಿ 2–1ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ವಿರುದ್ಧ ಗೆದ್ದಿತು. ವಿಜೇತ ತಂಡದ ಪರ ಸೈಯದ್ ಶಿಯಾಸ್ (69ನೇ ನಿ.) ಶಿಯಾದುಲ್ ಅಸ್ಕರ್ (81ನೇ ನಿ.) ಕಾಲ್ಚಳಕ ತೋರಿದರು. ಇಂಡಿಪೆಂಡೆಂಟ್ಸ್ ತಂಡದ ಕವಿಯರಸನ್ (24ನೇ ನಿಮಿಷ) ಯಶಸ್ವಿಯಾದರು.